26 February 2026 Thursday | SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 106 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಅನಗತ್ಯವಾದ ವಾದವನ್ನು ನಿಲ್ಲಿಸಿದರೆ ಅವಶ್ಯಕವಾದ ನೆಮ್ಮದಿ ಜೀವನದಲ್ಲಿ ನೆಲೆಸುತ್ತದೆ!

-ಸ್ನೇಹಾ ಆನಂದ್



2.96 ಕೋಟಿ ಚಿನ್ನಾಭರಣ ಹಸ್ತಾಂತರ: 6ತಿಂಗಳಲ್ಲಿ 105 ಕಳವು ಪ್ರಕರಣ ಪತ್ತೆ — ಪುಟ ಸಂ. 2



ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು ತುರ್ತು ಕ್ರಮ ವಹಿಸಿ — ಪುಟ ಸಂ. 3



ಕರ್ನಾಟಕ ಮಾದರ ಮಹಾಸಭಾದಿಂದ ಸಮುದಾಯಕ್ಕೆ ಅನುಕೂಲ — ಪುಟ ಸಂ. 4

**ಡಾ.ರಾಜಕುಮಾರ್ ಅಪಹರಣ ಪ್ರಕರಣ**

## 9 ಮಂದಿ ಖುಲಾಸೆಗೊಳಿಸಿದ ಹೈಕೋರ್ಟ್

**ಚೆನ್ನೈ:** ಕನ್ನಡದ ಖ್ಯಾತ ನಟ ಡಾ.ರಾಜಕುಮಾರ್ ಅಪಹರಣ ಪ್ರಕರಣದಲ್ಲಿ 9 ಜನರನ್ನು ಖುಲಾಸೆ ಗೊಳಿಸಿರುವುದನ್ನು ಮದ್ರಾಸ್ ಹೈಕೋರ್ಟ್ ಎತ್ತಿಹಿಡಿದಿದೆ. ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ತಾಳವಾಡಿ ಪೊಲೀಸರು ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.



ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ವೇಲ್ಮುರುಗನ್ ಮತ್ತು ಎಂ. ಜ್ಯೋತಿರಾಮನ್ ಅವರಿದ್ದ ದ್ವಿಸದಸ್ಯ ಪೀಠ ಈ ಆದೇಶ ಹೊರಡಿಸಿದೆ. 26 ವರ್ಷದ ಹಿಂದೆ ಈರೋಡ್ ಜಿಲ್ಲೆಯ ತಾಳವಾಡಿ ಬಳಿ ತೋಟದ ಮನೆಯಲ್ಲಿ ತಂಗಿದ್ದ ರಾಜ್‌ಕುಮಾರ್ ಅವರನ್ನು ವೀರಪ್ಪನ್ ಮತ್ತು ಆತನ ಸಹಚರರು ಅಪಹರಿಸಿ ಒತ್ತೆಯಾಳಾಗಿ ಇಟ್ಟುಕೊಂಡಿದ್ದರು. 108 ದಿನಗಳ ನಂತರ ಬಿಡುಗಡೆ ಮಾಡಿದ್ದರು.

ಈ ಪ್ರಕರಣದಲ್ಲಿ ವೀರಪ್ಪನ್ ಮತ್ತು ಸಹಚರರಾದ ಸೇತುಕುಳಿ ಗೋವಿಂದನ್, ಚಂದ್ರಗೌಡ, ಮಲ್ಲು, ರಮೇಶ್, ಗೋವಿಂದರಾಜ್, ಆಂಡ್ರಿಲ್, ಪಸುವಣ್ಣ, ಪುಟ್ಟುಸ್ವಾಮಿ, ಕಲ್ಮಂಡಿ ರಾಮನ್, ಮಾರನ್, ಸೆಲ್ವನ್, ಅಮೃತಲಿಂಗಂ ಮತ್ತು ನಾಗರಾಜ್ ವಿರುದ್ಧ ತಾಳವಾಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ಪ್ರಕರಣ ಸಂಬಂಧ ದೋಷಾರೋಪಪಟ್ಟಿ ಸಲ್ಲಿಸುವ ಮೊದಲೇ ವೀರಪ್ಪನ್ ಮತ್ತು ಆತನ ಸಹಚರರಾದ ಸೇತುಕುಳಿ ಗೋವಿಂದನ್, ಚಂದ್ರಗೌಡ ಪೊಲೀಸ್ ಎನ್‌ಕೌಂಟರ್‌ನಲ್ಲಿ ಹತ್ಯೆಯಾಗಿದ್ದರು. ಮತ್ತೊಬ್ಬ ಆರೋಪಿ ಮಲ್ಲು ಪ್ರಕರಣದ ವಿಚಾರಣೆ ಪುಟ 2ಕ್ಕೆ

# ಸಚಿವ ಸ್ಥಾನ: ಎಂಎಲ್ಸಿಗಳ ಸರದಿ

### ಹೊಸ ಶಾಸಕರ ನಂತರ 24 ಪರಿಷತ್ ಸದಸ್ಯರಿಂದ ಖರ್ಗೆಗೆ ಮನವಿ ಪತ್ರ

**ಬೆಂಗಳೂರು:** ರಾಜ್ಯ ಕಾಂಗ್ರೆಸ್‌ನಲ್ಲೀಗ ಮತ್ತೊಂದು ಕುತೂಹಲಕಾರಿ ಬೆಳವಣಿಗೆ ನಡೆದಿದೆ. ಸಚಿವ ಸಂಪುಟ ಪುನಾರಚನೆಗೆ 31 ಶಾಸಕರು ಒತ್ತಾಯ ಮಾಡಿ ಹೈಕಮಾಂಡ್ ನಾಯಕರಿಗೆ ಪತ್ರ ಬರೆದ್ದರು. ತಮಗೂ ಸಚಿವ ಸ್ಥಾನ ನೀಡುವಂತೆ ಕೋರಿದ್ದರು. ಇದರ ಬೆನ್ನಲ್ಲೇ 24 ಮಂದಿ ವಿಧಾನ ಪರಿಷತ್ ಸದಸ್ಯರೂ ಸಚಿವ ಸ್ಥಾನಕ್ಕಾಗಿ ಕಾಂಗ್ರೆಸ್ ಹೈಕಮಾಂಡ್‌ಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿರುವ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯರು, ನಮಗೂ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂದು ಮನವಿ ಮಾಡಿದ್ದಾರೆ. ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡುವಂತೆ 24 ಎಂಎಲ್‌ಸಿಗಳು ಸಹಿ ಮಾಡಿದ ಪತ್ರವನ್ನು ಖರ್ಗೆ ಅವರಿಗೆ ಸಲ್ಲಿಸಿದ್ದಾರೆ. ಅಲ್ಲದೆ, ಈ ಬಗ್ಗೆ ಹೈಕಮಾಂಡ್ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಸಚಿವ ಸಂಪುಟದಲ್ಲಿ ಎಂಎಲ್‌ಸಿಗಳಿಗೆ ಪ್ರಾತಿನಿಧ್ಯ ಇಲ್ಲದಿರುವುದರಿಂದ ಅಸಮಾನತೆ, ನಿರುತ್ಸಾಹ ಭಾವನೆ ಉಂಟುಮಾಡುತ್ತದೆ. ಇದು ಎಂಎಲ್‌ಸಿಗಳಿಗೆ ರಾಜಕೀಯ ನಿರೀಕ್ಷೆಗಳಿಲ್ಲ ಎಂಬ ಗ್ರಹಿಕೆಗೆ ಕಾರಣ ಆಗಿದೆ. ಸಮರ್ಥ ನಾಯಕರು ಎಂಎಲ್‌ಸಿ ಚುನಾವಣೆಗಳಲ್ಲಿ ಸ್ಪರ್ಧಿಸುವ ಬದಲು ವಿಧಾನಸಭಾ ಟಿಕೆಟ್‌ಗಳನ್ನ ಪಡೆಯಲು ಮುಂದಾಗ್ತಾರೆ. ನಂತರ ಇದು ಗುಂಪುಗಾರಿಕೆಗೆ ಕಾರಣವಾಗುತ್ತದೆ. ಪಕ್ಷದ ಸಂಘಟನೆಯನ್ನು ದುರ್ಬಲಗೊಳಿಸುತ್ತದೆ. ಎಲ್ಲಾ ಎಂಎಲ್‌ಸಿಗಳು ಪಕ್ಷದ ಸಂಘಟನೆಯನ್ನು ಬಲಪಡಿಸುವಲ್ಲಿ ಆಳವಾಗಿ ತಮ್ಮನ್ನ ತೊಡಗಿಸಿಕೊಂಡಿದ್ದಾರೆ. ಆದ್ದರಿಂದ ವಿಧಾನ ಪರಿಷತ್ತಿನ ಕನಿಷ್ಠ 5 ಸದಸ್ಯರನ್ನ ಸಚಿವ ಸಂಪುಟದಲ್ಲಿ ಸೇರಿಸಬೇಕು ಎಂದು ಒತ್ತಾಯಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಒಬ್ಬರು, ಪದವೀಧರ ಅಥವಾ ಶಿಕ್ಷಕರ ಕ್ಷೇತ್ರಗಳಿಂದ ಒಬ್ಬರು, ಕೆಳಮನೆ ಅಥವಾ ಪುಟ 2ಕ್ಕೆ



### ಹೊಸ ಶಾಸಕರಿಗೆ ಸಚಿವ ಸ್ಥಾನ ಕೊಡಲಾಗಲ್ಲ: ಸಿದ್ದು

**ಬೆಂಗಳೂರು:** ಮೊದಲ ಬಾರಿಗೆ ಶಾಸಕರಿಗೆ ಆಯ್ಕೆ ಆಗಿರುವವರಿಗೆ ಸಚಿವ ಸ್ಥಾನ ನೀಡಲು ಸಾಧ್ಯವಿಲ್ಲ. ಹಲವು ಹಿರಿಯರು ಇರುವುದರಿಂದ ಹೊಸ ಶಾಸಕರಿಗೆ ಸಚಿವ ಸ್ಥಾನ ನೀಡಬಾರದು ಎಂದು ತೀರ್ಮಾನ ಮಾಡ ಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.




ನಗರದಲ್ಲಿ ಬುಧವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಶಾಸಕರು ಸಚಿವ ಸ್ಥಾನ ಕೇಳುವುದು ತಪ್ಪಲ್ಲ. ಎಲ್ಲರಿಗೂ ಸಚಿವರಾಗಬೇಕು ಎಂಬ ಆಸೆ ಇರುತ್ತದೆ. ಆದರೆ ಕಾಂಗ್ರೆಸ್‌ನಲ್ಲಿ 140 ಶಾಸಕರು ಇರುವುದರಿಂದ ಹೊಸಬರಿಗೆ ಸಚಿವ ಸ್ಥಾನ ನೀಡಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಒಳಮೀಸಲಾತಿ ಮಸೂದೆಗೆ ರಾಜ್ಯಪಾಲರು ಸಹಿ ಮಾಡಿಲ್ಲದ ಕಾರಣ ಜಾರಿ ವಿಳಂಬವಾಗಿದೆ. ಮಸೂದೆ ಜಾರಿಯಾದ ನಂತರ ಹಂತಹಂತವಾಗಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಹಿಂದಿನ ಬಿಜೆಪಿ ಸರ್ಕಾರ ಯಾವುದೇ ಹುದ್ದೆಯನ್ನು ಭರ್ತಿ ಮಾಡಿರಲಿಲ್ಲ.

# ಸರ್ಕಾರಕ್ಕೆ ಗ್ಯಾರಂಟಿ ಹೊರೆ!

### * ಆದರೂ, ನಿಮಗೆ ಶಕ್ತಿ ತುಂಬಲು ಯತ್ನ: ಡಿಕೆಶಿ ವಿಷಾದ

**ಬೆಂಗಳೂರು:** ನಾವು ಜಾರಿಗೆ ತಂದಿರುವ ಪಂಚ ಗ್ಯಾರಂಟಿಗಳು ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುತ್ತಿವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೊನೆಗೂ ಸತ್ಯವನ್ನು ಬಹಿರಂಗಪಡಿಸಿದ್ದಾರೆ.



ನಗರದಲ್ಲಿ ಆರೋಗ್ಯ ಇಲಾಖೆಯಿಂದ ಬುಧವಾರ ಹಮ್ಮಿಕೊಂಡಿದ್ದ ಹಿಮೋಫಿಲಿಯಾ ರೋಗಿಗಳಿಗೆ ಉಚಿತ ಆಂಬುಲೆನ್ಸ್ ಸೇವೆ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಎಲ್ಲರಿಗೂ 200 ಯೂನಿಟ್ ಉಚಿತ ವಿದ್ಯುತ್, ಮಹಿಳೆಯರಿಗೆ ಮಾಸಿಕ 2 ಸಾವಿರ ನೀಡುವ ಗೃಹಲಕ್ಷ್ಮಿ, ಮಹಿಳೆಯರಿಗೆ ಫ್ರೀ ಬಸ್, ಅನ್ನಭಾಗ್ಯ, ಮತ್ತಿತರ ಯೋಜನೆಯಂತಹ ಗ್ಯಾರಂಟಿಗಳನ್ನು ರಾಜ್ಯ ಸರ್ಕಾರ ಕೊಟ್ಟಿದೆ. ಸರ್ಕಾರಕ್ಕೆ ಇದರಿಂದ ನಿರೀಕ್ಷೆಗಿಂತ ಹೆಚ್ಚ ಹೊರೆಯಾಗುತ್ತಿದೆ ಎಂದು ತಿಳಿಸಿದರು.

ಆದರೆ ನಿಮಗೆ ಮಾನಸಿಕವಾಗಿ ಧೈರ್ಯ ತುಂಬಲು ಹಾಗೂ ಆರ್ಥಿಕವಾಗಿ ಶಕ್ತಿ ತುಂಬಲು ಇಂತಹ ದೊಡ್ಡ ತೀರ್ಮಾನವನ್ನ ನಮ್ಮ ಸರ್ಕಾರ ಮಾಡಿದೆ. ಜೇಬಲ್ಲಿ 10 ರೂಪಾಯಿ ಇದ್ರೆ ಕೊಡೋನು 100 ರೂಪಾಯಿ ಕೊಡೋಕೆ ಮುಂದೆ ಬರ್ತಾನೆ. ಆದ್ದರಿಂದ ಸರ್ಕಾರಕ್ಕೆ ಹೊರೆಯಾದರೂ ಗ್ಯಾರಂಟಿಗಳನ್ನ ಜಾರಿಗೊಳಿಸಿದೆ ಎಂದು ಹೇಳಿದರು. ಆದರೆ, ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವ ಬಗ್ಗೆ ಅವರು ಪ್ರಸ್ತಾಪ ಮಾಡಲಿಲ್ಲ. ಪುಟ 2ಕ್ಕೆ

## ರೈಸ್ ಪುಲ್ಲಿಂಗ್ ದಂಧೆ: 98 ಲಕ್ಷ ರೂ. ವಂಚನೆ


**ಮೈಸೂರು:** ರೈಸ್ ಪುಲ್ಲಿಂಗ್ ಚೊಂಬು ನೀಡುವುದಾಗಿ 98 ಲಕ್ಷ ವಂಚನೆ ಮಾಡಿದ್ದಾರೆಂದು ಆರೋಪಿಸಿ ಪಿ. ಎಂ.ಜಗದೀಶ್ ಎಂಬುವರು ನಗರದ ಶಿವಕುಮಾರ್, ಮಧು, ಬೆಂಗಳೂರಿನ ಇಕ್ಬಾಲ್, ಮಂಗಳೂರಿನ ರಫೀಕ್ ಹಾಗೂ ಚೆನ್ನೈ ಮೂಲದ ಹಂಜಾ ಪಿಲ್ಯಾಲಾಲ್ ವಿರುದ್ಧ ನಜರ್‌ಬಾದ್ ಠಾಣೆಯಲ್ಲಿ ದೂರು ನೀಡಿದ್ದಾರೆ. ವಂಚನೆ ಪ್ರಕರಣ ದಾಖಲಾಗಿದೆ. ಶಿವಕುಮಾರ್ ಮತ್ತಿತರರು ನನ್ನ ಬಳಿ ರೈಸ್ ಪುಲ್ಲಿಂಗ್ ಆರ್ಟಿಕಲ್ ಇದೆ. ಅದನ್ನು ಕೋಟ್ಯಂತರ ರೂಪಾಯಿಗೆ ಮಾರಾಟ ಮಾಡಿ ಹಣ ಹಂಚಿಕೊಳ್ಳಬಹುದು ಎಂದು ನಂಬಿಸಿದ್ದರು. ಚೆನ್ನೈನ ಕಂಪನಿಯೊಂದು ಅದನ್ನು ಖರೀದಿಸಲು ಬಂದಿದೆ, ಮಾರಾಟಕ್ಕೆ ಆರಂಭದಲ್ಲಿ ಖರ್ಚಿಗೆ ಹಣ ಬೇಕು ಎಂದು ನನ್ನಿಂದ ಹಣ ಪಡೆದು ವಂಚಿಸಿದ್ದಾರೆ ಎಂದು ಜಗದೀಶ್ ದೂರಿನಲ್ಲಿ ತಿಳಿಸಿದ್ದಾರೆ.

# ಮಂಡ್ಯ: 1,844 ಅಕ್ರಮ ಇ-ಖಾತೆ ನಾಲ್ವರು ಅಧಿಕಾರಿಗಳ ಅಮಾನತು

### * ಇಂಡುವಾಳು ಗ್ರಾಪಂನಲ್ಲಿ ಅವ್ಯವಹಾರ: ತನಿಖೆಗೆ ಉಪಲೋಕಾಯುಕ್ತರ ಆದೇಶ

**ಮಂಡ್ಯ:** ಮಂಡ್ಯ ಜಿಲ್ಲೆಯ ಇಂಡುವಾಳು ಗ್ರಾಮ ಪಂಚಾಯಿತಿಯಲ್ಲಿ 1,844 ಇ-ಖಾತಾಗಳನ್ನು ನಿಯಮಬಾಹಿರವಾಗಿ ವಿತರಿಸಿದ್ದ ಮೂವರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಒಗಳು) ಮತ್ತು ಎರಡನೇ ವಿಭಾಗದ ಸಹಾಯಕ ಸೇರಿದಂತೆ ನಾಲ್ವರು ಅಧಿಕಾರಿಗಳನ್ನು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಅಮಾನತು ಮಾಡಿದ್ದಾರೆ.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ ವೀರಪ್ಪ ಅವರು ನೀಡಿದ ಆದೇಶದ ಆಧಾರದ ಮೇಲೆ ಈ ಕ್ರಮಕೈಗೊಳ್ಳಲಾಗಿದೆ. ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಈಗ ಕೆಲಸ ಮಾಡುತ್ತಿರುವ ಮೂವರು ಪಿಡಿಒಗಳಾದ ಎ.ಎಸ್ ಸಿದ್ದರಾಜು, ದಯಾನಂದ ಮತ್ತು




ಎಸ್.ಮರಿಲಿಂಗಯ್ಯ ಹಾಗೂ ದ್ವಿತೀಯ ದರ್ಜೆ ಲೆಕ್ಕಸಹಾಯಕಿ ರಾಣಿ ಎಚ್.ಆರ್ ಅವರನ್ನು ಅಮಾನತು ಮಾಡಲಾಗಿದೆ. ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದೆ. ಪುಟ 2ಕ್ಕೆ

### ತಹಶೀಲ್ದಾರ್, ತಾಪಂ ಇಒ ನಿರ್ಲಕ್ಷ್ಯ: ತನಿಖೆಗೆ ಸೂಚನೆ

ಮಂಡ್ಯ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಿಇಒ ಕೂಡ 12 ಅಕ್ರಮ ಖಾತಾಗಳ ರದ್ದತಿ ಬಗ್ಗೆ ವರದಿ ಮಾಡಿಲ್ಲ. ಪಂಚಾಯತ್ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಆ ನಿಟ್ಟಿನಲ್ಲಿ ಯಾವುದೇ ಕ್ರಮಕೈಗೊಳ್ಳದೆ ಕಣ್ಣುಮುಚ್ಚಿಕೊಂಡಿದ್ದಾರೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಸೆಕ್ಷನ್ 232 ರ ಅಡಿಯಲ್ಲಿ ಮಂಡ್ಯ ಪುಟ 2ಕ್ಕೆ

# ನಾನು ಸಮರ್ಥನೆಂದು ಎಷ್ಟು ಬಾರಿ ಸಾಬೀತು ಮಾಡಬೇಕು?: ಪರಂ ಪ್ರಶ್ನೆ


**ಬೆಂಗಳೂರು:** ನಾನು ಎರಡು ಬಾರಿ ಕಾಂಗ್ರೆಸ್ ಪಕ್ಷವನ್ನ ಅಧಿಕಾರಕ್ಕೆ ತಂದಿದ್ದೇನೆ. ಉಪಮುಖ್ಯಮಂತ್ರಿ ಆಗಿದ್ದೇನೆ. ಸಾಮರ್ಥ್ಯ ಇಲ್ಲದೇ ಇದ್ದರೆ ಡಿಸಿಎಂ ಮಾಡ್ತಾರಾ? ನನ್ನ ಸಾಮರ್ಥ್ಯದ ವಿಷಯದಲ್ಲಿ ಯಾರು ಪ್ರಶ್ನೆ ಮಾಡುವಂತಿಲ್ಲ ಎಂದು ಗೃಹ ಸಚಿವ ಪರಮೇಶ್ವರ್ ಅವರು ವಿರೋಧಿಗಳಿಗೆ ತಿರುಗೇಟು ನೀಡಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಅಧಿಕಾರ ಹಂಚಿಕೆ ವಿಚಾದಲ್ಲಿ ಮಾಜಿ ಸಚಿವ ಕೆ.ಎನ್ ರಾಜಣ್ಣ ಹೇಳಿಕೆಗೆ ಪ್ರತಿಕ್ರಿಯೆ ನೀಡಿದರು. ನಾನು ಸಮರ್ಥ ಅಂತಾ ಎಷ್ಟು ಬಾರಿ ಸಾಬೀತು ಮಾಡಬೇಕು? ಐದು ವರ್ಷ ಕೆಪಿಸಿಸಿ ಅಧ್ಯಕ್ಷನಾಗಿದ್ದೆ. ಸಾಮಥ್ಯ ಇಲ್ಲದೇ ಕೆಲಸ ಮಾಡಿದ್ದೇನಾ? ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ವಿಚಾರ ಸಾರ್ವಜನಿಕವಾಗಿ ಹಾದಿ ಬೀದಿಯಲ್ಲಿ ಚರ್ಚೆ ಮಾಡೋದಲ್ಲ. ಅದು ಏನಿದ್ದರೂ ಹೈಕಮಾಂಡ್ ಜೊತೆ ಕ್ಲೋಸ್ ಡೋರಿನಲ್ಲಿ ಚರ್ಚೆ ಮಾಡಬೇಕು. ಇಲ್ಲ ಅಂದರೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಅಭಿಪ್ರಾಯ ಮಂಡಿಸಬೇಕು. ನಂತರದಲ್ಲಿ ಸಾಧಕಬಾಧಕಗಳ ಬಗ್ಗೆ ಚರ್ಚೆ ಆಗಲಿದೆ ಎಂದು ಹೇಳಿದರು. ಪುಟ 2ಕ್ಕೆ

### ಒಳಮೀಸಲಾತಿ ಜಾರಿಯಿಂದ ವಿಳಂಬ

ಧಾರವಾಡದಲ್ಲಿ ನಡೆದ ಉದ್ಯೋಗ ಆಕಾಂಕ್ಷಿಗಳ ಪ್ರತಿಭಟನೆ ವಿಚಾರವಾಗಿ ಮಾತನಾಡಿದ ಸಚಿವ ಪರಮೇಶ್ವರ್ ಅವರು, ಬಿಜೆಪಿ ಅಧಿಕಾರದಲ್ಲಿದ್ದಾಗ ಎಷ್ಟು ಉದ್ಯೋಗ ಕೊಟ್ಟಿದ್ದರು? ಒಳಮೀಸಲಾತಿ ಜಾರಿ ಬಳಿಕ ನೇಮಕಾತಿ ಮಾಡಲು ತಯಾರಿ ಮಾಡಿಕೊಂಡಿದ್ದೇವೆ. ಒಳಮೀಸಲಾತಿ ಮಸೂದೆಗೆ ರಾಜ್ಯಪಾಲರು ಅಂತಿಮ ಅಂಕಿತ ಹಾಕಿಲ್ಲ. ಹೀಗಾಗಿ ತಡವಾಗುತ್ತಿದೆ. ಆದಾದ ನಂತರ ನಾವು ನೇಮಕಾತಿ ಪ್ರಕ್ರಿಯೆ ಆರಂಭಿಸುತ್ತೇವೆ ಎಂದು ಹೇಳಿದರು. ರಾಜ್ಯದ ಪೊಲೀಸ್ ಠಾಣೆಗಳಲ್ಲಿ ಸಬ್ ಇನ್ಸಪೆಕ್ಟರ್‌ಗಳೇ ಇಲ್ಲ ಪುಟ 2ಕ್ಕೆ



## ಉದ್ಯೋಗಕ್ಕಾಗಿ ಹೋರಾಟ: ದೇವೇಗೌಡ ಬೆಂಬಲಕ್ಕೆ ಮನವಿ

**ಬೆಂಗಳೂರು:** ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳಿಂದ ಪ್ರತಿಭಟನೆ ನಡೆದ ಬೆನ್ನಲ್ಲೇ ಮಾಜಿ ಪ್ರಧಾನಿ ದೇವೇಗೌಡ ಅವರನ್ನು ಬುಧವಾರ ಭೇಟಿ ಮಾಡಿರುವ ಉದ್ಯೋಗಾಕಾಂಕ್ಷಿಗಳು ಮನವಿ ಸಲ್ಲಿಸಿ ಬೆಂಬಲ ಕೋರಿದರು.



ನಗರದ ಜೆಪಿ ಭವನದಲ್ಲಿ ದೇವೇಗೌಡರನ್ನು ಭೇಟಿಯಾದ ಉದ್ಯೋಗಾಕಾಂಕ್ಷಿಗಳು ಹೋರಾಟಕ್ಕೆ ಬೆಂಬಲ ಕೊಡುವಂತೆ ಕೋರಿದರು. ದೇವೇಗೌಡ ಭೇಟಿ ಬಳಿಕ ಮಾತಾಡಿದ ಉದ್ಯೋಗಾಕಾಂಕ್ಷಿ ಲಕ್ಷ್ಮಿಕಾಂತ್, ಸರ್ಕಾರ ಪ್ರತಿ ವರ್ಷ 1 ಲಕ್ಷ ಹುದ್ದೆ ಸೃಷ್ಟಿ ಮಾಡ್ತೇವೆ ಎಂದು ಹೇಳಿತ್ತು. ಆದರೆ ಹುದ್ದೆಗಳ ಸೃಷ್ಟಿಸುವ ಕೆಲಸ ಮಾಡಿಲ್ಲ. ಸುಳ್ಳು ಆಶ್ವಾಸನೆ ಯಾಕೆ ಕೊಡ್ತೀರಾ? ಕಳೆದ ಒಂದು ವರ್ಷದಿಂದ ಎಲ್ಲಾ ಕಡೆ ಹೋರಾಟ ಮಾಡ್ತಿದ್ದೇವೆ. ಆದರೆ ಸರ್ಕಾರ ಕಿಂಚಿತ್ತು ಕಾಳಜಿ ವಹಿಸುತ್ತಿಲ್ಲ. ಬೇರೆ ಬೇರೆ ದೇಶಗಳಲ್ಲಿ ಹೋರಾಟ ಆಗ್ತಿದೆ. ಅದೇ ರೀತಿ ಕರ್ನಾಟಕದಲ್ಲಿ ಆಗಬಾರದು. ವರ್ಷಕ್ಕೆ ಲಕ್ಷ ಹುದ್ದೆ ಸೃಷ್ಟಿ ಮಾಡಬೇಕು. ಇಲ್ಲವಾದರೆ ಕರ್ನಾಟಕದಲ್ಲಿ ರಕ್ತಕ್ರಾಂತಿ ಆಗುತ್ತದೆ ಎಚ್ಚರಿಕೆ ನೀಡಿದರು.

ಸರ್ಕಾರ ನಿರ್ಲಕ್ಷ್ಯ ವಹಿಸದೆ ಹುದ್ದೆಗಳ ನೇಮಕ ಮಾಡಬೇಕು. ನಾವು ದೇವೇಗೌಡರನ್ನು ಭೇಟಿಯಾಗಿ ಮನವಿ ಮಾಡಿದ್ದೇವೆ. ದೇವೇಗೌಡರು ನಮಗೆ ಬೆಂಬಲ ಕೊಟ್ಟಿದ್ದಾರೆ. ಪುಟ 2ಕ್ಕೆ

## ಹಣ್ಣುಗಳಿಗೆ ಇಲಿ ವಿಷ ಸವರಿದ ವ್ಯಾಪಾರಿ ಬಂಧನ

**ಮುಂಬೈ:** ಮುಂಬೈನ ಮಾಲಾಡ್ ಪ್ರದೇಶದಲ್ಲಿ ವ್ಯಾಪಾರಿಯೊಬ್ಬ ನಡುರಸ್ತೆಯಲ್ಲೇ ಹಣ್ಣುಗಳಿಗೆ ರಾಟೋಲ್ ಎಂಬ ಇಲಿ ಪಾಷಾಣವನ್ನು ಸವರುತ್ತಿದ್ದ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿದೆ. ಈ ಕೃತ್ಯವನ್ನು ಗಮನಿಸಿದ ಸಾರ್ವಜನಿಕರು ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.



ವ್ಯಾಪಾರಿಯು ತನ್ನ ಹಣ್ಣಿನ ತಳ್ಳುಗಾಡಿಯ ಮೇಲೆ ಹಣ್ಣುಗಳನ್ನು ಜೋಡಿಸುವ ಮೊದಲು ಅವುಗಳಿಗೆ ಇಲಿ ಪಾಷಾಣವನ್ನು ಹಚ್ಚುತ್ತಿ ರುವುದು ಕಂಡುಬಂದಿದೆ. ಪುಟ 2ಕ್ಕೆ

## ದ್ವೇಷ ಭಾಷಣ ಆರೋಪ: ಯತ್ನಾಳ್ ವಿರುದ್ಧ ದೂರು

**ಯಾದಗಿರಿ:** ಶಿವಾಜಿ ಜಯಂತಿ ಆಚರಣೆ ಸಂದರ್ಭ ದ್ವೇಷ ಭಾಷಣ ಮಾಡಿದ ಆರೋಪದ ಮೇಲೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.



ಗುರುಮಠಕಲ್ ಪಟ್ಟಣದಲ್ಲಿ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಯತ್ನಾಳ್ ಅವರು, ವಿವಾದಾತ್ಮಕ ಹೇಳಿಕೆಗಳನ್ನು ನೀಡಿದ್ದಾರೆ. ಅವರು ಒಂದು ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು ಹಿಂದಿ ಕವಿತೆ ಉಲ್ಲೇಖಿಸಿ ಮಹಾತ್ಮ ಗಾಂಧಿ ಮತ್ತು ಜವಾಹರಲಾಲ್ ನೆಹರು ಬಗ್ಗೆ ಹೇಳಿಕೆಗಳನ್ನು ನೀಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು 'ಲವ್ ಜಿಹಾದ್' ಬಗ್ಗೆಯೂ ಉಲ್ಲೇಖಿಸಿದ್ದಾರೆ ಮತ್ತು ಕೆಲವು ಐತಿಹಾಸಿಕ ವ್ಯಕ್ತಿಗಳ ಬಗ್ಗೆ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾಷಣದ ವಿಡಿಯೋ ರೆಕಾರ್ಡಿಂಗ್ ಮತ್ತು ಅದರ ಪ್ರತಿಲಿಪಿಯನ್ನು ಪುಟ 2ಕ್ಕೆ

# ತವರಿನಲ್ಲಿ ಕೈಗಾರಿಕಾ ಕ್ಷೇತ್ರಕ್ಕೆ ಶಕ್ತಿ ತುಂಬುವರೇ ಸಿದ್ದರಾಮಯ್ಯ

### ರಾಜ್ಯ ಬಜೆಟ್: ಬೆಟ್ಟದಷ್ಟು ನಿರೀಕ್ಷೆ, ಟ್ರೇಡ್ ಸೆಂಟರ್, ಟೂರಿಸಂ ಅಥಾರಿಟಿಗೂ ಮನವಿ

**ವರ್ತಮಾನ ವಿಶೇಷ**

**ಮೈಸೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿ ದಾಖಲೆಯ ಬಜೆಟ್ ಮಂಡನೆ ಮಾಡಲಿದ್ದಾರೆ. ಆದರೆ, ಬಜೆಟ್‌ನಲ್ಲಿ ತವರು ಜಿಲ್ಲೆ ಮೈಸೂರಿಗರ ಕನಸು ಈಡೇರಿಸುವರೇ ಎಂಬ ಕುತೂಹಲ ಜನರಲ್ಲಿದೆ. ಅದರಲ್ಲಿಯೂ ಕೈಗಾರಿಕೆಗಳ ಬಲವರ್ಧನೆಗೆ ಈ ಬಾರಿ ಬಜೆಟ್‌ನಲ್ಲಿ ವಿಶೇಷ ಅನುದಾನ ಸೇರಿ ಹಲವು ಅಭಿವೃದ್ಧಿ ಕಾರ್ಯ ಘೋಷಿಸುವ ಶಕ್ತಿ






ತುಂಬುವರೇ ಎಂಬ ನಿರೀಕ್ಷೆ ಕೈಗಾರಿಕಾ ವಲಯದ್ದಾಗಿದೆ.

ಮೈಸೂರು ಹಾಗೂ ನಂಜನಗೂಡಿನ ಕೈಗಾರಿಕಾ ವಸಾಹತು ಹಾಗೂ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ಪ್ರದೇಶದಲ್ಲಿರುವ ಎಲ್ಲಾ ರಸ್ತೆಗಳೂ ತುಂಬಾ ಹಾಳಾಗಿವೆ. ಕೈಗಾರಿಕಾ ಸರಕು ಸಾಗಣಿಕೆಯನ್ನು ಮಾಡಲು ಬಹಳ ಕಷ್ಟಕರವಾಗಿರುತ್ತದೆ. ಕೆಲವಷ್ಟೇ ರಸ್ತೆಗಳಿಗೆ ಡಾಂಬರೀಕರಣ ಕೆಲಸ ನಡೆಯು ತ್ತಿದೆ. ಇದು ಪೂರ್ಣ ಮಟ್ಟದಲ್ಲಿ ಕೈಗಾರಿಕಾ ಪ್ರದೇಶ ಹಾಗೂ ವಸಾಹತುಗಳಿಗೆ ವಿಸ್ತರಿಸದಿದ್ದಲ್ಲಿ ಮತ್ತೊಮ್ಮೆ ಕೈಗಾರಿಕಾ ಬೆಳವಣಿಗೆಗೆ ತೊಡಕಾಗುವ ಸಾಧ್ಯತೆಯಿದೆ. ಹಾಗಾಗಿ ಮುಂಬರುವ ಆಯವ್ಯಯದಲ್ಲಿ ಸುಮಾರು 150 ಕೋಟಿ ಹಣ ಅನುದಾನ ನೀಡಬೇಕಿದೆ. ಮೈಸೂರು-ಬೆಂಗಳೂರು ಹೆದ್ದಾರಿಯಿಂದ ಪುಟ 2ಕ್ಕೆ



ವರುಣ ಕ್ಷೇತ್ರದಲ್ಲಿ ಜಿಟಿಟಿಸಿ (ಐಟಿ) ತರಬೇತಿ ಕೇಂದ್ರವನ್ನು ಪ್ರಾರಂಭಿಸಲು ಶ್ರಮಿಸಿರುವುದು ಸ್ವಾಗತಾರ್ಹ. ಕೈಗಾರಿಕಾ ವಲಯ ಹಾಗೂ ವಸಾಹತುಗಳಲ್ಲಿ ಸೂಕ್ತ ರೀತಿಯಲ್ಲಿ ತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಅಲ್ಲಿಯ ಸಂಘ ಸಂಸ್ಥೆಗಳಿಗೆ ಘಟಕಗಳನ್ನು ಸ್ಥಾಪಿಸಲು ಅನುಮತಿ ನೀಡಿ ಪ್ರಾರಂಭಿಕ ಅನುದಾನ ನೀಡುವುದು ಸೇರಿ 25ಕ್ಕೂ ಹೆಚ್ಚು ಬಾರಿ ಮನವಿ ಮಾಡಿದ್ದೇವೆ. ಅವೆಲ್ಲವೂ ಈಡೇರುವ ನಿರೀಕ್ಷೆಯಿದೆ.

**ಕೆ.ಬಿ.ಲಿಂಗರಾಜು**

ಅಧ್ಯಕ್ಷ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ

### ಜಿಲ್ಲೆಯ ಕೈಗಾರಿಕೆಗಳ ವಿವರ

- ಸೂಕ್ಷ್ಮ ಸಣ್ಣ ಮದ್ಯಮ- 26000
- ಸ್ವಯಂ ಉದ್ಯಮ-20000
- ರಫ್ತು ಆಧಾರಿತ ಉದ್ಯಮ- 165
- ಭಾರೀ ಮತ್ತು ಮದ್ಯಮ ಕೈಗಾರಿಕೆ- 150
- ಪ್ರತಿದಿನದ ಆದಾಯ-87 ಕೋಟಿ ರೂ.

### ಪಾರ್ಕಿಂಗ್ ಸಮಸ್ಯೆಗೆ ಪರಿಹಾರವಿಲ್ಲ

ಮೈಸೂರಿನಲ್ಲಿ ಪಾರ್ಕಿಂಗ್ ಸಮಸ್ಯೆಯಿಂದ ನಿವಾಸಿಗಳು ಮತ್ತು ಪ್ರವಾಸಿಗರಿಗೆ ತೊಂದರೆಯಾಗುತ್ತಿದೆ. ಹತ್ತು ವರ್ಷಗಳ ಹಿಂದೆ ಇರುವ ಜನ ಸಂಖ್ಯೆ ಹಾಗೂ ವಾಹನ ಸಂಖ್ಯೆಗಳಿಗೆ ತಕ್ಕಂತೆ ರೂಪಿಸಲಾಗಿರುವ ಟ್ರಾಫಿಕ್ ನಿಯಮಗಳು ಚಾಲ್ತಿಯಲ್ಲಿದೆ. ಅಂದಾಜಿನ ಪ್ರಕಾರ ಮೈಸೂರಿಗೆ 30 ಲಕ್ಷ ಪ್ರವಾಸಿಗರು ಆಗಮಿಸುತ್ತಾರೆ. 3 ಅಥವಾ 4 ಜಾಗದಲ್ಲಿ ಪಾರ್ಕಿಂಗ್‌ಗೆ ಬಹುಮಹಡಿ ಪುಟ 2ಕ್ಕೆ

### ಉದ್ಯೋಗ ಸೃಷ್ಟಿಗೂ ಆದ್ಯತೆ ಸಿಗಲಿ

ಜಿಲ್ಲೆಯಲ್ಲಿ ಸಾಕಷ್ಟು ತಾಂತ್ರಿಕ ವಿದ್ಯಾಲಯಗಳಿಂದ ಪ್ರತಿವರ್ಷ ಹೊರ ಬರುತ್ತಿರುವ ಅನೇಕರಿಗೆ ಅನೂಕೂಲವಾಗುವ ದಿಸೆಯಲ್ಲಿ ಎಲೆಕ್ಟ್ರಾನಿಕ್ ಕ್ಲಸ್ಟರ್, ಆಟೋಮೊಬೈಲ್ ಕ್ಲಸ್ಟರ್ ಹಾಗೂ ಐಟಿ-ಬಿಟಿ ಪಾರ್ಕನ್ನು ಸ್ಥಾಪಿಸುವುದಲ್ಲದೇ ಸ್ಥಳೀಯ ಸಂಘ ಸಂಸ್ಥೆಗಳು ಸ್ಥಾಪಿಸಲು ಮುಂದೆ ಬಂದಿರುವ ರಫ್ತು ಕೇಂದ್ರ/ ವ್ಯಾಪಾರ ಕೇಂದ್ರ ಹಾಗೂ ಕೌಶಲ್ಯಾಭಿವೃದ್ಧಿ ಕೇಂದ್ರಗಳಿಗೆ ವಿಶೇಷ ಅನುದಾನ ನೀಡಬೇಕಿದೆ. ಜಿಲ್ಲೆಯ ಸಂಘಸಂಸ್ಥೆಗಳು ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಆರಂಭಿಸಲು ಸೂಕ್ತ ಅನುದಾನ ಬಿಡುಗಡೆ ಮಾಡಬೇಕಿದೆ. ಐದು ವರ್ಷಗಳಿಗೂ ಮೇಲ್ಪಟ್ಟು ಆಸ್ತಿತ್ವದಲ್ಲಿದ್ದು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ರಫ್ತು ನಲ್ಲಿ ತೊಡಗಿರುವ ವ್ಯಾಪಾರೋದ್ಯಮಕ್ಕೆ ಉತ್ತೇಜನ ರೂಪದಲ್ಲಿ ಹದಿನೈದು ಲಕ್ಷ ಬಡ್ಡಿ ರಹಿತ ಸಾಲದ ಸವಲತ್ತನ್ನು ದೊರಕಿಸಿಕೊಡಬೇಕಿದೆ.

ಮೊದಲ ಪುಟದಿಂದ

## ನಾನು ಸಮರ್ಥನೆಂದು ಎಷ್ಟು ಬಾರಿ ಸಾಬೀತು ಮಾಡಬೇಕು?: ಪರಂ

ಕೆ.ಎನ್. ರಾಜಣ್ಣ ಅಥವಾ ಯಾರಾದರೂ ನನ್ನ ಹೆಸರು ಹೇಳಿದ ತಕ್ಷಣ ಏನು ಆಗಲ್ಲ, ಹಾಗಂತ ಅದು ತಪ್ಪು ಅಂತಾನೂ ಹೇಳಕ್ಕೆ ಆಗಲ್ಲ. ಅದರಲ್ಲಿ ಏನಾದರೂ ತಪ್ಪು ಇದೆಯಾ? ತಪ್ಪು ಇದ್ದರೆ ಹೇಳಿ ಸರಿ ಮಾಡೋಣ. ನಾನು ಒಬ್ಬ ಶಿಸ್ತಿನ ಪಕ್ಷದ ಸಿಪಾಯಿ. ಹೈಕಮಾಂಡ್ ಏನು ತೀರ್ಮಾನ ಮಾಡ್ತಾರೆ ಅದಕ್ಕೆ ಬದ್ಧನಾಗಿರುತ್ತೇನೆ. ನಾನು ನಿಮ್ಮ ಮುಂದೆ ಹೇಳಿಕೆ ನೀಡಿ ಸಿಎಂ ಆಗಬೇಕು ಅಂದರೆ ಆಗಲು ಸಾಧ್ಯವೇ? ಅದು ಸಾರ್ವಜನಿಕವಾಗಿ ಚರ್ಚೆ ಆಗುತ್ತದೆ ಅಷ್ಟೇ ಎಂದು ಹೇಳಿದರು.

ಶಿವಮೊಗ್ಗದಲ್ಲಿ ಶಾಲಾ ಬಾಲಕನ ಹತ್ಯೆ ಪ್ರಕರಣದ ಹಿನ್ನೆಲೆಯಲ್ಲಿ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ. ಸದ್ಯ ಪರಿಸ್ಥಿತಿ ನಿಯಂತ್ರಣದಲ್ಲಿದೆ. ಮುಂಜಾಗರೂಕತಾ ಕ್ರಮವಾಗಿ ಹೆಚ್ಚುವರಿಗೆ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ ಪರಮೇಶ್ವರ್ ಮಾಹಿತಿ ನೀಡಿದರು. ಘಟನೆಯ ಹಿನ್ನೆಲೆಯಲ್ಲಿ ಕಾನೂನು ಚೌಕಟ್ಟಿನಲ್ಲಿ ಏನು ಮಾಡಬೇಕೋ ಅದನ್ನು ಮಾಡಿದ್ದೇವೆ. ಹೀಗಾಗಿ ಜನರು ಶಾಂತಿಯನ್ನು ಕಾಪಾಡಬೇಕು ಎಂದು ಮನವಿ ಮಾಡಿದರು. ಘಟನೆಗೆ ಕಾರಣ ವಿವರಿಸಿದ ಪರಮೇಶ್ವರ್ ಅವರು, ಹಿಂದೆ ಇದೇ ಹುಡುಗರು ಗಲಾಟೆ ಮಾಡಿಕೊಂಡಿದ್ದರು. ಮತ್ತೆ ಯಾವ ಕಾರಣಕ್ಕೆ ಘರ್ಷಣೆ ಆಯ್ತು ಅಂತಾ ಗೊತ್ತಾಗಿಲ್ಲ, ಆದ್ರೆ ಹೊಡೆದಾಡಿಕೊಂಡಿದ್ದಾರೆ. ಕೈಯಿಂದ ಎದೆಭಾಗಕ್ಕೆ ಹೊಡೆದ ಪರಿಣಾಮ ಬಾಲಕ ಸಂಕೇತ್ ಮೃತಪಟ್ಟಿದ್ದಾನೆ ಎಂದು ವಿವರಿಸಿದರು.

## ನಾಲ್ವರು ಅಧಿಕಾರಿಗಳ ಅಮಾನತು

ಕರ್ನಾಟಕ ನಾಗರಿಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ಅಡಿಯಲ್ಲಿ ಸಿಇಒ ಇಂಡುವಾಳು ಗ್ರಾಮ ಪಂಚಾಯತಿಯ ಪಿಡಿಒಗಳನ್ನು ಅಮಾನತುಗೊಳಿಸಿದ್ದಾರೆ. ವಿತರಣೆಯಾಗಿರುವ ಒಟ್ಟು 1,929 ಇ–ಖಾತಾಗಳ ಪೈಕಿ ಶೇ. 4ರಷ್ಟು ಅಂದರೆ ಕೇವಲ 85 ಇ–ಖಾತಾಗಳು ಮಾತ್ರ ಕಾನೂನುಬದ್ಧವಾಗಿವೆ. ಉಳಿದ ಶೇ 96 ರಷ್ಟು ಅಕ್ರಮವೆಂದು ಕಂಡುಬಂದಿದೆ. 2021ರಿಂದ 2025ರವರೆಗೆ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಗಳಿಗೆ ಸೇರಿದ ಇಷ್ಟೊಂದು ಅಕ್ರಮ ಇ–ಖಾತಾಗಳನ್ನು ಹೇಗೆ ನೀಡಲಾಗಿದೆ ಎಂಬ ವಿವರಗಳನ್ನು ಒದಗಿಸುವಂತೆ ನ್ಯಾಯಮೂರ್ತಿ ವೀರಪ್ಪ ಅವರು ಸಿಇಒಗೆ ನಿರ್ದೇಶನ ನೀಡಿದ್ದಾರೆ. ಈ ಬಗ್ಗೆ ಉಪವಿಭಾಗಾಧಿಕಾರಿ ನೇತೃತ್ವದಲ್ಲಿ ತನಿಖೆ ನಡೆಸಿ, ವರದಿ ಸಲ್ಲಿಸುವಂತೆಯೂ ಸೂಚಿಸಿದ್ದಾರೆ.

ಸರ್ಕಾರದ ಅನುಮೋದನೆಯಿಲ್ಲದೆ ಸರ್ಕಾರಿ ಗೋಮಾಳಕ್ಕೆ ಸಂಬಂಧಿಸಿದಂತೆ ಎಷ್ಟು ಇ–ಖಾತಾಗಳನ್ನು ಮಾಡಲಾಗಿದೆ ಎಂಬ ಬಗ್ಗೆ ಅಧಿಕಾರಿಗಳು ಪರಿಶೀಲಿಸಬೇಕು ಮತ್ತು ಸಂಬಂಧಿತ ದಾಖಲೆಗಳನ್ನು ಹಾಜರುಪಡಿಸಬೇಕು ಎಂದು ಅವರು ಆದೇಶಿಸಿದ್ದಾರೆ.

1844 ಅಕ್ರಮ ಇ–ಖಾತಾಗಳನ್ನು ಸೃಷ್ಟಿಸಿದವರ ವಿರುದ್ಧ ಇಲಾಖಾ ವಿಚಾರಣೆ ನಡೆಸಿ, ಕೇವಲ ಅಮಾನತುಗೊಳಿಸಿದರೆ ಸಾಕಾಗುವುದಿಲ್ಲ. ಗಂಭೀರ ಕರ್ತವ್ಯಲೋಪ ಎಸಗಿದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಮಂಡ್ಯ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಇದನ್ನು ಮಂಡ್ಯ ಜಿಲ್ಲಾ ಪಂಚಾಯಿತಿ ಸಿಇಒ ಗಮನಕ್ಕೆ ತರುವಂತೆ ಉಪ ಲೋಕಾಯುಕ್ತರು ತಮ್ಮ ಆದೇಶದಲ್ಲಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಕಿರಂಗದೂರು ಗ್ರಾಮದ ಸರ್ವೆ ನಂ.26ರಲ್ಲಿ 17 ಕುಂಟೆ ಗೋಮಾಳ ಜಮೀನಿದೆ. ಯಾವುದೇ ಮಂಜೂರಾತಿ ಇಲ್ಲದೆ, ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆಯಾಗದಿರುವ ಸರ್ಕಾರಿ ಜಮೀನಿನಲ್ಲಿ ಒಟ್ಟು 12 ನಿವೇಶನಗಳನ್ನು ವಿಜಯ್‌ಕುಮಾರ್ ಬಿನ್ ಚನ್ನಪ್ಪ ಎಂಬುವವರ ಹೆಸರಿಗೆ ಖಾತೆ ಮಾಡಲಾಗಿದೆ. ನಂತರ ಒಂದೇ ತಿಂಗಳಲ್ಲಿ ಬೇರೆಯವರಿಗೆ ಖಾತೆ ವರ್ಗಾವಣೆ ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಿದೆ.

## ಹೊಸ ಶಾಸಕರಿಗೆ ಸಚಿವ ಸ್ಥಾನ ಕೊಡಲಾಗಲ್ಲ: ಸಿದ್ದು

ನಾವು ಅಧಿಕಾರಕ್ಕೆ ಬಂದ ನಂತರ ಸಾವಿರಾರು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಎಂದು ಸಿಎಂ ತಿಳಿಸಿದರು.

# 2.96 ಕೋಟಿ ಚಿನ್ನಾಭರಣ ಹಸ್ತಾಂತರ

## ಪೊಲೀಸರ ಕಾರ್ಯಾಚರಣೆ, 6ತಿಂಗಳಲ್ಲಿ 105 ಕಳವು ಪ್ರಕರಣ ಪತ್ತೆ

ಮೈಸೂರು: ಮೈಸೂರು ನಗರ ಪೊಲೀಸ್ ಘಟಕ ಭರ್ಜರಿ ಕಾರ್ಯಾಚರಣೆ ಮೂಲಕ ಬೇಧಿಸಿದ್ದು, 6 ತಿಂಗಳಲ್ಲಿ ಸುಮಾರು 105 ಕಳವು ಪ್ರಕರಣಗಳಲ್ಲಿ ಬರೋಬ್ಬರಿ 2.96 ಕೋಟಿ ಮೌಲ್ಯದ ಚಿನ್ನಾಭರಣ ವಾಹನ ಮತ್ತು ನಗದನ್ನು ವಶಪಡಿಸಿಕೊಂಡು ವಾರಾಸುದಾರರಿಗೆ ಹಸ್ತಾಂತರಿಸಿದರು.

ಈ ಸಂಬಂಧ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಪ್ರಕರಣಗಳಲ್ಲಿ ಚಿನ್ನಾಭರಣ, ನಗದು, ವಾಹನ ಕಳೆದುಕೊಂಡವರಿಗೆ ಪೊಲೀಸರು ಹಸ್ತಾಂತರಿಸಿದರು. ಈ ವೇಳೆ ಸುದ್ದಿಗೋಷ್ಠಿ ನಡೆಸಿದ ನಗರ ಪೊಲೀಸ್ ಆಯುಕ್ತೆ ಸೀಮಾಲಾಟ್ಕರ್ ಮಾತನಾಡಿ, 6 ತಿಂಗಳಲ್ಲಿ 1 ದರೋಡೆ,1 ದರೋಡೆ ಸಂಚು, 4 ಸುಲಿಗೆ, 2 ಸರಗಳ್ಳತನ, 26 ಕನ್ನ ಕಳುವು, 9 ಮನೆಗಳ್ಳತನ, 3 ಮನೆಗೆಲಸದವರಿಂದ ಕಳ್ಳತನ, 57 ವಾಹನ ಕಳ್ಳತನ, 4 ಸಾಮಾನ್ಯ ಕಳ್ಳತನ, 1 ಕರ್ನಾಟಕ ಫಾರೆಸ್ಟ್ ಆಕ್ಟ್ ಸೇರಿ ಒಟ್ಟು 105 ಕಳುವು ಪ್ರಕರಣಗಳಲ್ಲಿ ಬರೋಬ್ಬರಿ 2.96 ಕೋಟಿ ಮೌಲ್ಯದ 2.ಕೆ.ಜಿ 54 ಗ್ರಾಂ ಚಿನ್ನಾಭರಣ, 5 ಕೆ.ಜಿ 312 ಗ್ರಾಂ ಬೆಳ್ಳಿ, 49 ದ್ವಿಚಕ್ರ ವಾಹನ,3 ಕಾರು,1 ಥಾರ್ ಜೀಪ್,2 ಲಾರಿ,1 ಗೂಡ್ಸ್ ವಾಹನ,1 ಆಟೋ ರಿಕ್ಷಾ ಹಾಗೂ 10,03000 ನಗದು ಹಾಗೂ 33 ಕೆಜಿ ಗಂಧದ ತುಂಡುಗಳು ಸೇರಿ ಇತರೆ ಮಾಲುಗಳನ್ನು ಅಮಾನತುಮಾಡಿಕೊಂಡು ಪತ್ತೆಯಾದ ಪ್ರಕರಣಗಳ ಸಂಬಂಧ ಒಟ್ಟು 82 ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ ಎಂದು ತಿಳಿಸಿದರು.

ಸರಸ್ವತಿಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಿ 8 ಕನ್ನ ಕಳವು ಪ್ರಕರಣ ಪತ್ತೆ ಹಚ್ಚಲಾಗಿದೆ. ಈಪೈಕಿ ಸೈಯದ್ ಅಲೀಂ ಎಂಬಾತನ ವಿರುದ್ಧ ರಾಜ್ಯದ ಮತ್ತು ಹೊರ ರಾಜ್ಯದ ವಿವಿಧೆಡೆ 69 ಪ್ರಕರಣ ದಾಖಲಾಗಿದ್ದು, 2013 ರಿಂದ ಈಚೆಗೆ ಕಳವು ಕೃತ್ಯದಲ್ಲಿ ತೊಡಗಿದ್ದಾನೆ. ಚಾಮರಾಜನಗರ ಮೂಲಕ ಕಳ್ಳ ಮಂಜ ಎಂಬಾತ



ಕೇವಲ ದೇವಸ್ಥಾನಗಳನ್ನು ಮಾತ್ರ ಗುರಿಯಾಗಿಸಿ ಕೊಂಡಿದ್ದ. ಆತನ ವಿರುದ್ಧ ವಿಜಯನಗರ ಪೊಲೀಸ್ ಠಾಣೆ ಯಲ್ಲಿ ಪ್ರಕರಣ ದಾಖಲಾಗಿತ್ತು. ಈತ ಕುವೆಂಪುನಗರ ರಾಘವೇಂದ್ರಸ್ವಾಮಿ ಮಠ ಸೇರಿದಂತೆ ಎರಡು ದೇವಾಲಯಗಳಲ್ಲಿ ಕಳ್ಳತನ ಮಾಡಿದ್ದ, ಹುಂಡಿ, ದೇವರ ತಾಳಿ ಮತ್ತಿತರ ಆಭರಣಗಳನ್ನು ಕಳವು ಮಾಡಿದ್ದಾರೆಂದರು.

ಪಾಲಿಟೆಕ್ನಿಕ್ ಒಂದರಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಲ್ಯಾಬ್ ಟೆಕ್ನಿಷಿಯನ್ ಹಾಗೂ ಉಪನ್ಯಾಸಕನಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೊಬ್ಬ ತಮ್ಮ ಮನೆಯ ಸಮೀಪದ ವಿಧವೆಯೊಬ್ಬರನ್ನು ಪರಿಚಯ ಮಾಡಿಕೊಂಡು ಅವರು ಮನೆಯಲ್ಲಿ ಇಲ್ಲದ ವೇಳೆ ಕಿಟಕಿ ಮುರಿದು ಕಳವು ಮಾಡಿದ್ದ. ಈತನಿಂದ 25.08 ಲಕ್ಷ ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ. ವಿದ್ಯಾರಣ್ಯಪುರಂ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ. ಮೇಟಗಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 17 ಆರೋಪಿಗಳು, ವಿಜನಯಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಆರು ಮಂದಿ, ಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಹನ್ನೊಂದು ಮಂದಿ ಮತ್ತು ನರಸಿಂಹರಾಜ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 9 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಹೇಳಿದರು.

ಫೆ. 24 ರಂದು ಉದಯಗಿರಿ ಪೊಲೀಸರು ರಾಜೀವನಗರ 2ನೇ ಹಂತದ ವರುಣ್ ಎಂಬಾತನನ್ನು ಬಂಧಿಸಿ ಆತನಿಂದ 24 ಕೆಜಿ 485 ಗ್ರಾಂ ಗಾಂಜಾ ಅಮಾನತ್ತುಪಡಿಸಿಕೊಂಡಿದ್ದಾರೆ. 102 ಸೇವನೆ ಪ್ರಕರಣ ದಾಖಲಿಸಲಾಗಿದೆ. ನಗರದಲ್ಲಿ ಮಾದಕ ವಸ್ತುಗಳ ಮಾರಾಟ, ಸಾಗಾಣೆ, ಸಂಗ್ರಹ ನಿಯಂತ್ರಣ ಸಂಬಂಧ 2025–26ನೇ ಸಾಲಿನಲ್ಲಿ 16 ಎನ್.ಡಿ.ಪಿ.ಎಸ್ ಆರೋಪಿಗಳ ವಿರುದ್ಧ ಗಡಿಪಾರು ಆದೇಶ ಹೊರಡಿಸಲಾಗಿದೆ. ಎನ್.ಡಿ.ಇಎಸ್ ಕಾಯ್ದೆ ಅಡಿ 2026ನೇ ಸಾಲಿನಲ್ಲಿ ಒಟ್ಟು 22 ಎನ್‌ಡಿಪಿಎಸ್ ಪ್ರಕರಣಗಳನ್ನು ದಾಖಲಿಸಿದ್ದು, ಸುಮಾರು 30ಕೆಜಿ 255ಗ್ರಾಂ ಗಾಂಜಾ, ಹಾಗೂ 311ಗ್ರಾಂ ನಷ್ಟು ಸಿಂಥೆಟಿಕ್ ಮಾದಕ ವಸ್ತುಗಳನ್ನು

### ಗೂಗಲ್ ಮೂಲಕ ಸ್ಕೆಚ್

**ಆಂಧ್ರ ಮೂಲದ ವ್ಯಕ್ತಿಯೊಬ್ಬ ಗೂಗಲ್ ಮೂಲಕ ಒಂಟಿ ಮನೆಯನ್ನು ಪತ್ತೆ ಹಚ್ಚಿ ಅವುಗಳನ್ನೇ ಗುರಿಯಾಗಿಸಿಕೊಂಡು ಒಬ್ಬನೇ ದಾಳಿ ಮಾಡಿ ಕಳವು ಮಾಡುತ್ತಿದ್ದ ಆರೋಪಿಯನ್ನು ಬಂಧಿಸಲಾಗಿದೆ. ಈತನ ಬಗ್ಗೆ ಹೆಚ್ಚಿನ ತನಿಖೆ ನಡೆಯುತ್ತಿದ್ದು, ಇತರಡೆಯೂ ಮಾಡಿರುವ ಸಂಶಯವಿದ್ದು, ಈ ಬಗ್ಗೆ ತನಿಖೆ ನಂತರ ಬೆಳಕಿಗೆ ಬರಲಿದೆ ಎಂದರು.**

### ಸಂತ್ರಸ್ಥರ ಸಂತಸ

**ಕೆಲಸ ಮುಗಿಸಿಕೊಂಡು ಕಾರಿನಲ್ಲಿ ಹೋಗುತ್ತಿ ದ್ದಾಗ ಮೈಸೂರಿನ ಕೇಂದ್ರ ರೈಲ್ವೆ ನಿಲ್ದಾಣ ಬಳಿ ಸಬರ್ಬನ್ ಬಸ್ ನಿಲ್ದಾಣಕ್ಕೆ ಡ್ರಾಪ್ ಕೊಡಿ ಒಂದು ಸಾವಾಗಿದೆ ತುರ್ತಾಗಿ ಹೋಗಬೇಕೆಂದು ಮೂವರು ಕೇಳಿಕೊಂಡಾಗ ಮಾನವೀಯತೆ ತೋರಿ ಡ್ರಾಪ್ ಮಾಡಲು ಕಾರಿಗೆ ಕೂರಿಸಿ ಕೊಂಡೆ ಸ್ವಲ್ಪ ದೂರ ಹೋದ ಬಳಿಕ ಮೂವರು ನನಗೆ ಚಾಕು ತೋರಿಸಿ ಕಾರು, ಸರ, ಪರ್ಸ್, ಮೊಬೈಲ್ ಎಲ್ಲವನ್ನೂ ದೋಚಿ ಹೋಗಿದ್ದರು. ತಕ್ಷಣ ನಾನು ಮಂಡಿ ಪೊಲೀಸ್ ಠಾಣೆಗೆ ತೆರಳಿ ದೂರು ಕೊಟ್ಟಿದ್ದೆ ತನಿಖೆ ನಡೆಸಿ ಕಳುವಾಗಿದ್ದ ವಸ್ತುಗಳನ್ನು ಪತ್ತೆ ಹಚ್ಚಿ ಕೊಟ್ಟಿರುವುದು ಸಂತಸ ತರಿಸಿದೆ. ಅಂತೆಯೇ ಮತ್ತೊಂದು ಪ್ರಕರಣದಲ್ಲಿ ವಿಜಯನಗರದಲ್ಲಿ ಮನೆ ಮುಂದೆ ನಿಂತಿದ್ದ ಕಾರನ್ನು ಕಳವು ಮಾಡಿದ್ದರು. ಕೊನೆಗೂ ಕಾರನ್ನು ಪತ್ತೆ ಹಚ್ಚಿಕೊಟ್ಟಿರುವುದು ಖುಷಿ ತರಿಸಿದೆ ಎಂದು ಸಂತಸ ಹಂಚಿಕೊಂಡರು.**



ಅಮಾನತುಪಡೊಸಿಕೊಳ್ಳಲಾಗಿದೆ. ನಗರದಲ್ಲಿ ರೌಡಿ ಚಟುವಟಿಕೆ ನಿಯಂತ್ರಣದಲ್ಲಿಡುವ ಸಂಬಂಧ ವಿದ್ಯಾರಣ್ಯಪುರಂ ಠಾಣಾ ವ್ಯಾಪ್ತಿಯ ಜನತಾ ಬಡಾವಣೆ ನಿವಾಸಿ ರೌಡಿ ಪಿ.ಗಣೇಶ್ (25)ವಿರುದ್ಧ ಗೂಂಡಾ ಕಾಯ್ದೆಯಡಿ ಬಂಧನದ ಆದೇಶ ಹೊರಡಿಸಿರುವುದಾಗಿ ತಿಳಿಸಿದರು. ಸಂಚಾರಿ ಡಿಸಿಪಿ ಸುಂದರ್ ರಾಜ್, ಎಸಿಪಿಗಳಾದ ರಮೇಶ್ ಕುಮಾರ್, ರವಿಶಂಕರ್, ಮ್ಯಾಥ್ಯೂ ಥಾಮಸ್, ಮಹಮ್ಮದ್ ಶರೀಫ್ ರಾವುತರ್ ಇದ್ದರು.

ಮೊದಲ ಪುಟದಿಂದ

## ಇಒ ನಿರ್ಲಕ್ಷ್ಯ: ತನಿಖೆಗೆ ಸೂಚನೆ

ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ನಿಷ್ಕ್ರಿಯತೆ ವಿರುದ್ಧ ಸಿಇಒ ಕ್ರಮ ಕೈಗೊಳ್ಳಬೇಕು ಎಂದು ಉಪ ಲೋಕಾಯುಕ್ತರು ಸೂಚಿಸಿದ್ದರು.

ಕಂದಾಯ ಭೂಮಿ ರಕ್ಷಿಸುವುದು ತಹಶೀಲ್ದಾರ್ ಹೊಣೆ. ಆದರೆ, ಕಿರಂಗದೂರು ಗ್ರಾಮದ ಸರ್ವೆ ಸಂಖ್ಯೆ 26ರಲ್ಲಿರುವ ಗೋಮಾಳ ಭೂಮಿಯನ್ನು ರಕ್ಷಿಸಲು ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ತಹಶೀಲ್ದಾರ್ ಶ್ರದ್ಧೆಯಿಂದ ವರ್ತಿಸಿಲ್ಲ ಎಂದು ಉಪ ಲೋಕಾಯುಕ್ತರು ತಿಳಿಸಿದ್ದರು.

ಕಿರಂಗದೂರು ಗ್ರಾಮದ ಸರ್ವೆ ಸಂಖ್ಯೆ 26, 187 ಮತ್ತು 193 ಗೋಮಾಳ ಭೂಮಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರವು ಫಲಾನುಭವಿಗಳಿಗೆ ನೀಡಿದ ಮೂಲ ಭೂ ಮಂಜೂರಾತಿಗಳ ಬಗ್ಗೆ ಮತ್ತು ಇಂಡುವಾಳ ಗ್ರಾಮ ಪಂಚಾಯಿತಿಯಿಂದ ನೀಡಲಾದ ನಕಲಿ ಇ–ಖಾತಾಗಳ ಬಗ್ಗೆ ತಹಶೀಲ್ದಾರ್ ವಿವರವಾದ ವರದಿ ಸಲ್ಲಿಸಿಲ್ಲ. ಆದ್ದರಿಂದ, ಮಂಡ್ಯ ಜಿಲ್ಲಾಧಿಕಾರಿ ಅಥವಾ ಉಪ ವಿಭಾಗಾಧಿಕಾರಿ ಹುದ್ದೆಗಿಂತ ಕಡಿಮೆಯಿಲ್ಲದ ಅಧಿಕಾರಿಯಿಂದ ವಿಚಾರಣೆ ನಡೆಸಿ ವರದಿ ಸಲ್ಲಿಸಬೇಕು ಎಂದು ಉಪ ಲೋಕಾಯುಕ್ತರು ಆದೇಶಿಸಿದ್ದಾರೆ.

## ಯತ್ನಾಳ್ ವಿರುದ್ಧ ದೂರು

ಸಿದ್ಧಪಡಿಸುವುದು ಸೇರಿದಂತೆ ಪ್ರಾಥಮಿಕ ವಿಚಾರಣೆಯ ನಂತರ, ಜಿಲ್ಲಾ ಪೊಲೀಸ್ ಕಚೇರಿಯಿಂದ ಕಾನೂನು ಅಭಿಪ್ರಾಯವನ್ನು ಪಡೆಯಲಾಯಿತು. ಈ ಭಾಷಣವು ವ್ಯಾಪಕ ವಿರೋಧಕ್ಕೆ ಕಾರಣವಾಗಿದ್ದು, ಯತ್ನಾಳ್ ಅವರು ಕೋಮು ಸೌಹಾರ್ದತೆಯನ್ನು ಕೆರಳಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

## ಖುಲಾಸೆಗೊಳಿಸಿದ ಹೈಕೋರ್ಟ್

ಹಂತದಲ್ಲಿ ಮೃತಪಟ್ಟಿದ್ದರು. ರಮೇಶ್ ಎಂಬಾತ ತಲೆಮರೆಸಿಕೊಂಡಿದ್ದನು. 2018ರ ಸೆಪ್ಟೆಂಬರ್ 25ರಂದು ತೀರ್ಪು ಪ್ರಕಟಿಸಿದ್ದ ಗೋಪಿಚೆಟ್ಟಿಪಾಳ್ಯಂ 3ನೇ ಸೆಷನ್ಸ್ ನ್ಯಾಯಾಲಯ ಉಳಿದ 9 ಆರೋಪಿಗಳನ್ನು ಖುಲಾಸೆಗೊಳಿಸಿ ಆದೇಶ ಹೊರಡಿಸಿತ್ತು.

## ಒಳಮೀಸಲಾತಿ ಜಾರಿಯಿಂದ ವಿಳಂಬ

ಠಾಣೆಗಳಲ್ಲಿ ಸಬ್ ಇನ್ಸಪೆಕ್ಟರ್‌ಗಳೇ ಇಲ್ಲ ಎಂಬ

ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಆರೋಪಕ್ಕೆ ತಿರುಗೇಟು ನೀಡಿದ ಪರಮೇಶ್ವರ್, ಪಿ ಎಸ್ ಐ ಸ್ಕ್ಯಾಮ್ ಯಾವಾಗ ಆಯ್ತು ಅಂತಾ ಅವರಿಗೂ ಗೊತ್ತಿರಬೇಕಲ್ಲವೇ? ಹೀಗಾಗಿ 412 ಹುದ್ದೆಗಳ ನೇಮಕಾತಿ ಮಾಡಲು ಸಾಧ್ಯವಾಗಿಲ್ಲ. ಇನ್ನೆರಡು ತಿಂಗಳಲ್ಲಿ 543 ಸಬ್ ಇನ್ಸ್ ಪೆಕ್ಟರ್ ಗಳು ಬರ್ತಾರೆ. ಅವರು ಇದಾಗಲೇ ಟ್ರೈನಿಂಗ್ ಮುಗಿಸಿ ಫೀಲ್ಡ್ ಗೆ ಬರ್ತಿದ್ದಾರೆ. ಅವರಿಗೆ ಪೋಸ್ಟಿಂಗ್ ಕೂಡ ಕೊಡಲಾಗಿದೆ ಎಂದು ಮಾಹಿತಿ ನೀಡಿದರು.

## ವಿಷ ಸವರಿದ ವ್ಯಾಪಾರಿ ಬಂಧನ

ಮನುಷ್ಯರು ಸೇವಿಸುವ ಹಣ್ಣುಗಳ ಮೇಲೆ ಇಂತಹ ವಿಷಕಾರಿ ರಾಸಾಯನಿಕ ಬಳಸುವುದು ಕ್ರಿಮಿನಲ್ ಅಪರಾಧವಾ ಗಿದೆ. ಪೊಲೀಸರು ಆರೋಪಿಯನ್ನು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಹೋರಾಟ: ದೇವೇಗೌಡ ಬೆಂಬಲಕ್ಕೆ ಮನವಿ

ಸರ್ಕಾರ ಒಳಮೀಸಲಾತಿ, ಸಮೀಕ್ಷೆಯ ನಾಟಕ ಮಾಡುತ್ತಿದೆ. ಕೂಡಲೇ ಸರ್ಕಾರ ಎಚ್ಚೆತ್ತುಕೊಂಡು ಹುದ್ದೆಗಳ ನೇಮಕ ಮಾಡಬೇಕು. ಇಲ್ಲವಾದರೆ ಮತ್ತೆ ದೊಡ್ಡಮಟ್ಟದ ಹೋರಾಟ ಮಾಡುತ್ತೇವೆ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು.

## ಪಾರ್ಕಿಂಗ್ ಸಮಸ್ಯೆಗೆ ಪರಿಹಾರವಿಲ್ಲ

**ಕಟ್ಟಡವನ್ನು ಕಟ್ಟಲು ಮಂಜೂರಾತಿ ಅಗತ್ಯವಿದೆ. ಈ ಕಟ್ಟಡ ಕಟ್ಟಲು ಜಾಗಗಳನ್ನು ಮೊದಲೇ ಗುರುತಿಸಲಾಗಿದ್ದು ಮಂಜೂರಾತಿಯು ಅತಿ ಅವಶ್ಯಕವಾಗಿದೆ.**

## ಸಚಿವ ಸ್ಥಾನ: ಎಂ–ಎಲ್ಸಿಗಳ ಸರದಿ

ನಾಮನಿರ್ದೇಶಿತ ವರ್ಗದಿಂದ ಒಬ್ಬ ಎಂಎಲ್‌ಸಿಯನ್ನು ಆಯ್ಕೆ ಮಾಡುವಂತೆ ಮನವಿ ಮಾಡಿ ಪತ್ರ ಸಲ್ಲಿಸಿದ್ದಾರೆ.

## ಶಕ್ತಿ ತುಂಬುವರೇ ಸಿದ್ದರಾಮಯ್ಯ

ಬಹಳ ಪ್ರಯೋಜನಕಾರಿಯಾಗಿದೆ. ಮೈಸೂರಿನ, ಮಣಿಪಾಲ್ ಆಸ್ಪತ್ರೆ ಬಳಿ ಇರುವ ಟ್ರಾಫಿಕ್ ಸಿಗ್ನಲ್ ನಲ್ಲಿ ನಾಲ್ಕೂ ಕಡೆಯಲ್ಲೂ ಹೆಚ್ಚಿನ ವಾಹನ ಸಂದಣಿ

ಇರುವುದರಿಂದ ಅಲ್ಲಿ ತುರ್ತಾಗಿ ಫ್ಲೈ ಓವರ್ ಅವಶ್ಯಕತೆ ಇದೆ. ಈಗಾ ಗಲೇ ಕಾಮಗಾರಿ ಪ್ರಾರಂಭವಾಗಿದ್ದು ಅತಿ ಶೀಘ್ರದಲ್ಲಿ ಯಾವುದೇ ಅಡಚಣೆಯಿಲ್ಲದೆ ಕಾಮಗಾರಿಯನ್ನು ಮುಗಿ ಸಬೇಕೆಂದು ಕೈಗಾರಿಕೆ ಸಂಘ ಕೋರಿದೆ. 'ಗ್ರೇಟರ್ ಮೈಸೂರು' ಮಹಾನಗರಪಾಲಿಕೆಯಾಗಿ ಮೇಲ್ದರ್ಜೆಗೆ ಏರಲು ಪಾಲಿಕೆ ಸಜ್ಜಾಗಿದೆ. ಆದರೆ. ನಗ ರದ ರಸ್ತೆಗಳು ಹದಗೆಟ್ಟಿವೆ. ಪ್ರವಾಸಿಗಳಿಗೆ ಅನಾನು ಕೂಲವಾಗಿದೆ. ಆದಷ್ಟು ಶೀಘ್ರದಲ್ಲಿ

ವ್ಯವಸ್ಥಿತವಾಗಿ ರಸ್ತೆ ಕಾಮಗಾರಿಯನ್ನು ಮುಗಿಸಬೇಕಿದೆ. ಸರ್ಕಾರದಿಂದ ಕೈ ಗಾರಿಕಾ ಪಟ್ಟಣ ಪ್ರಾಧಿಕಾರಕ್ಕೆ ವಿಶೇಷವಾಗಿ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶ ಹಾಗೂ ತಾಂಡ್ಯಾ ಕೈ ಗಾರಿಕಾ ಪ್ರದೇಶಗಳನ್ನು ವಿಶೇಷ ಹೂಡಿಕೆ ವಲಯ ಗಳನ್ನಾಗಿ ಪರಿಗಣಿಸಿದೆ. ಪ್ರಕ್ರಿಯೆಯನ್ನು ಅತಿ ಶೀಘ್ರ ವಾಗಿ ಜಾರಿಗೆ ತರಬೇಕಿದೆ. ಮೈಸೂರಿನ ಹೆಬ್ಬಾಳ ಕೈಗಾ ರಿಕಾ ಪ್ರದೇಶದಲ್ಲಿ ಮೈಸೂರು–ಎಕ್ಸ್ ಪೋರ್ಟ್ ಸೆಂ ಟರ್ ನಿರ್ಮಾಣಕ್ಕೆ 17 ವರ್ಷಗಳಿಂದ ಕಾಯಲಾಗುತ್ತಿದ್ದು, ಈ ಬಗ್ಗೆಯೂ ಗಮನ ಹರಿಸಬೇಕಿದೆ.

ಮೈಸೂರಿನಲ್ಲಿ ಟ್ರೇಡ್ ಸೆಂಟರ್ ಸ್ಥಾಪನೆ

ಅನಿವಾರ್ಯ. ಈಗಾಗಲೇ ಕೈಗಾರಿಕಾ ಸಂಸ್ಥೆಯಿಂದ ಹಲವಾರು ಬಾರಿ ಮನವಿ ಸಲ್ಲಿಸಿ, ಒತ್ತಾಯಿಸಲಾಗಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಅಲ್ಲದೆ, ಐಟಿ, ಬಯೋಟೆಕ್ ಮತ್ತು ಆಟೋಮೊಬೈಲ್ ಕ್ಷೇತ್ರಗಳಿಗೆ ವಿಶೇಷ ವಲಯ ಗಳನ್ನು ಅಭಿವೃದ್ಧಿ ಪಡಿಸಲು ಮತ್ತು ಉತ್ತೇಜಿಸಲು ಸರ್ಕಾರದ ಸಹಾಯ ಅಗತ್ಯವಿದೆ. ಪ್ರವಾಸೋದ್ಯಮಕ್ಕೆ ಹೆಚ್ಚಿನ ಅನುದಾನ ನೀಡಿ, ದಕ್ಷಿಣ ರಾಜ್ಯಗಳ ಏಕಸಾಮ್ಯ ತೆರಿಗೆ ನೀತಿಯನ್ನು ಅನುಷ್ಠಾನ ಗೊಳಿಸಲು ಕೋರಲಾಗಿದೆ. ಹೊಸ ಪ್ರವಾಸೋದ್ಯಮ ತಾಣಗಳನ್ನು ಅಭಿವೃದ್ಧಿಪಡಿಸಿ ಬಹು ಬೇಡಿಕೆಯ 'ಟೂರಿಸಂ ಅಥಾರಿಟಿ'ಯ ರಚಿಸಿ ಹೆಚ್ಚು ಅನುದಾನವನ್ನು ಮೀಸಲಿಡಬೇಕಿದೆ. ದಸರಾ ನಾಡಹಬ್ಬಕ್ಕೆ 2 ತಿಂಗಳು ಮುಂಚಿತವಾಗಿ ಅಂತರರಾಜ್ಯದ ತೆರಿಗೆ ವಿಶೇಷ ರಿಯಾಯಿತಿಯನ್ನು ನೀಡಿದರೆ ಪ್ರವಾಸಿಗರನ್ನು ಆಕರ್ಷಿಸಬಹುದು. ಚಿತ್ರನಗರಿ ಕಾರ್ಯಕ್ಕೆ ವೇಗ ಪಡೆಯಬೇಕಿದೆ.

ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣವನ್ನು ಅತಿ ಶೀಘ್ರದಲ್ಲಿ ಕೈಗೆತ್ತಿಕೊಳ್ಳಬೇಕಿದೆ. ಎಲ್ಲಾ ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ ಎದ್ದು ಕಾಣುತ್ತಿದೆ. ಆದಷ್ಟು ಬೇಗನೆ ಇದರ ಬಗ್ಗೆ ಗಮನ ಹರಿಸಿ, ರಾಜ್ಯದ ಪ್ರವಾಸೋದ್ಯಮದ ಬೆಳವಣಿಗೆಗೆ ಪೂರಕವಾದ ವಾತಾವರಣವನ್ನು ಕಲ್ಪಿಸಿಕೊಡಲು, ಮುಂಗಡ ಪತ್ರದಲ್ಲಿ ಅನುದಾನವನ್ನು ನೀಡಬೇಕಿದೆ. ವಿದ್ಯುತ್ ನೀತಿಯಲ್ಲಿ ಕೆಳಕಂಡ ಬದಲಾವಣೆ ಸಣ್ಣ ಉದ್ಯಮದ ಬೆಳವಣಿಗೆಗೆ ಅವಶ್ಯಕ. ಒಂದೇ ಆವರಣದಲ್ಲಿ ವಿವಿಧ ಕೈಗಾರಿಕೆಗಳಿಗೆ ಮೀಟರ್ ಅಳವಡಿಕೆ ಹಾಗೂ ಆರ್.ಆರ್. ನಂಬರ್ ಮೂಲಕ ಅವಕಾಶ ಕಲ್ಪಿಸಿಕೊಡಬೇಕಿದೆ.

ಪರಿವರ್ತನೆಗೊಳ್ಳದ 2 ಎಕರೆ ಒಳಗಡೆ ಇರುವಂತಹ ಕಂದಾಯ ಜಮೀನುಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡುವುದಕ್ಕೆ ಅನುಮೋದನೆ ನೀಡಬೇಕಿದೆ. ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳು ಸಂಕಷ್ಟದಲ್ಲಿದ್ದು ಅವುಗಳ ಉತ್ತೇಜನಕ್ಕೆ ಕಾರ್ಪಸ್ ಫ್ರೆಂಡ್ ನ ವಿಶೇಷ ಪ್ಯಾಕೇಜನ್ನು ನೀಡಿ, ವಿತರಣಾ ಸಮಿತಿಯಲ್ಲಿ ಸ್ಥಳೀಯ ಸಂಘ ಸಂಸ್ಥೆಗಳ ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಿ ಉದ್ಯಮಗಳ ಪುನಶ್ಚೇತನಕ್ಕೆ ಸಹಕಾರ ನೀಡಬೇಕಿದೆ. ವಾಣಿಜ್ಯೋದ್ಯಮಕ್ಕೆ ವಿಧಿಸುತ್ತಿರುವ ಪಾಲಿಕೆ, ಪಂಚಾಯಿತಿ ತೆರಿಗೆ, ಶುಲ್ಕ ಇತರೆ ಬೇರೆ ಜಿಲ್ಲೆಗಳಿಗೆ ಹೋಲಿಸಿದಾಗ ಅತಿ ಹೆಚ್ಚು ಹೊರೆಯಾಗಿದೆ. ಇದನ್ನು ಸರಳೀಕರಿಸಿ ಸರಿಸಮಾನ ರೀತಿಯಲ್ಲಿ ಅನುಷ್ಠಾನಗೊಳಿಸಬೇಕಿದೆ.

ಕೆ.ಐ.ಎ.ಡಿ.ಬಿ. ಏರಿಯಾದಲ್ಲಿ ಒಳಚರಂಡಿ ಸೇರಿ ಮೂಲಸೌಕರ್ಯವೇ ಇಲ್ಲದಾಗಿದ್ದು ತೆರಿಗೆ ಹೆಚ್ಚಾಗಿದ್ದು, ಅದನ್ನು ಅರ್ಧದಷ್ಟು ಕಡಿಮೆ ಮಾಡಬೇಕಿದೆ. ಮೈಸೂರಿನಲ್ಲಿ 'ಎ' ಖಾತಾ ಮತ್ತು ಸಿ.ಆರ್. ನೀಡುವ ಪ್ರಕ್ರಿಯೆಯನ್ನು ಶೀಘ್ರಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಬೇಕಿದೆ. ಭೂಮಿಯ ಮಾಲೀಕತ್ವ ಮತ್ತು ಹಕ್ಕು ಸುಲಭವಾಗಿ ಪಡೆಯಲು ಸಹಕರಿಸಬೇಕಿದೆ. ವಾಣಿಜ್ಯ, ವ್ಯಾಪಾರದ ಬಹುದಿನಗಳ ಬೇಡಿಕೆಯಾದ ಟ್ರೇಡ್ ಲೈಸನ್ಸ್ ಮನ್ನಾ ಮಾಡಬೇಕಿದೆ.

ಎಪಿಎಂಸಿ ಯಲ್ಲಿ ಸೆಸ್ ಮುಖಾಂತರ ಸರ್ಕಾರಕ್ಕೆ ಸಾಕಷ್ಟು ಆದಾಯ ಬರುತ್ತಿದ್ದು, ವರ್ತಕರಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ವಿಫಲರಾಗಿರುವುದು ಕಾಣಬರುತ್ತಿದೆ. ಇದರಿಂದ ರೈತರು ಹಾಗೂ ವರ್ತಕರು ತೊಂದರೆ ಅನುಭವಿಸುತ್ತಿದ್ದು ಮೂಲಭೂತ ಸೌಕರ್ಯಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲು ಒತ್ತಾಯಿಸುತ್ತೇವೆ. ರೈತರು ಹಾಗೂ ಕೂಲಿ ಕಾರ್ಮಿಕರ ಅನುಕೂಲಕ್ಕಾಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅವಶ್ಯಕತೆಯಿದ್ದು ಈ ಬಗ್ಗೆ ಕೂಡಲೇ ಗಮನಹರಿಸಬೇಕೆಂದು ವಿನಂತಿಸುತ್ತೇವೆ. ಎ.ಪಿ.ಎಂ.ಸಿ ಯಲ್ಲಿ ಸಾರ್ವಜನಿಕ ಶೌಚಾಲಯದ ಅಗತ್ಯವಿದೆ. ಮಹಿಳೆಯರು ಮತ್ತು ಮಕ್ಕಳು. ಕೆಲಸಕ್ಕೆ ಬರುವುದರಿಂದ ಸ್ವಚ್ಛತೆಯ ಬಗ್ಗೆ ಗಮನ ಹರಿಸಬೇಕಿದೆ.

ಮೈಸೂರು ನಗರ ತಾಂತ್ರಿಕ ಹಾಗೂ ವೈದ್ಯಕೀಯ ಉನ್ನತ ಶಿಕ್ಷಣಕ್ಕೆ ಹೆಸರಾಗಿದ್ದು ಅದಕ್ಕೆ ಪೂರಕ ಸೌಲಭ್ಯ ಹಾಗೂ ಪರಿಣಿತಿಯನ್ನು ಹೊಂದಿರುವ ಕಾರಣದಿಂದಾಗಿ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕೈಗಾರಿಕಾ ನೀತಿಗೆ ಅನುಗುಣವಾಗಿ ಮೈಸೂರಿನಲ್ಲಿ ಐಐಟಿ ಹಾಗೂ ಎಐಐಎಂಎಸ್ ಸಮನಾದ ಅಥವಾ ಮಾದರಿಯ ಸಂಸ್ಥೆಗಳನ್ನು ಸ್ಥಾಪಿಸುವ ಅಗತ್ಯತೆ ಹಾಗೂ ಅವಕಾಶಗಳಿದ್ದು ರಾಜ್ಯ ಸರ್ಕಾರ ವಿಶೇಷ ಸವಲತ್ತುಗಳನ್ನು ನೀಡಿ ಅನುದಾನ ನೀಡಬೇಕೆಂಬ ಬಯಕೆಯಲ್ಲಿ ಮೈಸೂರು ಎದುರು ನೋಡುತ್ತಿದೆ.

ಬಂಡೀಪುರ, ನಾಗರಹೊಳೆ ಸಫಾರಿ ಪುನರಾರಂಭ

# ಮಾನವ–ವನ್ಯಜೀವಿ ಸಂಘರ್ಷಕ್ಕೆ ಪ್ರವಾಸೋದ್ಯಮ ಕಾರಣವಲ್ಲ ಎಂದ ತಜ್ಞರು

ಮೈಸೂರು : ಅರಣ್ಯ ಇಲಾಖೆಯು ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಸಫಾರಿ ಕಾರ್ಯಾಚರಣೆಯನ್ನು ಗುರುವಾರದಿಂದ (ಫೆ.19) ಪುನರಾರಂಭಿಸಿದೆ. ವಾಹನಗಳ ಸಂಖ್ಯೆ ಮತ್ತು ಅವಧಿ ಕಡಿಮೆ ಮಾಡುವ ಷರತ್ತಿನೊಂದಿಗೆ ಸಫಾರಿಗೆ ಅನುಮತಿ ನೀಡಲಾಗಿದ್ದು, ಈ ನಿರ್ಧಾರವನ್ನು 'ಕರ್ನಾಟಕ ಇಕೋ–ಟೂರಿಸಂ ರೆಸಾರ್ಟ್ಸ್ ಅಸೋಸಿಯೇಷನ್' (ಕೆಇಟಿಆರ್‌ಎ) ಸ್ವಾಗತಿಸಿದೆ. ಇದು ವನ್ಯಜೀವಿ ಸಂರಕ್ಷಣೆ, ಸ್ಥಳೀಯರ ಜೀವನೋಪಾಯ ಮತ್ತು ಸಾರ್ವಜನಿಕ ವಿಶ್ವಾಸ ಕಾಪಾಡುವ ನಿಟ್ಟಿನಲ್ಲಿ ತೆಗೆದುಕೊಂಡಿರುವ ರಚನಾತ್ಮಕ ಹೆಜ್ಜೆಯಾಗಿದೆ ಎಂದು ಸಂಘಟನೆ ಅಭಿಪ್ರಾಯಪಟ್ಟಿದೆ.

ಕಳೆದ ಕೆಲವು ವಾರಗಳಿಂದ ಸಫಾರಿ ಸ್ಥಗಿತಗೊಂಡಿದ್ದರಿಂದ ಬಂಡೀಪುರ–ನಾಗರಹೊಳೆ–ಕಬಿನಿ ವ್ಯಾಪ್ತಿಯಲ್ಲಿ ಸ್ಥಳೀಯ ಉದ್ಯೋಗ ಮತ್ತು ಪ್ರವಾಸೋದ್ಯಮ ಆಧಾರಿತ ಉದ್ದಿಮೆಗಳ ಮೇಲೆ ಗಂಭೀರ ಪರಿಣಾಮ ಬೀರಿತ್ತು. ಇದೀಗ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಮಾರ್ಗಸೂಚಿಗಳ ಅನ್ವಯ, ನಿಗದಿತ ಮಾರ್ಗಗಳಲ್ಲಿ ನಡೆಯುವ ನಿಯಂತ್ರಿತ ಪರಿಸರ ಪ್ರವಾಸೋದ್ಯಮವು ಇತ್ತೀಚಿನ ಮಾನವ–ವನ್ಯಜೀವಿ ಸಂಘರ್ಷದ ಘಟನೆಗಳಿಗೆ ಕಾರಣವಲ್ಲ ಎಂದು ವನ್ಯಜೀವಿ ಮತ್ತು ಸಂರಕ್ಷಣಾ ತಜ್ಞರು ಪುನರುಚ್ಚರಿಸಿದ್ದಾರೆ.



ಈ ಕುರಿತು ಮಾತನಾಡಿರುವ ಹುಲಿಗಳ ಸಂರಕ್ಷಣೆಗಾಗಿ ಕೆಲಸ ಮಾಡುವ ಒಂದು ಅಂತಾರಾಷ್ಟ್ರೀಯ ಸಂಸ್ಥೆ, 'ಟ್ರಾವೆಲ್ ಆಪರೇಟರ್ಸ್ ಫಾರ್ ಟೈಗರ್ಸ್' ಸಂಸ್ಥಾಪಕ ಹಾಗೂ ವನ್ಯಜೀವಿ ಸಂರಕ್ಷಕ ಜೂಲಿಯನ್ ಮ್ಯಾಥ್ಯೂಸ್, "ಕರ್ನಾಟಕದಲ್ಲಿ ಸಫಾರಿಗಳು ಪುನರಾರಂಭಗೊಂಡಿರುವುದು ಮತ್ತು ಸ್ಥಳೀಯ ಉದ್ಯೋಗಕ್ಕೆ ಹೆಚ್ಚಿನ ಒತ್ತು ನೀಡುತ್ತಿರುವುದು ಸಂತಸ ತಂದಿದೆ. ಆದರೆ, ಸಂಘರ್ಷಕ್ಕೆ ಪರಿಸರ ಪ್ರವಾಸೋದ್ಯಮವೇ ಕಾರಣ ಎಂದು ದೂಷಿಸುವುದು ಮತ್ತು ಅದರ ಪರಿಣಾಮವಾಗಿ ನಿರ್ಬಂಧಗಳನ್ನು ಹೇರುವುದು ಸರಿಯಲ್ಲ. ವಾಸ್ತವವಾಗಿ, ವನ್ಯಜೀವಿ ಸಂಘರ್ಷವು ಉದ್ಯಾನವನಗಳ ಸಂರಕ್ಷಣಾ ಪ್ರಯತ್ನಗಳ ಯಶಸ್ಸಿನ ಪರಿಣಾಮವಾಗಿದೆ. ಇದು ಅರಣ್ಯ ಇಲಾಖೆಯ ನಿರ್ವಹಣಾ ವಿಷಯವೇ ಹೊರತು ಪ್ರವಾಸೋದ್ಯಮದ ಸಮಸ್ಯೆಯಲ್ಲ. ಹೆಚ್ಚುತ್ತಿರುವ ಹುಲಿಗಳ ಸಾಂದ್ರತೆ ಮತ್ತು ಜನಸಂಖ್ಯೆಯನ್ನು ಒಟ್ಟಾಗಿ ಹೇಗೆ ನಿರ್ವಹಿಸುವುದು ಎಂಬುದು ಪ್ರಮುಖ ಪ್ರಶ್ನೆ. ಇದಕ್ಕೆ ಪೂರ್ವಭಾವಿ ನಿರ್ವಹಣೆ ಮತ್ತು ಸಾಮೂಹಿಕ ಬೆಂಬಲದ ಅಗತ್ಯವಿದೆ. ಪ್ರವಾಸಿಗರು ನೀಡುವ ಶುಲ್ಕ ಉದ್ಯಾನವನಗಳ ನಿರ್ವಹಣೆಗೆ ಸಹಾಯ ಮಾಡುತ್ತದೆ," ಎಂದು ಹೇಳಿದ್ದಾರೆ.

ಬಂಡೀಪುರ ಮತ್ತು ನಾಗರಹೊಳೆಗಳಲ್ಲಿ ಹುಲಿಗಳ ಸಂಖ್ಯೆ ಹೆಚ್ಚಾಗಿರುವುದು ಸಂರಕ್ಷಣಾ ಕಾರ್ಯದ ಯಶಸ್ಸಿಗೆ ಸಾಕ್ಷಿ ಎಂದು ತಜ್ಞರು ಹೇಳಿದ್ದಾರೆ. ಪ್ರಾಣಿಗಳ ಸಂಖ್ಯೆ ಏರಿಕೆಯಾದಂತೆ ಅವುಗಳ ತನ್ನ ಪ್ರದೇಶಕ್ಕಾಗಿ ಪೈಪೋಟಿ ನಡೆಸುತ್ತವೆ ಹಾಗೂ ದುರ್ಬಲ ಪ್ರಾಣಿಗಳು ಕಾಡಿನಂಚಿನ ಪ್ರದೇಶಗಳಿಗೆ ಬರುತ್ತವೆ. ಇದು ಸಂಘರ್ಷಕ್ಕೆ ದಾರಿಯಾಗುತ್ತದೆ. ಇಂತಹ ಪರಿಸ್ಥಿತಿ ಎದುರಿಸಲು ಪ್ರಾಣಿಗಳ ಸಂಖ್ಯೆಗಳನ್ನು ತಗ್ಗಿಸುವ ತಂತ್ರಗಳು, ಆವಾಸಸ್ಥಾನಗಳ ಸಂಪರ್ಕ ಮತ್ತು ಮುನ್ಸೂಚನೆ ವ್ಯವಸ್ಥೆಗಳ ಅಗತ್ಯ ಎಂದು ಹೇಳಿದ್ದಾರೆ.

ವೈಲ್ಡ್‌ಲೈಫ್ ಕನ್ಸರ್ವೇಶನ್ ಟ್ರಸ್ಟ್‌ನ ಅಧ್ಯಕ್ಷ ಡಾ. ಅನೀಶ್ ಅಂಧೇರಿಯಾ ಮಾತನಾಡಿ, "ಭಾರತದ ಬಹುತೇಕ ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಮೂರು ದಶಕಗಳಿಂದ ವಾಹನ ಸಫಾರಿಗಳು ನಡೆಯುತ್ತಿವೆ. ನಿಯಂತ್ರಿತ ಪ್ರವಾಸೋದ್ಯಮಕ್ಕೂ, ಮಾನವ–ಹುಲಿ ಸಂಘರ್ಷಕ್ಕೂ ಸಂಬಂಧವಿದೆ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ. ಸರ್ಕಾರಿ ಅಂಕಿಅಂಶಗಳ ಪ್ರಕಾರವೇ ಕಳೆದ ಎರಡು ದಶಕಗಳಲ್ಲಿ ಹುಲಿಗಳ ಸಾಂದ್ರತೆ ಮೂರು ಪಟ್ಟು ಹೆಚ್ಚಾಗಿದೆ. ಹುಲಿಗಳು ಹೊಸ ಪ್ರದೇಶಗಳನ್ನು ಹುಡುಕುತ್ತಾ, ಕಿರಿದಾದ ಅರಣ್ಯದ ತುಣುಕುಗಳು ಮತ್ತು ಜನವಸತಿ ಪ್ರದೇಶಗಳ ಮೂಲಕ ಹಾದುಹೋಗುತ್ತವೆ. ತ್ವರಿತ ಅಭಿವೃದ್ಧಿ ಮತ್ತು ಅರಣ್ಯದ ಮೇಲಿನ ಅವಲಂಬನೆಯಿಂದಾಗಿ ಕಾರಿಡಾರ್‌ಗಳು ನಾಶವಾಗಿವೆ. ಆವಾಸಸ್ಥಾನಗಳ ನಾಶ ಸಂಘರ್ಷಕ್ಕೆ ಮುಖ್ಯ ಕಾರಣವೇ ಹೊರತು ಪ್ರವಾಸೋದ್ಯಮವಲ್ಲ. ಸಫಾರಿ ಪುನರಾರಂಭ ಸ್ವಾಗತಾರ್ಹ, ಆದರೆ ಸಂಘರ್ಷಕ್ಕೆ ಶಾಶ್ವತ ಪರಿಹಾರ ಆವಾಸಸ್ಥಾನಗಳ ರಕ್ಷಣೆಯಲ್ಲಿದೆ," ಎಂದು ಸ್ಪಷ್ಟಪಡಿಸಿದ್ದಾರೆ.

ಸಫಾರಿ ಕಾರ್ಯಾಚರಣೆಯು ಕಟ್ಟುನಿಟ್ಟಾದ ನಿಯಂತ್ರಣದಲ್ಲಿದೆ ಮತ್ತು ಸುಸ್ಥಿರತೆಯ ಮಾನದಂಡಗಳಿಗೆ ಅನುಗುಣವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅರಣ್ಯ ಇಲಾಖೆಯೊಂದಿಗೆ ರಚನಾತ್ಮಕವಾಗಿ ಕೆಲಸ ಮಾಡಲು ಬದ್ಧರಾಗಿರುವುದಾಗಿ ಕೆಇಟಿಆರ್‌ಎ ತಿಳಿಸಿದೆ. ಸಫಾರಿ ಪುನರಾರಂಭವು ಸಂರಕ್ಷಣಾ ಯಶಸ್ಸು, ಸಮುದಾಯದ ಸ್ಥಿರತೆ ಮತ್ತು ಪಾರದರ್ಶಕ ಆಡಳಿತವನ್ನು ಒಳಗೊಂಡ ದೀರ್ಘಕಾಲೀನ ಸಹಬಾಳ್ವೆಯ ಮಾದರಿಗಳತ್ತ ಚರ್ಚೆಯನ್ನು ಬದಲಾಯಿಸಲು ಅವಕಾಶ ಒದಗಿಸಿದೆ ಎಂದು ಪ್ರಕಟಣೆ ತಿಳಿಸಿದೆ.

# ಸಮುದಾಯ ಭವನ, ಸಿಸಿ ರಸ್ತೆ ಚರಂಡಿ ಕಾಮಗಾರಿಗೆ ಚಾಲನೆ

ಗುಂಡ್ಲುಪೇಟೆ.:-ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಮುದಾಯ ಭವನ ಮತ್ತು ಸಿ ಸಿ ರಸ್ತೆ ಚರಂಡಿ ನಿರ್ಮಾಣ ಕಾಮಗಾರಿಗೆಳಿಗೆ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಭೂಮಿ ಪೂಜೆ ನೆರವೇರಿಸಿದರು.

ನಂತರ ಶಾಸಕ ಎಚ್ ಎಂ ಗಣೇಶ ಪ್ರಸಾದ್ ಮಾತನಾಡಿ ಈಗಾಗಲೇ ಚಿಕ್ಕಹುಂಡಿ. ತಗ್ಗಲೂರು .ಹಕ್ಕಲಪುರ. ಮತ್ತು ಬೆಟ್ಟದ ಮಾದಹಳ್ಳಿ ಹಾಗೂ ಗ್ರಾಮಗಳಲ್ಲಿ ಸಾಮಾನ್ಯ ವರ್ಗ ದವರ ಬೀದಿಯಲ್ಲಿ 30 ಲಕ್ಷ ರೂ ವೆಚ್ಚದಲ್ಲಿ ಸಿ ಸಿ ರಸ್ತೆ ಮತ್ತು ಚರಂಡಿ ರಾಘವಾಪುರ ಗ್ರಾಮದ ಸಾಮಾನ್ಯ ವರ್ಗದ ಬೀದಿಯಲ್ಲಿ 40 ಲಕ್ಷ ವೆಚ್ಚದ ಸಿ ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಹಾಗೂ ಬೆಳಚಲವಾಡಿ ಮತ್ತು ನಿಟ್ರೆ ಗ್ರಾಮದಲ್ಲಿ ಬಾಬು ಜಗಜೀವನ ರಾಂ ಭವನ ಹಾಗೂ ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದರು

ಇದು 25-26ನೇ ಸಾಲಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಐವತ್ತು ಕೋಟಿ ಅನುದಾನ ಕಾಮಗಾರಿ ನಡೆಸಲಾಗುವುದು ಎಂದು ತಿಳಿಸಿದರು

ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಮಾತನಾಡಿ. ಈಗಾಗಲೇ ಸರ್ಕಾರ ಉತ್ತರ ನೀಡಿದೆ ಪ್ರಾಣಿಗಳಿಂದ ತೊಂದರೆ ಹಾಗುತ್ತಿರುವುದು ನಮ್ಮಲ್ಲಿ



ಟೆರಿಟೇರಿ ಇಲ್ಲಾ ಕಾಡಿನ ಬಗ್ಗೆ ಅಧ್ಯಯನ ಮಾಡಿರುವವರು ಐಎಫ್ಎಸ್ ಅಧಿಕಾರಿ. ಎಸಿಎಫ್ ಗಳು ಹಲವಾರು ಅಧಿಕಾರಿಗಳ ಜೊತೆಗೆ ಸಫಾರಿ ಬಂದ್ ಅದಮೇಲೆ ಕಾರಣ ಏನು ಎಂದು ಸಾಕಷ್ಟು ಚರ್ಚೆ ಮಾಡಿದ್ದೇವೆ ಕಾಡಂಚಿನ ಸುತ್ತಮುತ್ತ ಗ್ರಾಮದ 400ಕ್ಕೂ ಹೆಚ್ಚು ಜನರು ಎಳೆನೀರು ಮತ್ತು ಇತರ ಎಲ್ಲಾ ತರದ ಉದ್ಯೋಗ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ ಜೀವನ ಮಾಡಲಿಕ್ಕೆ ಅವಕಾಶ ಸಿಕ್ಕಿದೆ ಯಾವಾಗ ಕಾಡಿನಿಂದ ನಾಡಿಗೆ ಪ್ರಾಣಿಗಳು ಹೆಚ್ಚಾಗಿತ್ತು ಅವಾಗ ಸರ್ಕಾರ ಸಫಾರಿನ ಬಂದ್ ಮಾಡಿತ್ತು ಅದಾದ ನಂತರ ಮೂರು ತಿಂಗಳು ಅಧ್ಯಯನ ಮಾಡಿದಾರೆ ಆ ರಿಪೋರ್ಟ್ ಕೂಡ ಬಂದಿದೆ ಆ ಪ್ರಕಾರ ಪ್ರಾಣಿಗಳು ಜಾಸ್ತಿ ಆಗ್ತಾ ಇದೆ ಟೆರಿಟೆರಿ ಕಡಿಮೆಯಾಗಿದ್ದು ಹಾಗಾಗಿ ಪ್ರಾಣಿ ಗಳು ಕಾಡಿನಿಂದ ಹೊರಗೆ ಬರುತ್ತಿದ್ದವೆ ಲ್ಯಾಟಿನ ಗಳನ್ನು ಕಡಿಮೆ ಮಾಡಿದರೆ ಪ್ರಾಣಿಗಳು ಹೊರಗೆ ಬರುವುದಿಲ್ಲ ಹಾಗಾಗಿ ಪ್ರಾಣಿಗಳನ್ನು ತಡೆಗಟ್ಟುವುದಕ್ಕೆ

ಟೆಕ್ನಾಲಜಿ ಮತ್ತು ಟೆಕ್ನಿಕಲ್ ಹಾಗೂ ರೈಲ್ವೆ ಬ್ಯಾರಿಕೇಡ್ ಗಳಿಂದ ತಡೆ ಮಾಡಬೇಕು ಅನಧಿಕೃತ ರೆಸಾರ್ಟ್ ಮತ್ತು ಹೋಂ ಸ್ಟೇ ಗಳನ್ನು ತೆರವು ಗೊಳಿಸುವುದಕ್ಕೆ ಸರ್ಕಾರ ಕೂಡ ಸಿದ್ಧವಾಗಿದೆ ನಾವು ಕೂಡ ಸಪೋರ್ಟ್ ಮಾಡುವುದಿಲ್ಲ ಎಂದರು ನಾನು ಯಾವತ್ತೂ ರೈತರ ಪರನೇ ಎಂದರು

ಈ ಸಂದರ್ಭದಲ್ಲಿ ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಮಾಜಿ ಮೈಮುಲ್ ಅಧ್ಯಕ್ಷ ಮಹದೇವಪ್ಪ, ಮಾಜಿ ತಾ.ಪಂ ಅಧ್ಯಕ್ಷ ಬಸವರಾಜು, ಕೋಟೆಕೆರೆ ಪಿಎಸಿಸಿ ಅಧ್ಯಕ್ಷ ಮಹದೇವಸ್ವಾಮಿ, ಬೆಟ್ಟದಮಾದಳ್ಳಿ ಬಿ ಸಿ ಮಹದೇವಸ್ವಾಮಿ , ಹಾಪ್ ಕಾಮ್ಸ್ ಅಧ್ಯಕ್ಷ ನಾಗೇಶ್,ರಾಘವಾಪುರ , ಮಲ್ಲು, ಶಂಕರ,ಗ್ರಾಮ ಪಂ ಮಾಜಿ ಅಧ್ಯಕ್ಷ ತಮ್ಮಯಪ್ಪ, ನಂದೀಶ್, ಮಣಿಕಂಠ, ಮಹೇಶ್, ರಾಘವಾಪುರದ ಮಾಜಿ ಗ್ರಾ.ಪಂ ಅಧ್ಯಕ್ಷರಾದ ಅರ್ ಡಿ , ಉಲ್ಲಾಸ್, ಗೋವಿಂದರಾಜು ಶಂಭುಲಿಂಗಸ್ವಾಮಿ,ದ್ವಾರಕೇಶ್, ಸಿದ್ದಶೆಟ್ಟಿ, ಶಿವಣ್ಣಗೌಡ, ಸಿದ್ದೇಗೌಡ, ಮತ್ತಿತರರಿದ್ದರು.

> ರೈತರು ಕೃಷಿ ಚಟುವಟಿಕೆಗಳಿಗೆ ಜಮೀನುಗಳಿಗೆ ತೆರಳಿ ಮರಳಿ ಮನೆಗೆ ಬರುತ್ತಾರೆ ಎಂಬ ಖಚಿತತೆ ಇಲ್ಲ ಸಫಾರಿ ಸ್ಥಗಿತ ಗೂಳಿಸಿದ್ದರಿಂದ ಕಳೆದ ಮೂರು ತಿಂಗಳಿಂದ ಕಾಡು ಪ್ರಾಣಿ ಗಳ ಹಾವಳಿ ಕಡಿಮೆಯಾಗಿದ್ದು ಮತ್ತೆ ಸಫಾರಿ ಓಪನ್ ಅದ್ದ ರಿಂದ ಪ್ರಾಣಿಗಳು ಮತ್ತೆ ತೊಂದರೆ ಮಾಡು ತ್ತಿದೆವೆ ಅರಣ್ಯದೊಳಗೆ ಇರುವ ರೆಸಾರ್ಟ್ ಮತ್ತು ಹೋಂಸ್ಟೇಗಳನ್ನು ಮಾನ್ಯ ಮುಖ್ಯ ಮಂತ್ರಿಗಳು ಮತ್ತೆ ಸಚಿವರ ಜೊತೆ ಮಾತನಾಡಿ ಬಂದ್ ಮಾಡಿಸಿ ರೈತರ ಪರವಾಗಿ ಧ್ವನಿ ಎತ್ತಿ.
>
> **ಷಣ್ಮುಗಪ್ಪ** ರೈತ ಮುಖಂಡ

## ಶ್ರೀಲಕ್ಷ್ಮೀನಾರಾಯಣಸ್ವಾಮಿ ಬ್ರಹ್ಮ ರಥೋತ್ಸವ



ಕೆ.ಆರ್.ಪೇಟೆ ತಾಲ್ಲೂಕಿನ ಹೊಸಹೊಳಲು ಗ್ರಾಮದ ಆರಾಧ್ಯ ದೈವ ಶ್ರೀಲಕ್ಷ್ಮೀ ನಾರಾಯಣಸ್ವಾಮಿಯವರ ಬ್ರಹ್ಮರಥೋತ್ಸವವು ಸಾವಿರಾರು ಭಕ್ತಾದಿಗಳ ಜಯಘೋಷಗಳ ನಡುವೆ ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ನಡೆಯಿತು.. ಶಾಸಕ ಹೆಚ್.ಟಿ.ಮಂಜು, ಸಮಾಜ ಸೇವಕರಾದ ಮಲ್ಲಿಕಾರ್ಜುನ, ಸೋಮಶೇಖರ್, ಗ್ರೇಡ್-2 ತಹಶೀಲ್ದಾರ್ ಲೋಕೇಶ್ ಹಾಗೂ ದೇವಾಲಯದ ಧರ್ಮದರ್ಶಿಗಳಾದ ರಾಮ ಚಂದ್ರ ಅವರು ಶ್ರೀಲಕ್ಷ್ಮೀ ನಾರಾಯಣಸ್ವಾಮಿಯವರ ಉತ್ಸವಮೂರ್ತಿಗೆ ಸಾಂಪ್ರದಾಯಕ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು. ಉಘೇ..ಗೋವಿಂದ ಗೋವಿಂದ.. ಉಘೇ ವೆಂಕಟರಮಣ, ಉಘೇ ಶ್ರೀನಿವಾಸ ಎಂಬ ಜಯಘೋಷಗಳು ಮುಗಿಲು ಮುಟ್ಟಿದ್ದವು.

ಮಲ್ಲಿಕಾರ್ಜುನ ಮಾತನಾಡಿ ಹಬ್ಬ ಹರಿದಿನಗಳು ಜಾತ್ರೆ ಉತ್ಸವ ಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗಿದೆ ರಥೋತ್ಸವದ ಸಂಭ್ರಮ ದಲ್ಲಿ ಎಲ್ಲಾ ಜಾತಿ ವರ್ಗಗಳ ಜನರು ಒಂದಾಗಿ ಭಗವಂತನ ನಾಮ ಸ್ಮರಣೆ ಮಾಡಿದಾಗ ಸಾಮಾಜಿಕ ಅಸಮಾನತೆ ದೂರಾಗಿ ಪರಸ್ಪರ ಪ್ರೀತಿ ವಿಶ್ವಾಸ ಸ್ನೇಹ ಸೌಹಾರ್ದತೆ ಮೂಡಲಿದೆ ಇಂದಿನ ರಥೋತ್ಸವ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತಾದಿಗಳು ಆಗಮಿಸಿ , ಶ್ರೀರಥದ ಕಳಸಕ್ಕೆ ಹಣ್ಣು ಜವನವನ್ನು ಸಮರ್ಪಿಸಿ ಧನ್ಯತಾ ಭಾವನೆಯನ್ನು ಮೆರೆದಿದ್ದಾರೆ ಎಂದು ಹೇಳಿದರು.

ರಥೋತ್ಸವದ ಸಂದರ್ಭದಲ್ಲಿ ಕುರುಹಿನಶೆಟ್ಟಿ ಸಮಾಜದ ಬಂಧು ಗಳು ನೆರೆದಿದ್ದ ಸಾವಿರಾರು ಭಕ್ತಾದಿಗಳಿಗೆ ಮಜ್ಜಿಗೆ ಹಾಗು ಪಾನಕವನ್ನು ವಿತರಿಸಿ, ಬಿಸಿಲಿನ ಜಳದ ತೀವ್ರತೆಯಿಂದ ದಣಿವಾರಿಸಿಕೊಳ್ಳಲು ನೆರವಾದರು. ರಾಜ್ಯದ ಮಾಜಿ ಸಚಿವ ಡಾ. ಕೆ.ಸಿ.ನಾರಾಯಣಗೌಡ, ಮಾಜಿ ಶಾಸಕರಾದ ಬಿ.ಪ್ರಕಾಶ್, ಕೆ.ಬಿ. ಚಂದ್ರಶೇಖರ್, ಮಂಡ್ಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಎಚ್.ಕೆ. ಅಶೋಕ್, ಪುರಸಭಾ ಅಧ್ಯಕ್ಷೆ ಪಂಕಜಾ ಪ್ರಕಾಶ್, ಸದಸ್ಯರಾದ ಹೆಚ್. ಆರ್.ಲೋಕೇಶ್, ಹೆಚ್.ಎನ್.ಪ್ರವೀಣ್, ಎಚ್.ಡಿ.ಅಶೋಕ್, ಕಲ್ಪನಾ ದೇವರಾಜು, ಕೆ.ಬಿ.ಮಹೇಶ್, ಹೆಚ್.ಜೆ.ಶ್ರೀನಿವಾಸ್, ಪುರಸಭೆ ಮುಖ್ಯ ಅಧಿಕಾರಿ ಅಶೋಕ್, ಪಟ್ಟಣ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಸುಮಾರಾಣಿ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸುಷ್ಮಾ, ಪರಿಸರ ಇಂಜಿನಿಯರ್ ಪ್ರಿಯಾಂಕ ಪುರ ಸಭೆಯ ಸಹಾಯಕ ಇಂಜಿನಿಯರ್ ಚೌಡಪ್ಪ, ನೇಕಾರ ಕುರುಹಿನ ಶೆಟ್ಟಿ ಸಮಾಜದ ಮುಖಂಡರಾದ ರೈಸ್ ಮಿಲ್ ಗುಂಡಣ್ಣ, ಡಾ. ಶ್ರೀನಿವಾ ಸಶೆಟ್ಟಿ, ನಂದಕುಮಾರ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ವಿಜಯಲಕ್ಷ್ಮಿ ರಾಜಶೇಖರ್, ಮುಖಂಡರಾದ ಶಂಕರೇಗೌಡ ಬೇಕರಿ ಶೇಖರ್, ಬಾಳೆಕಾಯಿ ಬಸವೇಗೌಡ, ಪ್ರತಿಭಾ ಮಹಿಳಾ ಮಂಡಳಿಯ ಅಧ್ಯಕ್ಷೆ ಕೆ.ಮಂಜುಳಾ ಚೆನ್ನಕೇಶವ, ಅರವಟ್ಟಿಗೆ ಸೇವಾರ್ಥದಾರರಾದ ಕೃಷಿ ವಿಜ್ಞಾನಿ ಡಾ.ಮಂಜುನಾಥ್ ಸೇರಿದಂತೆ ಸಾವಿರಾರು ಭಕ್ತಾದಿಗಳು ರಥೋತ್ಸವದಲ್ಲಿ ಭಾಗವಹಿಸಿ ತೇರನ್ನು ಎಳೆದು ರಥದ ಕಳಸಕ್ಕೆ ಹಣ್ಣು ಜವನವನ್ನು ಸಮರ್ಪಿಸಿ ಕೃತಾರ್ಥರಾದರು

## ನಾಲ್ವಡಿ ಪ್ರತಿಮೆ ಸ್ಥಾಪನೆಗೆ ನವೀನ್ ಮನವಿ

ಮೈಸೂರು: ಮೈಸೂರು ಜಿಲ್ಲೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅಪಾರವಾಗಿದೆ. ಹೀಗಾಗಿ ಪಾಲಿಕೆಯ ಎಲ್ಲ ವಾರ್ಡ್ ಹೆಬ್ಬಾಗಿಲುಗಳಲ್ಲಿ ಅವರ ಪ್ರತಿಮೆ ಸ್ಥಾಪಿಸಿ, ಭಾವಚಿತ್ರ ಇರಿಸಬೇಕೆಂದು ವಿಶ್ವಜ್ಞಾನಿ ಯೂತ್ಸ್ ಅಸೋಸಿಯೇಷನ್ ಅಧ್ಯಕ್ಷ ನವೀನ್ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದೇ ರೀತಿಯಲ್ಲಿ ಹಲವು ಸಮಸ್ಯೆ ಸಿಎಂ ಹಾಗೂ ಗೃಹ ಸಚಿವರ ಮುಂದಿರಿಸಿ, ಮಕ್ಕಳ ಕೈಗೆ ಮೊಬೈಲ್ ನೀಡುವುದನ್ನು ನಿಷೇಧಿಸುವ ಚಿಂತನೆ ಸ್ವಾಗತಾರ್ಹ. ಇದೇ ವೇಳೆ ಕಾರ್ಯಕ್ರಮ, ಸಮಾರಂಭಗಳ ಫ್ಲೆಕ್ಸ್‌ಗಳಲ್ಲಿ ಮಕ್ಕಳ ಫೋಟೋ ಬಳಕೆ ಸಹಾ ನಿಷೇಧಿಸಬೇಕು, ಪ್ರತಿಯೊಂದೂ ಫ್ಲೆಕ್ಸ್‌ಗೆ ಸಂಬಂಧಿಸಿದ ಠಾಣೆಗಳಲ್ಲಿ ನಿರಪೇಕ್ಷಣಾ ಪತ್ರ ಪಡೆಯುವುದು ಕಡ್ಡಾಯವಾಗಿಸಬೇಕೆಂದರು.

ಸರ್ಕಾರಿ ಕಚೇರಿ, ನಿಗಮ ಮಂಡಳಿಗಳಿಗೆ ಗುತ್ತಿಗೆ ಆಧಾರದ ಮೇಲೆ ವಾಹನ ಪಡೆಯುವ ವೇಳೆ ಕ್ರೀಡಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರಿಗೆ ಶೇ. 25 ಮೀಸಲಾತಿ ಕಲ್ಪಿಸಬೇಕು, ಪೌರ ಕಾರ್ಮಿಕರಿಗೂ ಆದ್ಯತೆ ನೀಡಬೇಕು, ಗ್ರಾಮೀಣ ಪ್ರದೇಶಗಳಿಗೆ ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಕ್ಯಾನ್ಸರ್ ಪತ್ತೆ ಸಂಚಾರಿ ಘಟಕ ಹೆಚ್ಚಾಗಿ ಭೇಟಿ ನೀಡುವಂತೆ ವ್ಯವಸ್ಥೆ ಮಾಡಬೇಕು, ಸರ್ಕಾರ ಗುತ್ತಿಗೆ ವಾಹನ ಪಡೆಯುವ ವೇಳೆ ವಿದ್ಯುತ್ ಚಾಲಿತ ವಾಹನಗಳನ್ನು ಕಡ್ಡಾಯಗೊಳಿಸಬೇಕು. ಕ್ಷೀರಭಾಗ್ಯ ಯೋಜನೆಗೆ ನಂದಿನಿ ಉತ್ಪನ್ನ, ಸಿರಿಧಾನ್ಯ ಬಿಸ್ಕೆಟ್ ವಿತರಿಸಬೇಕೆಂದು ಸಹಾ ಸಲಹೆ ನೀಡಿದರು.



# ಬುಡಕಟ್ಟು ಸಂಸ್ಕೃತಿ ಭಾರತೀಯ ಸಂಸ್ಕೃತಿಯ ಜೀವ

### ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀ ನಾರಾಯಣ ಶೆಣೈ ಅಭಿಮತ । ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ

ಮೈಸೂರು: ಬುಡಕಟ್ಟು ಜನರ ಸಂಸ್ಕೃತಿ ಭಾರತೀಯ ಸಂಸ್ಕೃತಿಯ ಜೀವಜಲವಾಗಿದೆ ಎಂದು ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷಿ ಮೀನಾರಾಯಣ ಶೆಣೈ ತಿಳಿಸಿದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ನಡೆದ ಬುಡಕಟ್ಟು ಜನರ ಆರೋಗ್ಯ ಮತ್ತು ಆರೋಗ್ಯ ರಕ್ಷಣಾ ಪದ್ಧತಿಗಳ ಮೇಲೆ ಜಾಗತೀಕರಣ ಮತ್ತು ಸಾಂಸ್ಕೃತಿಕ ನಂಬಿಕೆಗಳ ಪ್ರಭಾವ ಕುರಿತ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಬುಡಕಟ್ಟು ಜನರು ಅರಣ್ಯವನ್ನು ಪೋಷಿಸುತ್ತಾರೆ, ದೇವರೆಂದು ಪೂಜಿಸುತ್ತಾರೆ. ವಾಸಿಯಾಗದ ಕಾಯಿಲೆಗೂ ಬುಡಕಟ್ಟು ಜನರಲ್ಲಿ ಔಷಧವಿದೆ. ಬುಡಕಟ್ಟು ಸಂಸ್ಕೃತಿ ಭಾರತೀಯ ಪರಂಪರೆಯನ್ನು ಸಂರಕ್ಷಿಸಿದೆ. ಪ್ರತಿಯೊಂದು ಗಿಡಮೂಲಿಕೆಯು ಔಷಧಿಯಾಗಿದೆ. ಔಷಧಿಯ ಬಗ್ಗೆ ತಿಳಿದುಕೊಳ್ಳಬೇಕಾದರೆ ವನಚರರನ್ನು ಕೇಳಬೇಕು. ಬುಡಕಟ್ಟು ಜನರನ್ನು ಕೇಳಬೇಕು. ಇಂದು ಉದಾರೀಕರಣ ಜಾಗತೀಕರಣದ ಯುಗದಲ್ಲಿ ಗಿಡಮೂಲಕೆ ಔಷಧಿಗಳನ್ನು ಮೂಢ ನಂಬಿಕೆ ಎನ್ನುತ್ತೇವೆ. ಈ ಕಾರ್ಯಾಗಾರ ಓರಿಯನ್ ಟೇಷನ್‌ಗೆ ರಹದಾರಿಯಾಗಿದ್ದು, ಬುಡಕಟ್ಟು ಸಂಸ್ಕೃತಿ ಎಂದರೇನು? ಬುಡಕಟ್ಟು ಜನಾಂಗದ ವೈಶಿಷ್ಟ ಗಳೇನು? ಅವರ ವೈಜ್ಞಾನಿಕ ಕೆಲಸಗಳೇನು ಎಂಬುದರ ಬಗ್ಗೆ ದಾಖಲೀಕರಣವಾಗಬೇಕು. ನಾವು ಸಹ ನೀವು ಮಾಡುವ ಒಳ್ಳೆಯ ಕೆಲಸಗಳಿಗೆ ನಿಮ್ಮ ಜೊತೆಗಿರುತ್ತೇವೆ ಎಂದರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಟಿ.ಯೋಗೀಶ್ ವೀಡಿಯೋ




ಕಾನ್ಫರೆನ್ಸ್ ಮೂಲಕ ಮಾತನಾಡಿ, ಈ ಕಾರ್ಯಾಗಾರದಲ್ಲಿ ಬುಡಕಟ್ಟು ಮುಖಂಡರಿಂದ ಪ್ರಬಂಧ ಮಂಡಿಸುವವರಿಂದ ಬುಡಕಟ್ಟು ಜನರ ಆರೋಗ್ಯ ಸುಧಾರಣೆಗೆ ಬರುವ ಸಲಹೆ ಸೂಚನೆಗಳನ್ನು ಸಂಕ್ಷಿಪ್ತವಾಗಿ ನಮಗೆ ಕಳಿಸಿದರೆ ಬಜೆಟ್‌ನ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಿ ಸರ್ಕಾರದ ಗಮನಕ್ಕೆ ತಂದು ಬುಡಕಟ್ಟು ಜನರಿಗೆ ಅನುಕೂಲ ಮಾಡಿಕೊಡಲು ಪ್ರಯತ್ನಿಸಲಾಗುವುದು ಎಂದರು.

ಕಾರ್ಯಾಗಾರದಲ್ಲಿ ಕಾವೇರಿ ಆಯುರ್ವೇದ ಮೆಡಿಕಲ್ ಕಾಲೇಜಿನ ವೈದ್ಯಕೀಯ ಅಧೀಕ್ಷಕ ಡಾ. ಕೆ.ಪೂರ್ಣಿಮಾ ಮೂರ್ತಿ, ಲೆಕ್ಕಾಧಿಕಾರಿ ಬಿ.ಆರ್.ಭವ್ಯ, ಕಛೇರಿ ಅಧೀಕ್ಷಕಿ ಎಂ.ವಿ.ನಾಗರತ್ನ, ಡಾ. ಕೃಷ್ಣಮೂರ್ತಿ, ಡಾ.ದಿನೇಶ್, ಡಾ.ರಾಮಕೃಷ್ಣಯ್ಯ, ಡಾ.ಕಲಾವತಿ, ಡಾ.ಟಿ.ಎಸ್.ವೆಂಕಟೇಶ್, ಡಾ. ಮೋಹನ್ ಕುಮಾರ್, ಡಾ.ರವಿಕುಮಾರ್, ಭರತ್‌ಕುಮಾರ್, ಮನೋಜ್ ಕುಮಾರ್ ಹಾಜರಿದ್ದರು.

### 63 ಪ್ರಬಂಧಗಳು ಮಂಡನೆ

ಕರ್ನಾಟಕ ರಾಜ್ಯ ಬುಡಕಟ್ಟು ಸಂಸ್ಥೆಯ ಉಪನಿರ್ದೇಶಕಿ ಹೆಚ್.ಎಸ್.ಗಿರಿಜಾಂಬ ಮಾತನಾಡಿ ಈ ಕಾರ್ಯಾಗಾರಕ್ಕೆ ಆಂಧ್ರಪ್ರದೇಶ, ಕೇರಳ, ತೆಲಂಗಾಣ, ದೆಹಲಿಯಿಂದಲು ಪ್ರಬಂಧ ಮಂಡಿ ಸಲು ಬಂದಿದ್ದಾರೆ. ಸುಮಾರು 63 ಪ್ರಬಂಧಗಳು ಮಂಡನೆಯಾಗಿವೆ. ಇದರಲ್ಲಿ ಗುಣಮಟ್ಟದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾ ಗುವುದು. ಮುಂದಿನ ಕಾರ್ಯಾಗಾರದೊಳಗೆ ಒಂದು ಜರ್ನಲ್ ಅನ್ನು ಸಹ ಬಿಡುಗಡೆ ಮಾಡಲು ಪ್ರಯತ್ನಿಸುತ್ತೇವೆ. ಟಿ.ಆರ್.ಐ. ತಂಡ ಡಾ. ದಿನೇಶ್ ಕೆ.ಡಿ. ನೇತೃತ್ವದಲ್ಲಿ ಈ ಕಾರ್ಯಾಗಾರವನ್ನು ಯಶಸ್ವಿಯಾಗಿ ನಡೆಸಿದೆ ಎಂದರು.

## ಮಾ.22ಕ್ಕೆ ಅಂಬೇಡ್ಕರ್ ಜಯಂತಿ ಅಂಗವಾಗಿ ಪ್ರಬಂಧ ಸ್ಪರ್ಧೆ



ಮೈಸೂರು: ದಲಿತ ಸಂಘರ್ಷ ಸಮಿತಿ ಬಣ ರಹಿತ ಮೈಸೂರು ಜಿಲ್ಲಾ ವಿಭಾಗವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಮಾ.22ರಂದು ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಜಿಲ್ಲಾ ಸಂಚಾಲಕ ಉಮಾ ಮಹದೇವ ರಾಜು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಬಂಧ ಸ್ಪರ್ಧೆಯನ್ನು ಹಲವಾರು ಸಂಘಟನೆ, ಸಂಘ ಸಂಸ್ಥೆಗಳ ಸಹಕಾರದಲ್ಲಿ ಹಮ್ಮಿಕೊಳ್ಳಲಾಗಿದೆ. ಸ್ಪರ್ಧೆಯಲ್ಲಿ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಯ ಪ್ರಥಮ ದರ್ಜೆ ವಿದ್ಯಾರ್ಥಿಗಳು ಭಾಗವಹಿಸಬುದಾಗಿದೆ. ಡಾ.ಬಿ.ಆರ್ ಅಂಬೇಡ್ಕರ್ ಅವರ ಜಯಂತಿ ಪ್ರಯುಕ್ತ, ಡಾ.ಬಿ.ಆರ್. ಅಮಬೇಡ್ಕರ್ ಅವರ ಬದುಕು, ಸಾಧನೆಗಳು ಹಾಗೂ ದೇಶದಭವಿಷ್ಯದ ಬಗ್ಗೆ ಅವರ ಚಿಂತನೆಗಳು ಹಾಗೂ ಭಾರತ ಸಂವಿಧಾನದಿಂದ ನಾವು ಕಲಿಯ ಬೇಕಿರುವುದು ಏನನ್ನು?' ಎಂಬ ವಿಚಿಯ ಕುರಿತು ವಿದ್ಯಾರ್ಥಿಗಳು ಪ್ರಬಂಧ ರಚಿಸಬೇಕಿದೆ ಎಂದು ಮಾಹಿತಿ ನೀಡಿದರು.

ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸುವವರು, ಅರ್ಹತಾ ಪರೀಕ್ಷೆಯನ್ನು ಬರೆಯಬೇಕಿದ್ದು, ಅದಕ್ಕೂ ಮೊದಲು ನೊಂದಣಿಯಾಗಬೇಕಿದೆ. ನೊಂದಣಿಯಾಗಲು ಮಾ.9ರಂದು ಕೊನೆಯ ದಿನಾಂಕವಾಗಿದ್ದು, ಅಂದೇ ಅರ್ಹತಾ ಪರೀಕ್ಷೆ ನಡೆಯಲಿದೆ. ಪ್ರಬಂದ ಸ್ಪರ್ಧೆ ಮಾ.22 ರಂದು ನಡೆಯಲಿದೆ ಎಂದು ತಿಳಿಸಿದರು. ವಿಜೇತರಿಗೆ ಪ್ರಥಮ ಬಹುಮಾನ 37 ಸಾವಿರ ರೂ. ಮೌಲ್ಯದ ಟ್ಯಾಬ್ ನೀಡಲಾಗುವುದು, ದ್ವಿತೀಯ ಬಹುಮಾನ ಇಬ್ಬರಿಗೆ ತಲಾ 5 ಸಾವಿರ.ರೂ., ತೃತೀಯ ಬಹುಮಾನ ಮೂವರಿಗೆ ತಲಾ 2 ಸಾವಿರ ರೂ. ನೀಡಲಾಗುತ್ತದೆ. ವಿಶೇಷ ಚೇತನ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದ್ದು, ವಿಶೇಷ ವಾಗಿ ಪರಿಗಣಿಸಿ ಅವರ ವಿಭಾಗದಲ್ಲಿ ವಿಜೇತರಾದವರಿಗೆ 5 ಸಾವಿರ ರೂ. ಬಹುಮಾನ ನೀಡಲಾಗುತ್ತದೆ ಎಂದರು. ಹೆಚ್ಚಿನ ಮಾಹಿತಿಗಾಗಿ 9663636201, 7829799189 ಸಂಪರ್ಕಿಸಬಹುದು. ಕುಮಾರ್ ಇದ್ದರು.

# ತವರಿನ ಬೇಡಿಕೆಗಳನ್ನು ಮುಖ್ಯಮಂತ್ರಿ ಈಡೇರಿಸಲಿ

ಮೈಸೂರು: ತಮ್ಮ "ದಾಖಲೆಯ" ಬಜೆಟ್ ನಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ತಮ್ಮ ತವರು ಜಿಲ್ಲೆಯ ಬಹು ದಿನಗಳ ಬಹು ಮುಖ್ಯ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಬಿಜೆಪಿ ನಾಯಕ, ಖ್ಯಾತ ನರರೋಗ ತಜ್ಞ ಡಾ.ಸುಶ್ರುತ ಗೌಡ ಆಗ್ರಹಿಸಿದರು.

ದಾಖಲೆಯ ಬಜೆಟ್ ಹೆಸರಿಗಷ್ಟೇ ದಾಖಲೆಯಾಗದೆ ಮೈಸೂರು ಜಿಲ್ಲೆಯ ಪಾಲಿಗೂ ದಾಖಲೆ ಪ್ರಮಾಣದ ಅನುದಾನ ನೀಡಲು ವೇದಿಕೆಯಾಗಬೇಕು. ಭವಿಷ್ಯದರ್ಶಿ ಮಹಾ ಮೈಸೂರು ನಾಗರೀಕ ವೇದಿಕೆಯ ಮೂಲಕ, ಮೈಸೂರು ನಗರದ ಸಮಸ್ಯೆಗಳಿಗೆ ಪರಿಹಾರ ಕಂಡು ಹುಡುಕಲು ಹೋರಾಟ ನಡೆಸುತ್ತಿರುವ ಡಾ. ಗೌಡ, ಈ ಬಾರಿಯ ಬಜೆಟ್ ಮೈಸೂರು ಪರಂಪರೆ, ಸುಸ್ಥಿರ ಅಭಿವೃದ್ಧಿ, ಹಾಗು ಮಹಾ ಮೈಸೂರು ಮಹಾ ನಗರಪಾಲಿಕೆ ರೂಪಣೆಗೆ ಸಂಬಂಧಿಸಿದಂತೆ ಕನಿಷ್ಠ ಒಂದು ಸಾವಿರ ಕೋಟಿ ಅನುದಾನವನ್ನು ಮೀಸಲಿಡಬೇಕು. ಇಷ್ಟು ಹಣಕಾಸು ಬೆಂಬಲ ಸದ್ಯದ ತುರ್ತಾಗಿದೆ. ಮೈಸೂರು ಎಂದರೆ ಪರಂಪರೆ ಹಾಗು ಪ್ರವಾಸೋದ್ಯಮ. ಈ ಎರಡು ಕ್ಷೇತ್ರಗಳು ನಗರದ ಅಭಿವೃದ್ಧಿಯ ಕಣ್ಣಿದ್ದಂತೆ. ಈ ಹಿನ್ನಲೆಯಲ್ಲಿ ಮುಖ್ಯಮಂತ್ರಿ ತಮ್ಮ ತವರು ಜಿಲ್ಲೆಗೆ ವಿಶೇಷ ನಿಧಿ- ಯೋಜನೆಯನ್ನು ಬಜೆಟ್ ನಲ್ಲಿ ಘೋಷಿಸಬೇಕು ಎಂದು ಮನವಿ ಮಾಡಿದ್ದಾರೆ.

ಮೈಸೂರಿನಲ್ಲಿ ಯೋಗ, ಕ್ರೀಡೆ, ಸಂಸ್ಕೃತಿ, ಕೈಗಾರಿಕೆಗಳ ಅಭಿವೃದ್ಧಿಗೆ ಇನ್ನು ಅಗತ್ಯವಾದ ಮೂಲ ಸೌಕರ್ಯ ಸಿದ್ಧಗೊಂಡಿಲ್ಲ. ಆರೋಗ್ಯ ವ್ಯವಸ್ಥೆ ಕೂಡಾ ಅತೀವ ಒತ್ತಡದಲ್ಲಿದೆ. ಈ ಹಿನ್ನಲೆಯಲ್ಲಿ ಮೈಸೂರು ಮಹಾನಗರದ ಮುಂದಿನ ಸುಮಾರು 20-30 ವರ್ಷಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಯೋಜನೆ ರೂಪಿಸಬೇಕಿದೆ ಎಂದು ಆಗ್ರಹಿಸಿದರು. ಸುಸ್ಥಿರ ಅಭಿವೃದ್ಧಿಗೆ ಒತ್ತು ನೀಡಲಿ: ಮೈಸೂರು ನಗರದ ಒಳಗೆ ಈಗ ಅನಗತ್ಯವಾಗಿ ಎರಡು ಫ್ಲೈ ಓವರ್ ಪ್ರಸ್ತಾಪಿಸಲಾಗಿದೆ. ಇಂತಹ ಯೋಜನೆಗೆ ಯಾವುದೇ ಅನುದಾನ ನೀಡಬಾರದು. :"ಸಮಸ್ತ ಮೈಸೂರು ನಗರದ ಜನರ ಭಾವನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮುಖಮಂತ್ರಿಗಳು ಯೋಜನೆ ರೂಪಿಸಬೇಕಿದೆ. ಜಿಲ್ಲೆ ನಗರ ಹಾಗು ಗ್ರಾಮೀಣ ಪ್ರದೇಶಗಳೆರಡನ್ನು ಹೊಂದಿವೆ. ಇಂದಿಗೂ ಇಲ್ಲಿ ತುರ್ತು ಪರಿಸ್ಥಿತಿಗಳಲ್ಲಿ ಜನ ಸಾಮಾನ್ಯರಿಗೆ ಗುಣಮಟ್ಟದ ಚಿಕಿತ್ಸೆ ದೊರೆಯುತ್ತಿಲ್ಲ. ಈ ಹಿನ್ನಲೆಯಲ್ಲಿ, ಆಧುನಿಕ ವ್ಯವಸ್ಥೆ ಮೂಲಕ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಬೇಕಿದೆ ಎಂದರು.



ಬಿಜೆಪಿ ನಾಯಕ, ಖ್ಯಾತ ನರರೋಗ ತಜ್ಞ ಡಾ.ಸುಶ್ರುತ ಗೌಡ ಆಗ್ರಹ

## ಮೈಸೂರಲ್ಲಿ ಮಕ್ಕಳ ದತ್ತು ಯಶಸ್ವಿ

ಮೈಸೂರು: ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ದತ್ತು ಪೂರ್ವ ಸಭೆಯಲ್ಲಿ ಸರ್ಕಾರಿ ವಿಶೇಷ ದತ್ತು ಕೇಂದ್ರದ ಒಟ್ಟು 3 ಮಕ್ಕಳನ್ನು ನಿಯಮಾನಸಾರ ಸ್ವದೇಶಿ ದತ್ತು ಹಾಗೂ ಸರ್ಕಾರೇತರ ವಿಶೇಷ ದತ್ತು ಕೇಂದ್ರವಾದ ಶ್ರೀ ಛಾಯಾದೇವಿ ವಿಶೇಷ ದತ್ತು ಕೇಂದ್ರದಿಂದ ಒಟ್ಟು 3 ಮಕ್ಕಳನ್ನು ಇದರಲ್ಲಿ 2 ಮಕ್ಕಳನ್ನು ಸ್ವದೇಶಿ ದತ್ತು ಹಾಗೂ 1 ಮಗುವನ್ನು ವಿದೇಶಿ (ಸ್ಪೇನ್) ಪೋಷಕರಿಗೆ ನಿಯಮಾನುಸಾರ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ದತ್ತು ಪ್ರಕ್ರಿಯಗೆ ಒಳಪಡಿಸಲಾಯಿತು.

ಮಕ್ಕಳನ್ಯಾಯ(ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಕಲಂ 56 ರಿಂದ 61ಕ್ಕೆ ಅನುಗುಣವಾಗಿ ಕಾನೂನುಬದ್ಧವಾಗಿ ದತ್ತು ಪಡೆಯಬಹುದಾಗಿರುತ್ತದೆ. ಈ ಕಾಯ್ದೆಗೆ ಪೂರಕವಾಗಿ ದತ್ತು ನಿಯಮಾವಳಿಗಳು 2022ರಲ್ಲಿ ಜೈವಿಕ ತಂದೆ-ತಾಯಿಗಳಿಂದ ಬೇರ್ಪಟ್ಟ 18 ವರ್ಷದೊಳಗಿನ ಅನಾಥ, ಪರಿತ್ಯಕ್ತ, ಒಪ್ಪಿಸಲ್ಪಟ್ಟ ಮಕ್ಕಳು, ಮಕ್ಕಳ ಪಾಲನಾ ಸಂಸ್ಥೆಯಲ್ಲಿ ದೀರ್ಘಕಾಲವಧಿಯಲ್ಲಿದ್ದು, ಪೋಷಕರು ಸಂಪರ್ಕಕ್ಕೆ ಸಿಗದಂತಹ ಮಕ್ಕಳು ಹಾಗೂ ಮಕ್ಕಳನ್ನು ಸಾಕಲು ಅನರ್ಹರಾಗಿರುವಂತಹ ಪೋಷಕರ ಮಕ್ಕಳಿಗೆ ಪ್ರೀತಿ, ವಾತ್ಸಲ್ಯ ಮತ್ತು ಮಮತೆಯನ್ನು ನೀಡಿ ಆರೈಕೆ, ಪಾಲನೆ, ಪೋಷಣೆ ಹಾಗೂ ಪುನರ್ವಸತಿ ಕಲ್ಪಿಸಲು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿದೆ. ಮೈಸೂರು ಜಿಲ್ಲೆಯಲ್ಲಿ 2022-23ನೇ ಸಾಲಿನಿಂದ ಸರ್ಕಾರಿ ವಿಶೇಷ ದತ್ತು ಕೇಂದ್ರ ಹಾಗೂ ಸರ್ಕಾರೇತರ ವಿಶೇಷ ದತ್ತು ಕೇಂದ್ರವಾಗಿ ಶ್ರೀ ಛಾಯಾದೇವಿ ವಿಶೇಷ ದತ್ತು ಕೇಂದ್ರವು ಪ್ರಸ್ತುತ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಎರಡು ಸಂಸ್ಥೆಯಿಂದ 41 ದೇಶೀಯ ಹಾಗೂ 06 ವಿದೇಶಕ್ಕೆ ಮಕ್ಕಳನ್ನು ದತ್ತು ನೀಡಲಾಗಿದೆ.

### ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಸೂಚನೆ

# ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು ತುರ್ತು ಕ್ರಮ ವಹಿಸಿ

ಚಾಮರಾಜನಗರ, ಜಿಲ್ಲೆಯ ಯಾವುದೇ ಭಾಗದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಅಗತ್ಯ ಪ್ರಮಾಣದಲ್ಲಿ ಸಮರ್ಪಕವಾಗಿ ನೀರು ಸರಬರಾಜು ಮಾಡಲು ಅಧಿಕಾರಿಗಳು ತುರ್ತು ಕ್ರಮ ತೆಗೆದುಕೊಳ್ಳುವಂತೆ ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಹನೂರು ತಾಲೂಕಿನ ಮಲೆಮಹದೇಶ್ವರ ಬೆಟ್ಟದ ನಾಗಮಲೆ ಭವನದಲ್ಲಿಂದು ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಲಭ್ಯತೆ ಹಾಗೂ ವಿಪತ್ತು ನಿರ್ವಹಣೆ ಸಂಬಂಧ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕುಡಿಯುವ ನೀರು ಸಮಸ್ಯೆ ಇರುವ ಗ್ರಾಮಗಳ ಕುರಿತು ಮಾಹಿತಿ ಪಡೆದ ಜಿಲ್ಲಾ ಉಸ್ತುವಾರಿ ಸಚಿವರು ಪ್ರಸ್ತುತ ಬೇಸಿಗೆ ಆರಂಭವಾಗಿದೆ. ಸಮಸ್ಯಾತ್ಮಕ ಗ್ರಾಮಗಳೆಂದು ಗುರುತಿಸಿರುವ ಕಡೆ ಆದ್ಯತೆ ಮೇರೆಗೆ ನೀರು ಒದಗಿಸುವುದು ನಮ್ಮ ಜವಾಬ್ದಾರಿಯಾಗಿದೆ. ಖಾಸಗಿ ಬೋರ್ವೆಲ್, ಟ್ಯಾಂಕರ್ ಸೇರಿದಂತೆ ಪರ್ಯಾಯ ವಿಧಾನಗಳ ಮೂಲಕ ಕುಡಿಯುವ ನೀರನ್ನು ಪೂರೈಸಬೇಕು. ಜೊತೆಗೆ ಮನೆಯ ದಿನಬಳಕೆಗಾಗಿ ಅಗತ್ಯವಿರುವ ನೀರನ್ನೂ ಸಹ ಒದಗಿಸಬೇಕು ಎಂದರು.



ಕುಡಿಯುವ ನೀರಿನ ಸಮಸ್ಯೆ ಇರುವ ಕಡೆ ಅಧಿಕಾರಿಗಳು ಹೆಚ್ಚು ಭೇಟಿ ನೀಡಿ ಪರಿಹಾರ ಕ್ರಮಗಳಿಗೆ ಮುಂದಾಗಬೇಕು. ಯಾವ ಪಂಚಾಯಿತಿಯಲ್ಲಿ ತೊಂದರೆ ಇದೆ ಎಂದು ಖುದ್ದು ವೀಕ್ಷಿಸಬೇಕು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ವ್ಯಾಪಕವಾಗಿ ತಮ್ಮ ವ್ಯಾಪ್ತಿಯ ಭಾಗಗಳಲ್ಲಿ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಬೇಸಿಗೆ ಸಂದರ್ಭದಲ್ಲಿ ವಿಶೇಷ ಗಮನ ಹರಿಸಬೇಕು ಎಂದರು. ಅಂತರ್ಜಲ ಹೆಚ್ಚಿರುವ ಕಡೆ ಕೊಳವೆಬಾವಿಗಳನ್ನು ಇನ್ನಷ್ಟು ಆಳವಾಗಿ ಕೊರೆದು ಸಮಸ್ಯೆ ಬಗೆಹರಿಸಬೇಕು. ಅನುಷ್ಠಾನದಲ್ಲಿರುವ ಕುಡಿಯುವ ನೀರಿನ ಕಾಮಗಾರಿಯನ್ನು ವಿಳಂಬ1 ಮಾಡದೇ ಪೂರ್ಣಗೊಳಿಸಬೇಕು. ನಗರ, ಪಟ್ಟಣ ಪ್ರದೇಶಗಳಲ್ಲಿಯೂ ಅಗತ್ಯಕ್ಕೆ ಅನುಗುಣವಾಗಿ ನೀರು ಸರಬರಾಜು ಮಾಡಬೇಕು. ಅಮೃತ್ 2 ಯೋಜನೆಯಡಿ ಚಾಮರಾಜನಗರ ಪಟ್ಟಣಕ್ಕೆ ನೀರು ಒದಗಿಸುವ ಯೋಜನೆಯ ಪ್ರಗತಿ ವೇಗವಾಗಿ ಆಗಬೇಕು ಎಂದರು.

ಇದೇ ವೇಳೆ ಮಾತನಾಡಿದ ಶಾಸಕರಾದ ಎಂ.ಆರ್. ಮಂಜುನಾಥ್ ಅವರು ಹನೂರು ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಪ್ರಸ್ತುತ 1.90 ಕೋಟಿ ರೂ. ವೆಚ್ಚದ ಕುಡಿಯುವ ನೀರಿನ ಕಾಮಗಾರಿ ನಿರ್ವಹಿಸಲು ಅನುದಾನ ಅಗತ್ಯವಿದೆ. ಅರಣ್ಯದಂಚಿನ ಗ್ರಾಮಗಳಲ್ಲಿ ಕೈಗೆತ್ತಿಕೊಳ್ಳಲಾಗಿರುವ ವಿದ್ಯುತ್ ಕಾಮಗಾರಿ ಮುಂದುವರೆಸಲು ಅರಣ್ಯ ಇಲಾಖೆಯಿಂದ ಯಾವುದೇ ಅಡಚಣೆಯಾಗಬಾರದು ಎಂದರು.


ಮುಂಬರುವ ದಿನಗಳಲ್ಲಿ ಜಾನುವಾರುಗಳಿಗೆ ಅಗತ್ಯವಿರುವ ಮೇವು ಸಂಗ್ರಹಣೆ ಸಂಬಂಧ ವಿವರ ಪಡೆದ ಸಚಿವರು ಮೇವಿಗೆ ಯಾವುದೇ ಕೊರತೆಯಾಗದಂತೆ ದಾಸ್ತಾನು ಮಾಡಬೇಕು. ರೈತರಿಗೆ ಅವರ ಬೇಡಿಕೆ ಅನುಸಾರ ಅಗತ್ಯವಿರುವ ಪ್ರಮಾಣದಲ್ಲಿ ವಿದ್ಯುತ್ ಒದಗಿಸಬೇಕು. ಗ್ರಾಮೀಣ ಭಾಗದ ಜನರ ಸಮಸ್ಯೆಗಳಿಗೆ ಅಧಿಕಾರಿಗಳು ಶೀಘ್ರವೇ ಸ್ಪಂದಿಸಬೇಕು ಎಂದರು.

ಜಿಲ್ಲಾಧಿಕಾರಿ ಶ್ರೀರೂಪ ಅವರು ಮಾತನಾಡಿ ಬೇಸಿಗೆ ವೇಳೆಯಲ್ಲಿ ಕಾಡ್ಗಿಚ್ಚು, ಅಗ್ನಿ ಅನಾಹುತಗಳು ಸಂಭವಿಸದಂತೆ ಅರಣ್ಯ ಇಲಾಖೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ವಿಕೋಪ ಸಂದರ್ಭಗಳಲ್ಲಿ ಅಧಿಕಾರಿ ಸಿಬ್ಬಂದಿ, ಅಗ್ನಿಶಾಮಕಗಳ ಸನ್ನದವಾಗಿರಬೇಕು. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬವಣೆ ನೀಗಿಸಲು ಪೂರಕವಾಗಿರುವ ಎಲ್ಲ ಕ್ರಮಗಳ ಅನುಷ್ಠಾನಕ್ಕೆ ಮುಂದಾಗಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಮಾತನಾಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ತಹಶೀಲ್ದಾರರಾದ ಗಿರಿಜಾ, ಬಸವರಾಜು, ಚೈತ್ರ, ತನ್ಮಯ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಇಮ್ಯಾನುವಲ್ ಸಂತೋಷ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಕಿರಣ್, ಪಶುಸಂಗೋಪನೆ ಇಲಾಖೆಯ ಉಪನಿರ್ದೇಶಕರಾದ ಮಂಜುನಾಥ್, ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಾದ ಶಿವಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ, ತಾಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಇತರೆ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಕರ್ನಾಟಕ ಮಾದರ ಮಹಾಸಭಾದಿಂದ ಸಮುದಾಯಕ್ಕೆ ಅನುಕೂಲ: ಕೋಟೆ ಎಂ.ಶಿವಣ್ಣ



ಚಾಮರಾಜನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಕರ್ನಾಟಕ ಮಾದರ ಮಹಾಸಭಾದ ಜಿಲ್ಲಾ ಮಟ್ಟದ ಮುಖಂಡರು ಮತ್ತು ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ಸದಸ್ಯತ್ವ ಅಭಿಯಾನ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿದರು.

ಚಾಮರಾಜನಗರ: ಸಚಿವರಾದ ಕೆ.ಎಚ್.ಮುನಿಯಪ್ಪ ಅವರು ಸಮುದಾಯದ ಹಿತಕ್ಕಾಗಿ ಕರ್ನಾಟಕ ಮಾದರಮಹಸಭಾ ಹುಟ್ಟುಹಾಕಿದ್ದಾರೆ. ಇದರಿಂದ ಮುಂದಿನ ದಿನಗಳಲ್ಲಿ ಸಮುದಾಯಕ್ಕೆ ಅನುಕೂಲವಾಗಲಿದೆ ಎಂದು ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಕರ್ನಾಟಕ ಮಾದರ ಮಹಾಸಭಾದ ಜಿಲ್ಲಾ ಮಟ್ಟದ ಮುಖಂಡರು ಮತ್ತು ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ಸದಸ್ಯತ್ವ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಕರ್ನಾಟಕ ಮಾದರ ಮಹಾಸಭಾಯು ಯಾವುದೇ ಪಕ್ಷಕ್ಕೆ ಸೇರಿದ್ದು ಅಲ್ಲ. ಸಮುದಾಯದ ಎಲ್ಲ ಪಕ್ಷದ ನಾಯಕರು, ಮುಖಂಡರು ಸೇರಿ ಸ್ಥಾಪಿಸಿದ್ದಾರೆ. ಸುಮಾರು 10 ವರ್ಷಗ ಹಿಂದೆ ಬೆಂಗಳೂರಿನಲ್ಲಿ ಮಾಜಿ ಸಚಿವರಾದ ಎ.ನಾರಾಯಣಸ್ವಾಮಿ, ಗೋವಿಂದ್‌ಕಾರ್‌ಜೋಲ್, ನಾವು ಡಾ.ತಿಮ್ಮಯ್ಯ, ಕೆ.ಎಚ್.ಮುನಿಯಪ್ಪನವರು ಸೇರಿಕೊಂಡು ಕರ್ನಾಟಕ ಮಾದರ ಮಹಾಸಭಾ ಹುಟ್ಟುಹಾಕಿ ಸರ್ವಾನುಮತದಿಂದ ಕೆ.ಎಚ್.ಮುನಿಯಪ್ಪ ಅವರನ್ನು ಅಧ್ಯಕ್ಷರಾಗಿ ಮಾಡಲಾಯಿತು. ಅನೇಕ ಕಾರಣಗಳಿಂದ ಚಾಲನೆ ಸಿಕ್ಕಿರಲಿಲ್ಲ. ಕಳೆದ ಒಂದು ವರ್ಷದಿಂದೀಚಗೆ ಕೆ.ಎಚ್.ಮುನಿಯಪ್ಪ ಅವರು, ದೊಡ್ಡ ಮನಸ್ಸು ಮಾಡಿ ಮಾದರ ಮಹಾಸಭಾ ಹುಟ್ಟು ಹಾಕಿದ್ದು, ಎಲ್ಲ ಪಕ್ಷದವರನ್ನು ಸೇರಿಸಿಕೊಂಡು ಮಾದರ ಮಹಾಸಭಾ ಪಕ್ಷಾತೀತವಾಗಿ ಕಟ್ಟಲು ಹೊರಟಿದ್ದಾರೆ ಎಂದರು. ಸಮುದಾಯದ ಶ್ರೀಗಳ ಆಶೀರ್ವಾದ ಸಂಪೂರ್ಣವಾಗಿ ಇದ್ದೆ. ನನ ತುಂಬಾ ಸಂತಸವಾಗಿರುವುದು ಎನಪ್ಪ ಎಂದರೆ ಕೆ.ಹೆಚ್.ಮುನಿಯಪ್ಪ ಅವರು ಬೆಂಗಳೂರಿನಲ್ಲಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ರೀತಿಯಲ್ಲಿ ಒಂದು ಕಚೇರಿ ಮಾಡಿದರೆ, ಮುಂದಿನ ದಿನಗಳಲ್ಲಿ ಸಮುದಾಯದ ಬಗ್ಗೆ ಐಎಎಸ್ ತರಬೇತಿ, ಶೈಕ್ಷಣಿಕ ತರಬೇತಿ ನೀಡಲು ಚಿಂತನೆ ಮಾಡಿದ್ದಾರೆ ಜೊತೆಗೆ ನಾವು ಸೇರಿದಂತೆ 50 ಮಂದಿ ಸದಸ್ಯರನ್ನು ಮಾಡಿ ಒಂದೊಂದು ಜಿಲ್ಲೆಯನ್ನು ನೀಡಿ ಸಂಘಟನೆ ಮಾಡುವಂತೆ ಹೇಳಿದ್ದಾರೆ. ಅದರಂತೆ ನಾನು ಕೂಡ ಚಾಮರಾಜನಗರ ಜಿಲ್ಲೆಯನ್ನು ಸಂಘಟನೆ ಮಾಡಲು ಸಹಕರಿಸುತ್ತೇನೆ.. ತಾಲೂಕು, ಜಿಲ್ಲಾ ಸಮಿತಿ ಮಾಡಬೇಕಿದೆ ಇದರಿಂದ ಸಮುದಾಯಕ್ಕೆ ಮುಂದಿನ ದಿನಗಳಲ್ಲಿ ಅನುಕೂಲವಾಗುವುದರಿಂದ ಸಮುದಾಯ ಮುಖಂಡರು ಭಿನ್ನಾಭಿಪ್ರಾಯಬಿಟ್ಟು ಮಾದರ ಮಹಾಸಭಾದ ಸಂಘಟನೆ ಮಾಡುವುದು ನಮ್ಮೆಲ್ಲರ ಕರ್ವತ್ಯವಾಗಿದೆ. ಕರ್ನಾಟಕ ಮಾದರ ಮಹಾಸಭಾದ ಚಾಮರಾಜನಗರ ಜಿಲ್ಲಾ ಉಸ್ತುವಾರಿಯಾಗಿ ಆರ್.ಧರ್ಮಸೇನಾ ಅವರನ್ನು ನೇಮಿಸಲಾಗಿದೆ ಅವರೊಂದಿಗೆ ನಾನು ಜೊತೆಯಾಗಿ ಜಿಲ್ಲೆಯಲ್ಲಿ ಸಂಘಟನೆ ಮಾಡಲು ಸಹಕರಿಸುತ್ತೇನೆ ಎಂದರು. ಕರ್ನಾಟಕ ಮಾದರ ಮಹಾಸಭಾದ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಆರ್.ಧರ್ಮಸೇನಾ ಮಾತನಾಡಿ, ಕರ್ನಾಟಕ ಮಾದರ ಮಹಾಸಭಾಕ್ಕೆ ಜಿಲ್ಲೆಯಲ್ಲಿ 5 ಸಾವಿರ ಸದಸ್ಯತ್ವ ಮಾಡಬೇಕಾಗಿರುವುದ್ದರಿಂದ ಪ್ರತಿ ಗ್ರಾಮದಲ್ಲಿ 45 ಮಂದಿ ಸದಸ್ಯತ್ವ ಮಾಡಿದಾಗ ಕೆಲಸ ಸುಲಭವಾಗಿ ಮಾಡಬಹುದು ಎಂದರು. ಕಾರ್ಯಕ್ರಮದಲ್ಲಿ ಮಾದರ ಮಹಾಸಭಾದ ಜಿಲ್ಲಾಧ್ಯಕ್ಷ ಎಂ.ಶಿವಮೂರ್ತಿ, ಪ್ರಧಾನ ಕಾರ್ಯದರ್ಶಿ ಪಾಳ್ಯ ರಾಚಪ್ಪ, ಅರಕಲವಾಡಿ ನಾಗೇಂದ್ರ, ಹನೂರು ತಾಲೂಕು ಅಧ್ಯಕ್ಷ ಬೂದುಬಾಳು ಮಹದೇವು, ಬಾಲರಾಜು, ನಿಟ್ರೆ ಮಹದೇವ, ಸಿದ್ದಪ್ಪಾಜಿ, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಸೋಮು, ಚಾಮರಾಜನಗರ ತಾಲೂಕು ಅಧ್ಯಕ್ಷ ಎಂ.ರಾಜು, ಗುಂಡ್ಲುಪೇಟೆಅಧ್ಯಕ್ಷ ಅಂಕಹಳ್ಳಿ ಸಿದ್ದಯ್ಯ, ರವಿ, ರಾಚಯ್ಯ, ರಂಗರಾಜ್, ಕುಮಾರ್, ರಾಜಣ್ಣ, ನಾಗಯ್ಯ ಇತರರು ಹಾಜರಿದ್ದರು.

## ಉದ್ಯೋಗ ಮೇಳ ಕುರಿತ ಪೋಸ್ಟರ್ ಬಿಡುಗಡೆ



ಚಾಮರಾಜನಗರ, ಜಿಲ್ಲಾ ಪಂಚಾಯತ್, ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಹಾಗೂ ಇನ್ನಿತರ ಇಲಾಖೆಗಳ ಅಶ್ರಯದಲ್ಲಿ ಇದೇ ಫೆಬ್ರವರಿ 27ರಂದು ಆಯೋಜಿಸಿರುವ ಉದ್ಯೋಗ ಮೇಳ ಕುರಿತ ಪೋಸ್ಟರನ್ನು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಬಿಡುಗಡೆಗೊಳಿಸಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಕೌಶಲ್ಯಾಭಿವೃದ್ಧಿ, ಉದ್ದಿಮೆಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ, ಕರ್ನಾಟಕ ಕೌಶಲ್ಯ ಅಭಿವೃದ್ದಿ ನಿಗಮ, ಜಿಲ್ಲಾ ಕೌಶಲ್ಯಾಭಿವೃದ್ದಿ ಕಚೇರಿ ಮತ್ತು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಂಯುಕ್ತಾಶ್ರಯದಲ್ಲಿ ದೀನ್ ದಯಾಳ್ ಉಪಾದ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ ಉದ್ಯೋಗ ಮೇಳ ಆಯೋಜಿಸಲಾಗಿದೆ. ಈ ಬಗ್ಗೆ ವ್ಯಾಪಕವಾಗಿ ಜಿಲ್ಲೆಯ ಅಭ್ಯರ್ಥಿಗಳಿಗೆ ಮಾಹಿತಿ ನೀಡಬೇಕು ಎಂದರು. ಯುವ ಜನರಿಗೆ ಅತ್ಯಂತ ಉಪಯುಕ್ತವಾಗುವ ಉದ್ಯೋಗ ಮೇಳವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಸಿಇಒ ಮೋನಾ ರೋತ್ ಅವರು ತಿಳಿಸಿದರು. ಇದೇ ವೇಳೆ ಉಪಕಾರ್ಯದರ್ಶಿ ಶೃತಿ. ಡಿ.ಸಿ, ಎನ್.ಆರ್.ಎಲ್.ಎಂ ಹಾಗೂ ಮನರೇಗಾ ಸಿಬ್ಬಂದಿ ಹಾಜರಿದ್ದರು.

## ಕೃಷಿ ಯೋಜನೆಗಳ ಸದ್ಬಳಕೆಗೆ ಸಲಹೆ




ಚಾಮರಾಜನಗರ: ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಕೃಷಿಭಾಗ್ಯ ಹಾಗೂ ಪ್ರಧಾನಮಂತ್ರಿ ಕಿಸಾನ್ ಯೋಜನೆಯನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕೆಂದು ಸಹಾಯಕ ಕೃಷಿ ನಿರ್ದೇಶಕರಾದ ರೂಪ ಅವರು ತಿಳಿಸಿದರು.

ತಾಲೂಕಿನ ಕಾಗಲವಾಡಿ ಗ್ರಾಮದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಖಾದ್ಯ ತೈಲ, ಎಣ್ಣೆ ಕಾಳು ಬೆಳೆಗಳ ಕಾರ್ಯಕ್ರಮದಡಿ ರೈತರಿಗೆ ನೀಡಿದ ತರಬೇತಿ ಕಾರ್ಯಗಾರದಲ್ಲಿ ಅವರು ಮಾತನಾಡಿ, ರೈತರಿಗೆ ಕೃಷಿ ಇಲಾಖೆಯಿಂದ ಅನೇಕ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಹೀಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರಗಳಿಗೆ ತೆರಳಿ ಕೃಷಿ ಇಲಾಖೆಯ ಯೋಜನೆಗಳ ಬಗ್ಗೆ ಮಾಹಿತಿ ಪಡೆದು ಯೋಜನೆಗಳ ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು. ಎಣ್ಣೆ ಕಾಳು ಬೆಳೆಗಳಾದ ಸೂರ್ಯಕಾಂತಿ ಹಾಗೂ ಬೇಸಾಯ ಪದ್ಧತಿಯ ಬಗ್ಗೆ ತಿಳಿಸಿದ ಅವರು ಮುಂಬರುವ ಪೂರ್ವ ಮುಂಗಾರು ಹಂಗಾಮಿಗೆ ಸಿದ್ಧತೆ ಮಾಡಿಕೊಳ್ಳಬೇಕೆಂದು ತಿಳಿಸಿದರು. ಅಲ್ಲದೆ ಸಮಗ್ರ ಕೃಷಿ ಪದ್ಧತಿ ಯೋಜನೆಯಡಿ ಹೈನುಗಾರಿಕೆ, ಬಹುವಾರ್ಷಿಕ ಬೆಳೆ, ತೋಟಗಾರಿಕೆ ಸಮಗ್ರ ಬೇಸಾಯ ಕೈಗೊಳ್ಳುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಚಂದಕವಾಡಿ ಹೋಬಳಿಯ ಕೃಷಿ ಅಧಿಕಾರಿ ವೀರಭದ್ರ, ಪ್ರಗತಿಪರ ರೈತರಾದ ವೀರಭದ್ರಸ್ವಾಮಿ, ಮಹದೇವಸ್ವಾಮಿ ಸೇರಿದಂತೆ ರೈತರು ಇದ್ದರು.

# ಏರ್-ಟು-ವಾಟರ್ ಘಟಕ ಪರಿಶೀಲನೆ

## ಸೋಮವಾರಪೇಟೆ ಸರ್ಕಾರಿ ಶಾಲೆಗೆ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ



ಚಾಮರಾಜನಗರ: ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ನಗರದ ಸೋಮವಾರಪೇಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಶಾಲೆಯಲ್ಲಿ ಅಳವಡಿಸಿರುವ ಏರೋ ವಾಟರ್ ಕಂಪನಿಯ ವಾಯುವಿನಿಂದ ನೀರು (ಏರ್-ಟು-ವಾಟರ್) ಉತ್ಪಾದಿಸುವ ಘಟಕವನ್ನು ಪರಿಶೀಲಿಸಿದರು.

ಸೋಮವಾರಪೇಟೆ ಬಡಾವಣೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಏರೋ ವಾಟರ್ ಕಂಪನಿ ವತಿಯಿಂದ ಅಳವಡಿಸಿರುವ ವಾಯುವಿನಿಂದ ದಿನಕ್ಕೆ 100 ಲೀ. ಸಾಮರ್ಥ್ಯದ ಶುದ್ಧ ಕುಡಿಯುವ ನೀರು ಉತ್ಪಾದಿಸುವ ಘಟಕದ ಕಾರ್ಯವೈಖರಿಯನ್ನು ಸಚಿವರು ವೀಕ್ಷಿಸಿದರು

ಇದೇ ವೇಳೆ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿಯೇ ಇದ್ದ ಶಾಲೆಯ ಮುಖ್ಯೋಪಾಧ್ಯಾಯರಾದ ನಾಗಲಕ್ಷ್ಮೀ ಅವರಿಗೆ ವಾಯುವಿನಿಂದ ನೀರು ಉತ್ಪಾದಿ ಸುವ ಘಟಕದ ನಿರ್ವಹಣೆ ಸರಿಯಾಗಿದೆಯೇ, ನೀರು ಶುದ್ಧತೆಯಿಂದ ಕೂಡಿದೆಯೆ, ಮಕ್ಕಳಿಗೆ ಕುಡಿಯುವ ನೀರು ಸಾಕಾಗುತ್ತಿದೆಯೇ ಎಂದು ವಿಚಾರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಲೆಯ ಮುಖ್ಯೋಪಾಧ್ಯಾಯರು ಘಟಕ ದಿಂದ ಮಕ್ಕಳಿಗೆ ಕುಡಿಯುವ ನೀರು ಸಮರ್ಪಕವಾಗಿ ದೊರೆಯುತ್ತಿದ್ದು, ಘಟಕ ಅಳವಡಿಕೆಯಿಂದ ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಗಿದೆ ಎಂದರು.

ಜಿಲ್ಲಾಧಿಕಾರಿ ಶ್ರೀರೂಪ ಅವರು ಜಿಲ್ಲಾ ಉಸ್ತುವಾರಿ ಸಚಿವರಿಗೆ ಏರೋ ವಾಟರ್ ತಂತ್ರಜ್ಞಾನದ ಬಗ್ಗೆ ವಿವರಿಸಿ ವಾತಾವರಣದಲ್ಲಿರುವ ತೇವಾಂಶವನ್ನು ಸಂಗ್ರಹಿಸಿ ಅದನ್ನು ಸಾಂದ್ರೀಕರಿಸಿ ಹಾಗೂ ಶುದ್ಧೀಕರಿಸುವ ಮೂಲಕ ಕುಡಿಯಲು ಯೋಗ್ಯವಾದ ನೀರನ್ನು ಉತ್ಪಾದಿಸಲಾಗುತ್ತದೆ. ಈ ತಂತ್ರ ಜ್ಞಾನವು ಅಂತರ್ಜಲ ಅಥವಾ ಮಳೆಯನ್ನು ಅವಲಂಬಿಸದೇ ವರ್ಷಪೂರ್ತಿ ನಿರಂತರವಾಗಿ ನೀರನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ ಎಂದರು.

ವಿದ್ಯುತ್ ಆಧಾರಿತವಾಗಿ ಕಾರ್ಯನಿರ್ವಹಿಸುವ ಈ ಘಟಕವನ್ನು ಸೌರಶಕ್ತಿಯೊಂದಿಗೆ ಜೋಡಿಸಬಹುದಾಗಿದೆ. ದೂರದ ಹಾಗೂ ಅರಣ್ಯ ಪ್ರದೇಶಗಳಿಗೆ ಈ ತಂತ್ರಜ್ಞಾನ ಬಹಳ ಉಪಯುಕ್ತವಾಗಿದ್ದು, ಅರಣ್ಯ ಪ್ರದೇಶಗಳು ಹೆಚ್ಚಾಗಿರುವ ಜಿಲ್ಲೆಯ ಅಗತ್ಯಗಳನ್ನು ಮನಗಂಡು ಈ ತಂತ್ರಜ್ಞಾನವನ್ನು ಜಿಲ್ಲೆಗೆ ಪರಿಚಯಿಸಲಾಗುತ್ತಿದೆ ಎಂದು ವಿವರಿಸಿದರು.

ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಜಿಲ್ಲೆಯಲ್ಲಿ ಇಂತಹ ಘಟಕಗಳನ್ನು ಕುಡಿಯುವ ನೀರಿನ ಸಮಸ್ಯೆ ಇರುವ ಪ್ರದೇಶಗಳಲ್ಲಿ ಅಳವಡಿಸಿ ತೊಂದರೆ ಪರಿಹರಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುವುದು ಎಂದರು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲಾಧಿಕಾರಿ ಕಚೇರಿಯ ಸಿಎಸ್‌ಆರ್ ಸಮಾಲೋಚಕರಾದ ರಕ್ಷಿತಾ, ಇತರರು ಈ ಸಂದರ್ಭದಲ್ಲಿ ಇದ್ದರು.

### ಸೋಮವಾರಪೇಟೆ ಬಡಾವಣೆಗಳಿಗೆ ಜಿಲ್ಲಾಧಿಕಾರಿ ಶ್ರೀರೂಪ ದಿಢೀರ್ ಭೇಟಿ

## ಸ್ವಚ್ಛತೆ, ಮೂಲ ಸೌಕರ್ಯಗಳ ಪರಿಶೀಲನೆ



ಚಾಮರಾಜನಗರ, ಜಿಲ್ಲಾಧಿಕಾರಿ ಶ್ರೀರೂಪ ಅವರು ಇಂದು ಮುಂಜಾನೆ ಚಾಮರಾಜನಗರ ಪಟ್ಟಣದ ವಾರ್ಡ್ 1 ಮತ್ತು 2ರ ವ್ಯಾಪ್ತಿಯ ಸೋಮವಾರಪೇಟೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ದಿಢೀರ್ ಭೇಟಿ ನೀಡಿ ಕುಡಿಯುವ ನೀರು, ಸ್ವಚ್ಛತೆ ಇನ್ನಿತರ ಮೂಲ ಸೌಕರ್ಯಗಳ ಕುರಿತು ಪರಿಶೀಲನೆ ನಡೆಸಿದರು.

ಸೋಮವಾರಪೇಟೆ ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಬಗ್ಗೆ ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಅಲ್ಲಿನ ಕೊಳವೆಬಾವಿಗಳು ಇನ್ನಿತರ ನೀರು ಒದಗಿಸುವ ಮೂಲಗಳನ್ನು ವೀಕ್ಷಿಸಿದರು. ನೀರು ಪೂರೈಸುವ ಕೊಳವೆಬಾವಿಯನ್ನು ಪುನಹ ಕೊರೆದು ಮತ್ತಷ್ಟು ಆಳದಿಂದ ನೀರು ಸರಬರಾಜು ಮಾಡಲು ಹಾಗೂ ಪುನಶ್ಚೇತನದಂತಹ ಕ್ರಮಗಳಿಂದ ನೀರು ಒದಗಿಸುವ ಬಗ್ಗೆ ಜಿಲ್ಲಾಧಿಕಾರಿಯವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಗತ್ಯಬಿದ್ದಲ್ಲಿ ಹೊಸದಾಗಿ ಕೊಳವೆಬಾಯಿ ಕೊರೆದು ಸಮರ್ಪಕವಾಗಿ ನೀರು ಪೂರೈಸುವ ಸಾಧ್ಯತೆ ಬಗ್ಗೆಯೂ ಪರಿಶೀಲಿಸುವಂತೆ ಜಿಲ್ಲಾಧಿಕಾರಿಯವರು ನಿರ್ದೇಶನ ನೀಡಿದರು. ಮುಖ್ಯ ಒಳಚರಂಡಿಗೆ ಮನೆಮನೆಗಳ ಚರಂಡಿ ಜೋಡಣೆ ಕಾರ್ಯವನ್ನು ಆದಷ್ಟು ಬೇಗನೆ ಕೈಗೊಳ್ಳಲು ಸೂಚಿಸಲಾಗುವುದು. ಇದರಿಂದ ಚರಂಡಿ ಸಂಬಂಧ ಸಮಸ್ಯೆಗಳು ಪರಿಹಾರವಾಗಲಿವೆ ಎಂದ ಜಿಲ್ಲಾಧಿಕಾರಿಯವರು ಸ್ಥಳೀಯ ಪ್ರದೇಶದ ಚರಂಡಿಯೊಂದರ ನೀರು ಖಾಸಗಿ ಜಮೀನಿಗೆ ಸೇರುತ್ತಿದ್ದು, ಇದನ್ನು ಸರಿಪಡಿಸಿಕೊಳ್ಳುವಂತೆ ನಿವಾಸಿಗಳು ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ ಈ ಬಗ್ಗೆ ಕ್ರಮವಹಿಸುವ ಕುರಿತು ಎಂಜಿನಿಯರ್ ಅವರಿಗೆ ಸೂಚಿಸಿದರು. ಚಾಮರಾಜನಗರ ನಗರಸಭೆ ಪರಿಸರ ಎಂಜಿನಿಯರ್ ಎಲ್. ರೂಪ, ಕಿರಿಯ ಎಂಜಿನಿಯರ್ ಶಿವಶಂಕರ ಆರಾಧ್ಯ, ಹಿರಿಯ ಆರೋಗ್ಯ ನಿರೀಕ್ಷಕರಾದ ಮಂಜು, ಇನ್ನಿತರ ಸಿಬ್ಬಂದಿ ಹಾಜರಿದ್ದರು.

### ಮೂಲ ಸೌಕರ್ಯ ಒದಗಿಸಿ

ಬಡಾವಣೆಯಲ್ಲಿ ನಿರ್ವಹಿಸಲಾಗುತ್ತಿರುವ ಸ್ವಚ್ಛತೆಯನ್ನು ವೀಕ್ಷಿಸಿದ ಜಿಲ್ಲಾಧಿಕಾರಿಯವರು ನೈರ್ಮಲ್ಯ ಕಾರ್ಯಗಳು ಪರಿಪೂರ್ಣವಾಗಿರಬೇಕು. ಕಸ ಸಂಗ್ರಹಣೆ ವಾಹನಗಳು ಬಡಾವಣೆಯಲ್ಲಿ ತ್ಯಾಜ್ಯ ವಿಲೇವಾರಿ ಮಾಡಬೇಕು. ಸಾರ್ವಜನಿಕರು ಸಹ ಹಸಿಕಸ ಹಾಗೂ ಒಣಕಸವನ್ನು ಬೇರ್ಪಡಿಸಿ ನೀಡುವ ಮೂಲಕ ಸ್ವಚ್ಛತೆಗೆ ಸಹಕರಿಸಬೇಕು ಎಂದರು. ಕೆಲವೆಡೆ ಬೀದಿ ದೀಪ ಸರಿಯಾಗಿ ನಿರ್ವಹಿಸದೇ ಇರುವ ಕುರಿತು ಸ್ಥಳೀಯರು ಜಿಲ್ಲಾಧಿಕಾರಿಯವರ ಗಮನಕ್ಕೆ ತಂದರು. ಸ್ಥಳದಲ್ಲೇ ಇದ್ದ ಅಧಿಕಾರಿಗಳಿಗೆ ಈ ಸಂಬಂಧ ಇರುವ ಸಮಸ್ಯೆಗಳನ್ನು ಪರಿಹರಿಸಲು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದರು.

## ಮಾ.4ಕ್ಕೆ ಬೆಂಗಳೂರಲ್ಲಿ ಒಳಮೀಸಲಾತಿ ಹೋರಾಟ



ಮೈಸೂರು: ಒಳ ಮೀಸಲಾತಿ ಹಾಗೂ ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಿ ಮಾ.4 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್ ಮುಂಭಾಗ ಪ್ರತಿಭಟನೆ ನಡೆಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಕ್ಕೋತ್ತಾಯ ಮಂಡಿಸಲಾಗುದು ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ದೇವಗಳ್ಳಿ ಸೋಮಶೇಖರ್ ಎಂದರು.

ಮಾ.4ರಂದು ಬೆಂಗಳೂರು, ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳ ಕಾರ್ಯಕತ್ರರು ಬೆಂಗಳೂರಿನಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸುತ್ತೇವೆ. ಇನ್ನುಳಿದಂತೆ ರಾಜ್ಯ ಎಲ್ಲಾ ಜಿಲ್ಲೆ ಕೇಂದ್ರಗಳಲ್ಲಿ ಏಕಕಾಲಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿ, ಅಲ್ಲಿಯ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗೆ ಮನವಿ ನೀಡಲು, ಮನವಿ ನೀಡಲಾಗುತ್ತದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಅಕ್ರಮ ಸಕ್ರಮ ಯೋಜನೆಯಡಿ ಅರ್ಜಿ ಸಲ್ಲಿಸಿರುವ ಭೂ ರಹಿತ ಬಡವರಿಗೆ ಕೂಡಲೇ ಸಾಗುವಳಿ ಹಕ್ಕುಪತ್ರ ಹಾಗೂ ಅವಕಾಶ ವಂಚಿತರಿಗೆ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿಕೊಡಬೇಕು. ಒಳಮೀಸಲಾತಿ ವಿಷಯದಲ್ಲಿ ರಾಜ್ಯ ಸರ್ಕಾರ ನಡೆಸಿರುವ ಅವೈಜ್ಞಾನಿಕ ರೋಸ್ಟರ್ ಬಿಂದುವಿನಿಂದಾಗಿ ನೇಮಕಾತಿಗಳಲ್ಲಿ ಬಿ ಮತ್ತು ಸಿ ವರ್ಗಗಳಿಗೆ ಅನ್ಯಾಯವಾ ಗಿದ್ದು, ಕೂಡಲೇ ಸರಿಪಡಿಸಿ ಉಪಜಾತಿಗಳಿಗೆ ಸಾಮಾಜಿಕ ನ್ಯಾಯ ಒದಗಿಸಬೇಕು ಹಾಗೂ ಅಲೆಮಾರಿ ಸಮುದಾಯ ಮತ್ತು ಪೌರಕಾರ್ಮಿಕ ವರ್ಗಕ್ಕೆ ಪ್ರತ್ಯೇಕವಾಗಿ ಮೀಸಲತಿ ನಿಗದಿಪಡಿಸಬೇಕು ಎಂದು ಒತ್ತಾಯಿಸಲಾ ಗುವುದು ಎಂದರು. ಎಸ್‌ಸಿಎಪಿ ಹಾಗೂ ಟಿಎಸ್‌ಪಿ ಹಣವನ್ನು ರಾಜ್ಯ ಸರ್ಕಾರ ದುರುಪಯೋಗಪಡಿಸಿಕೊಂಡಿದ್ದು, 45 ಸಾವಿರ ಕೋಡಿ ರೂ. ಹಣವನ್ನು ಗ್ಯಾರಂಟಿ ಯೋಜನೆ ಇನ್ನಿತರ ಕಾರ್ಯಗಳಿಗೆ ಬಳಕೆ ಮಾಡಿದ್ದು, ಕೂಡಲೇ ವಾಪಾಸು ನೀಡಬೇಕು. ಎಂದರು. ಎಸ್‌ಸಿ, ಎಸ್‌ಟಿ ಸಮುದಾಯದ ಆದಾಯ ಮಿತಿಯನ್ನು 2.5 ಲಕ್ಷದಿಂದ 15 ಲಕ್ಷಕ್ಕೆ ಏರಿಕೆ ಮಾಡಬೇಕು. ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಖಾಲಿ ಹುದ್ದೆಗಳಿಗೆ ಖಾಯಂ ಪ್ರಾಧ್ಯಾಪಕರನ್ನು ನೇಮಕಗೊಳಿಸಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರನ್ನು ಒದಗಿಸಬೇಕು ಹಾಗೂ ರಾಜ್ಯದಲ್ಲಿ ಖಾಲಿಯಿರುವ 2.5 ಲಕ್ಷ ಹುದ್ದೆಗಳಿಗೆ ನೇಮಕಾತಿಯನ್ನು ಆರಂಭಿಸಬೇಕೆಂಬ ಇತ್ಯಾದಿ ಹಕ್ಕೊತ್ತಾಯಗಳನ್ನು ಸರ್ಕಾರದ ಮುಂದಿಟ್ಟು ಪ್ರತಿಭಟನೆ ನಡೆಸಲಾಗುತ್ತದೆ ಎಂದರು. ರಾಜಶೇಖರ್ ಕೋಟೆ, ತಳೂರು ಪ್ರಸನ್ನ, ಎಸ್.ಆರ್.ಎಸ್ ಮಂಜು ಇದ್ದರು.


ಕರ್ನಾಟಕ ಸರ್ಕಾರ

**ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ**

**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,**

**ಸಂ: 23/2025-2026** **ದಿನಾಂಕ: 24.02.2026**

**ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಳಿಗಾಗಿ**
**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಐಟಂವಾರು ದರದ ಟೆಂಡರುಗಳ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW-1 ರರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka. gov.in ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು.
ಟೆಂಡರ್ ದಾಖಲಾತಿಗಳನ್ನು **ದಿನಾಂಕ 25.02.2026** ರಿಂದ ಇ-ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ **ದಿನಾಂಕ:04.03.2026 ಸಂಜೆ 4.00** ಘಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:05.03.2026 ಸಂಜೆ 4.30** ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ 06.03.2026 ಬೆಳಿಗ್ಗೆ 11.00 ಘಂಟೆ** ನಂತರಅಥವಾ ನಂತರದ ಕೆಲಸದ ದಿನಗಳು,.ಟೆಂಡರ್ ಪ್ರಕ್ರಿಯೆ ಬೆಲೆ ಇ-ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 2 ದಿನಗಳು ಒಟ್ಟು 07 (ಏಳು) ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ **ರೂ.12.00 ಲಕ್ಷಗಳು ಕನಿಷ್ಠ ಅಂದಾಜು ಮೊತ್ತ ರೂ.10.00 ಲಕ್ಷಗಳು ಇ.ಎಂ.ಡಿ.** ಬೆಲೆ ಇ-ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
**ಟಿಪ್ಪಣಿ:** 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾ.ಇಂ.,ಲೋ.ಇ.,ವಿಭಾಗ, ಮಂಡ್ಯ


### ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ

# ಮ.ಬೆಟ್ಟಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ



ಚಾಮರಾಜನಗರ, , ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಮಲೆ ಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡಿ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಭಕ್ತಾಧಿಗಳ ಅನುಕೂಲಕ್ಕಾಗಿ ನಿರ್ಮಾಣ ಹಂತದಲ್ಲಿರುವ ವಿವಿಧ ಕಾಮಗಾರಿ ಪರಿಶೀಲಿಸಿದರು.

ಕ್ಷೇತ್ರದಲ್ಲಿ ಪ್ರಗತಿಯಲ್ಲಿರುವ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ವೀಕ್ಷಿಸಿದರು. ಬಳಿಕ ದೇವಾಲಯ ಆವರಣದ ಬಳಿ ನಿರ್ಮಾಣವಾಗು ತ್ತಿರುವ ಕ್ಯೂ ಲೈನ್ ಕಾಂಪ್ಲೆಕ್ಸ್ ಕಾಮಗಾರಿಯನ್ನು ಪರಿಶೀಲಿಸಿದರು. ಭಕ್ತಾಧಿಗಳಿಗೆ ಕಲ್ಪಿಸಿರುವ ಸೌಲಭ್ಯಗಳನ್ನು ವೀಕ್ಷಿಸಿದ ಸಚಿವರು ಕೆಲವು ಅಗತ್ಯ ಸೂಚನೆಗಳನ್ನು ನೀಡಿದರು. ಕಾಮಗಾರಿ ವೇಗವಾಗಿ ನಡೆದು ಭಕ್ತಾಧಿಗಳಿಗೆ ಅನುಕೂಲವಾಗಬೇಕು ಎಂದರು.

ನೂತನ ದಾಸೋಹ ಭವನ ನಿರ್ಮಾಣ ಸಂಬಂಧ ಸ್ಥಳ ಪರಿಶೀಲಿಸಿ ಅಧಿಕಾರಿಗಳೊಂದಿಗೆ ಚರ್ಚಿಸಿದರು. 10 ಕೋಟಿ ರೂ. ವೆಚ್ಚದಲ್ಲಿ ಬಹುತೇಕ ನಿರ್ಮಾಣವಾಗಿರುವ 48 ಕೊಠಡಿಗಳ ಡಾರ್ಮಿಟರಿಯನ್ನು ವೀಕ್ಷಿಸಿದರು. ಭಕ್ತಾಧಿಗಳ ವಾಸ್ತವ್ಯಕ್ಕಾಗಿ ನಿರ್ಮಾಣಗೊಂಡು ಉದ್ಘಾಟನೆಯಾಗಿರುವ ವಜ್ರಮಲೆ ಭವನದಲ್ಲಿ ಅಳವಡಿಸಲು ತಯಾರಿಸುತ್ತಿರುವ ಪೀಠೋಪಕರಣ ಕೆಲಸವನ್ನು ವೀಕ್ಷಿಸಿದ ಸಚಿವರು ಗುಣಮಟ್ಟದ ವಸ್ತುಗಳನ್ನು ಬಳಕೆ ಮಾಡುವಂತೆ ಸೂಚಿಸಿದರು. ಭವನದ ಕೊಠಡಿಗಳಿಗೆ ತೆರಳಿ ಅಲ್ಲಿ ಅಳವಡಿಸಲಾಗುತ್ತಿರುವ ಸೌಲಭ್ಯಗಳ ಕುರಿತ ಕೆಲಸವನ್ನು ಪರಿವೀಕ್ಷಿಸಿದರು.

ಬಳಿಕ ದೀಪದ ಒಡ್ಡುವಿನಲ್ಲಿರುವ ಮಲೆ ಮಹದೇಶ್ವರರ ಎತ್ತರದ ಪ್ರತಿಮೆ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ನಿರ್ಮಾಣವಾಗುತ್ತಿರುವ ಗೇಬಿಯನ್ ವಾಲ್ ಕಾಮಗಾರಿಯನ್ನು ಪರಿಶೀಲಿಸಿದರು. ಅಲ್ಲಿ ಆಗಬೇಕಿರುವ ಇನ್ನಷ್ಟು ಕಾಮಗಾರಿ ಸಂಬಂಧ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಮಲೈ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರಘು, ಉಪಕಾರ್ಯದರ್ಶಿ ಚಂದ್ರಶೇಖರ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಕಿರಣ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸಿನ್ನಣ್ಣ, ಇನ್ನಿತರ ಅಧಿಕಾರಿಗಳು ಈ ಸಂದರ್ಭದಲ್ಲಿ ಇದ್ದರು.

# ಸಂಕ್ಷಿಪ್ತ ಸುದ್ದಿ

## ಲಿಲೋ ಪ್ರಸರಣಾ ಮಾರ್ಗ ವಿದ್ಯುದ್ದೀಕರಣ : ಸಾರ್ವಜನಿಕರಿಗೆ ಎಚ್ಚರಿಕೆ

**ತುಮಕೂರು:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಹೊಳವನಹಳ್ಳಿ ಹೋಬಳಿ ಮಾವತ್ತೂರು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗಿರುವ 2*8 ಎಂವಿಎ 66/11ಕೆವಿ ಉಪಸ್ಥಾವರವನ್ನು ವಿದ್ಯುದ್ದೀಕರಣಗೊಳಿಸಲಾಗುತ್ತಿದೆ.

ಹಾಲಿ ಇರುವ 66ಕೆವಿ ಮಧುಗಿರಿ–ಹೊಳವನಹಳ್ಳಿ–ಕೊರಟಗೆರೆ(ಕೊರಟಗೆರೆ–1) ವಿದ್ಯುತ್ ಪ್ರಸರಣ ಮಾರ್ಗದಿಂದ ಹೊಸದಾಗಿ ಕೊಯೋಟ್ ವಾಹಕ ಬಳಸಿ ನಿರ್ಮಿಸಲಾಗಿರುವ 14.764 ಕಿಮೀ ಉದ್ದದ 66ಕೆವಿ ಲಿಲೋ ವಿದ್ಯುತ್ ಪ್ರಸರಣ ಮಾರ್ಗವು ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಕಸಬಾ ಹೋಬಳಿ ಗ್ರಾಮಗಳಾದ ಕಂಬದಹಳ್ಳಿ, ದೇವರಹಳ್ಳಿ, ಹುಲಿಕುಂಟೆ, ಗುಂಡಿನಪಾಳ್ಯ, ಗಂಟಿಗಾನಹಳ್ಳಿ ಮತ್ತು ಗೊರವನಹಳ್ಳಿ, ಕೋಳಾಲ ಹೋಬಳಿಯಲ್ಲಿನ ತೀತಾ ಮತ್ತು ಮೇಳೇಹಳ್ಳಿ ಗ್ರಾಮಗಳು ಹಾಗೂ ಹೊಳವನಹಳ್ಳಿ ಹೋಬಳಿ ವ್ಯಾಪ್ತಿಯ ಬಿದಲೋಟಿ, ತಿಮ್ಮನಹಳ್ಳಿ, ತುಂಬುಗಾನಹಳ್ಳಿ, ಟಿ.ವೆಂಕಟಾಪುರ, ಲಿಂಗಾಪುರ, ಮಿಣ್ಣಸಂದ್ರ, ಮಧ್ಯ ವೆಂಕಟಾಪುರ, ಚೆನ್ನವಡೇರಹಳ್ಳಿ ಮತ್ತು ಮಾವತ್ತೂರು ಗ್ರಾಮಗಳ ಮುಖಾಂತರ ಹಾದುಹೋಗಿದ್ದು, ಸದರಿ 66ಕೆವಿ ಲಿಲೋ ಪ್ರಸರಣ ಮಾರ್ಗವನ್ನು ಫೆಬ್ರವರಿ 26ರಂದು ಅಥವಾ ತದನಂತರ ವಿದ್ಯುದ್ದೀಕರಣಗೊಳಿಸಲಾಗುವುದು.

ಸಾರ್ವಜನಿಕರು ಗೋಪುರಗಳನ್ನು ಹತ್ತುವುದಾಗಲೀ, ಲೋಹದ ಮತ್ತಿತರ ವಸ್ತುಗಳನ್ನು ಪ್ರಸರಣ ಮಾರ್ಗಕ್ಕೆ ಎಸೆಯುವುದಾಗಲೀ, ದನಕರು ಮತ್ತಿತರ ಜಾನುವಾರುಗಳನ್ನು ವಿದ್ಯುತ್ ಗೋಪುರಕ್ಕೆ ಕಟ್ಟುವುದಾಗಲೀ, ವಿದ್ಯುತ್ ಪ್ರಸರಣ ಮಾರ್ಗದಡಿ ಕಟ್ಟಡ, ಷೆಡ್ ಇತ್ಯಾದಿಗಳನ್ನು ಕಟ್ಟುವುದಾಗಲೀ ನಿರ್ಬಂಧಿಸಲಾಗಿದೆ. ಒಂದು ವೇಳೆ ಮೇಲೆ ತಿಳಿಸಿದ ಚಟುವಟಿಕೆಗಳನ್ನು ನಡೆಸಿ ವಿದ್ಯುತ್ ಅಪಘಾತ ಸಂಭವಿಸಿದಲ್ಲಿ ಕವಿಪ್ರನಿನಿಯು ಯಾವುದೇ ರೀತಿಯಲ್ಲೂ ಜವಾಬ್ದಾರಿಯಾಗಿರುವುದಿಲ್ಲವೆಂದು ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

**ತುಮಕೂರು:** ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ತುಮಕೂರು ಜಿಲ್ಲೆಯಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ(10+1) ಕುರಿ / ಮೇಕೆ ಘಟಕಗಳನ್ನು ಸ್ಥಾಪಿಸಲು ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರು ಮತ್ತು ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡಿರುವ ಆಸಕ್ತ 18 ರಿಂದ 60 ವರ್ಷ ವಯೋಮಿತಿಯೊಳಗಿನವರು ಅರ್ಜಿ ಸಲ್ಲಿಸಬಹುದಾಗಿದ್ದು, ಮಹಿಳೆಯರಿಗೆ ಶೇ.33.3ರಷ್ಟು ಮತ್ತು ವಿಶೇಷಚೇತನರಿಗೆ ಶೇ.3ರಷ್ಟು ಮೀಸಲಾತಿ ನೀಡಲಾಗುವುದು.

ಅರ್ಜಿ ನಮೂನೆಯನ್ನು ಜಿಲ್ಲಾ ಅನುಷ್ಠಾನಾಧಿಕಾರಿಗಳು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ, ಕುರಿಭವನ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಆವರಣ, ಕುಣಿಗಲ್ ರಸ್ತೆ, ತುಮಕೂರು ಕಚೇರಿಯಿಂದ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ಮಾರ್ಚ್ 6ರೊಳಗಾಗಿ ಜಿಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ವಾ.ಸಂ. 0816–2270692ನ್ನು ಸಂಪರ್ಕಿಸಬಹುದಾಗಿದೆ ಎಂದು ನಿಗಮದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅವಧಿ ವಿಸ್ತರಣೆ

**ತುಮಕೂರು:** ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವೈಯಕ್ತಿಕ ಫಲಾನುಭವಿ/ ಪಾಲುದಾರಿಕೆ ಸಂಸ್ಥೆ/ ಕಂಪನಿ/ ಜವಳಿ ಸಹಕಾರಿ ಸಂಘ/ ಸಂಸ್ಥೆಗಳು ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತೀಸಣ್ಣ ಘಟಕಗಳನ್ನು ಸ್ಥಾಪಿಸಲು ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ಮಾರ್ಚ್ 10ರವರೆಗೆ ವಿಸ್ತರಿಸಲಾಗಿದೆ.

ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಣ್ಣ ಮತ್ತು ಅತಿ ಸಣ್ಣ ಘಟಕಗಳನ್ನು ಸ್ಥಾಪಿಸಲು ಈಗಾಗಲೇ ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದ ಹಾಗೂ ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮಂಜೂರಾತಿ ಪಡೆದಿರುವ ಅರ್ಹ ಘಟಕಗಳು ಪೂರ್ಣ ಪ್ರಮಾಣದ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಮಾರ್ಚ್ 10ರೊಳಗಾಗಿ ಸಲ್ಲಿಸಬೇಕು.

ಯೋಜನೆ ಕುರಿತು ಪೂರ್ಣ ಮಾಹಿತಿಯನ್ನು ಉಪನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ನಾಗನಿಲಯ, 5ನೇ ಮುಖ್ಯರಸ್ತೆ, ಸಿದ್ದಗಂಗಾ ಬಡಾವಣೆ, ತುಮಕೂರು ಅಥವಾ ದೂ.ವಾ.ಸಂ. 0816–2275370ಯನ್ನು ಸಂಪರ್ಕಿಸಬಹುದಾಗಿದೆ ಎಂದು ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯುತ್ ವ್ಯತ್ಯಯ

**ತುಮಕೂರು:** ಬೆಸ್ಕಾಂ ಗ್ರಾಮೀಣ ಉಪವಿಭಾಗ–2ರ ವ್ಯಾಪ್ತಿಯಲ್ಲಿ ಲಿಂಕ್ ಲೈನ್ ಕಾಮಗಾರಿ ಕೈಗೊಂಡಿರುವುದರಿಂದ ಫೆಬ್ರವರಿ 26ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಹೆತ್ತೇನಹಳ್ಳಿ, ಗಳಿಗೇನಹಳ್ಳಿ, ಹೊಳಕಲ್ಲು, ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

## ಅರ್ಜಿ ಆಹ್ವಾನ

**ತುಮಕೂರು:** ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಪ್ರಶಸ್ತಿಯನ್ನು 2026ರ ಏಪ್ರಿಲ್ 5ರಂದು ಆಚರಿಸುವ ಡಾ: ಬಾಬು ಜಗಜೀವನರಾಂ ಅವರ 119ನೇ ಜನ್ಮ ದಿನಾಚರಣೆ ಹಾಗೂ ಏಪ್ರಿಲ್ 14ರಂದು ಆಚರಿಸುವ ಡಾ: ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆಯ ದಿನದಂದು ರಾಜ್ಯ ಮಟ್ಟದಲ್ಲಿ ನೀಡಲಾಗುವುದು.

# ಜಿಲ್ಲಾ ಮಟ್ಟದ ಏಕಿಕೃತ ಸಮಿತಿ ಸಭೆಯಲ್ಲಿ ಡೀಸಿ ಸೂಚನೆ

# ಹೆಣ್ಣು ಮಕ್ಕಳ ಶಾಲಾ ಗೈರು ಶಿಕ್ಷಕರು ಪರಿಶೀಲಿಸಲಿ



**ಮಂಡ್ಯ:** ಜಿಲ್ಲೆಯಲ್ಲಿ ಬಾಲ್ಯ ವಿವಾಹ ಮತ್ತು ವರದಕ್ಷಿಣೆ ನಿಷೇಧ ಕಾಯ್ದೆ ಕುರಿತು ಸಮಗ್ರ ಶಿಶು ಅಭಿವೃದ್ಧಿ ಯೋಜನೆಗಳ ವತಿಯಿಂದ ಗ್ರಾಮಗಳಲ್ಲಿ ಬೀದಿ ನಾಟಕಗಳ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮತ್ತು ಅರಿವು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಬುಧವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಏಕಿಕೃತ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಜಿಲ್ಲೆಯಲ್ಲಿ ಬಾಲ್ಯ ವಿವಾಹವನ್ನು ತಡೆಗಟ್ಟಲು ಸಂಬಂಧಪಟ್ಟ ಅಧಿಕಾರಿಗಳು ಹೆಚ್ಚಿನ ಕ್ರಮ ವಹಿಸಬೇಕು. ಶಾಲಾ ಹಂತದಲ್ಲಿ ಹೆಣ್ಣು ಮಕ್ಕಳು ಗೈರು ಹಾಜರು ವಿವರಗಳನ್ನು ಶಿಕ್ಷಕರು ಪರಿಶೀಲಿಸಬೇಕು. ಈ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಮಾಡಬೇಕು ಎಂದು ಹೇಳಿದರು.

ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸಿ ಮತ್ತು ಜಿಲ್ಲೆಯ ಅಂಗನವಾಡಿಗಳಿಗೆ ಭೇಟಿ ನೀಡಿ ಆಹಾರ ಪೌಷ್ಟಿಕತೆಯನ್ನು ಅಧಿಕಾರಿಗಳು ಪರಿಶೀಲಿಸಿ ಎಂದು ಸೂಚಿಸಿದರು. ಸಖಿ ಒನ್ ಸ್ಟಾಪ್ ಸೆಂಟರ್ ಗೆ ದಾಖಲಾಗಿರುವ ಪ್ರಕರಣಗಳ ಮೌಲ್ಯಮಾಪನ ವರದಿಯನ್ನು ಒಂದು ವಾರದೊಳಗೆ ನೀಡಬೇಕು .ಸಖಿ ಒನ್ ಸ್ಟಾಪ್ ಸೆಂಟರ್ ಗಳಲ್ಲಿ ಬಯೋ ಮೆಟ್ರಿಕ್ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಹೇಳಿದರು.

ಜಿಲ್ಲೆಯಲ್ಲಿ ಮಹಿಳೆಯರು ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ಮತ್ತು ತಡೆಗಟ್ಟುವ ಸಂಬಂಧ ತಾಲೂಕು ಮತ್ತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಕಾವಲು ಸಮಿತಿ ಸದಸ್ಯರಿಗೆ ತರಬೇತಿ ಕಾರ್ಯಕ್ರಮವನ್ನು ಮಾಡಬೇಕು. ಮಹಿಳೆಯರು ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ನಿಷೇಧ ಕುರಿತು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಬೇಕು ಎಂದು ಹೇಳಿದರು.

ಕೌಟುಂಬಿಕ ದೌರ್ಜನ್ಯ ಕೊಳಗಾದ ಮಹಿಳೆಯರು ಮತ್ತು ಪರಿತ್ಯಕ್ತ ಮಹಿಳೆಯರು ದೌರ್ಜನ್ಯ ಹಾಗೂ ಅತ್ಯಾಚಾರಕ್ಕೆ ಒಳಪಟ್ಟ ಮಹಿಳೆಯರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸಬೇಕು ಮತ್ತು ಕಾನೂನಿನ ನೆರವು ಹಾಗೂ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ನೆರವಾಗಬೇಕು. ಸಾಂತ್ವನ ಕೇಂದ್ರಗಳಿಗೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಬೇಕು ಎಂದು ಸೂಚಿಸಿದರು.

2025–26 ನೇ ಸಾಲಿನಲ್ಲಿ ಸಾಂತ್ವನ ಕೇಂದ್ರಗಳಲ್ಲಿ 565ಪ್ರಕರಣಗಳು ದಾಖಲಾಗಿದ್ದು 537 ಪ್ರಕರಣಗಳು ಇತ್ಯರ್ಥಗೊಂಡಿದ್ದು ಉಳಿದ 28 ಪ್ರಕರಣಗಳನ್ನು ಶೀಘ್ರವೇ ಇತ್ಯರ್ಥ ಮಾಡಬೇಕು ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆ ಕುರಿತು ಅಂಗನವಾಡಿ ಕಾರ್ಯಕರ್ತೆಯರು ಶ್ರೀ ಶಕ್ತಿ ಗುಂಪುಗಳು ಸದಸ್ಯರುಗಳಿಗೆ ಅರಿವು ಮೂಡಿಸಿ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಮಾಡಬೇಕು ಎಂದು ಹೇಳಿದರು.

ಮಿಷನ್ ಶಕ್ತಿ ಯೋಜನೆಯು ಮಹಿಳೆಯರ ಸುರಕ್ಷತೆ ಮತ್ತು ಭದ್ರತೆ ಹಾಗೂ ಸಬಲೀಕರಣಕ್ಕಾಗಿ ಯೋಜನೆ ಮಾಡಿದ್ದೂ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ವೈದ್ಯಕೀಯ ಸೇವೆ,ಕಾನೂನು ಸೇವೆ, ಪೊಲೀಸ್ ನೆರವು, ತಾತ್ಕಾಲಿಕ ಆಶ್ರಯ ನೀಡಿ ಆಪ್ತ ಸಮಾಲೋಚನೆ ಮಾಡಬೇಕು ಎಂದು ಹೇಳಿದರು.

ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆಯಡಿ ಹೆಣ್ಣು ಮಕ್ಕಳ ಉನ್ನತ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಯ ಉತ್ತೇಜಿಸಬೇಕು. ಕುಸಿಯುತ್ತಿರುವ ಹೆಣ್ಣು ಮಕ್ಕಳ ಲಿಂಗಾನುಪಾತವನ್ನು ಉತ್ತಮಪಡಿಸುವುದು ಮತ್ತು ಮಹಿಳೆಯರನ್ನು ಸಬಲೀಕರಣಗೊಳಿಸಬೇಕು ಎಂದು ಹೇಳಿದರು. 2025–26 ನೇ ಸಾಲಿನಲ್ಲಿ ಮಹಿಳಾ ಸಬಲೀಕರಣ ಘಟಕದಿಂದ ಜಿಲ್ಲಾದ್ಯಾಂತ 73 ಕಾರ್ಯಕ್ರಮಗಳನ್ನು ಮಾಡಲಾಗಿದ್ದು ಶಾಲಾ ಕಾಲೇಜು ವಸತಿ ನಿಲಯ ವಿದ್ಯಾರ್ಥಿಗಳಿಗೆ 33ಮತ್ತು ಶಿಕ್ಷಕರಿಗೆ ಅಂಗನವಾಡಿ ಕಾರ್ಯಕರ್ತರಿಗೆ ಸ್ವಸಹಾಯ ಸಂಘದ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ 34 ಕಾರ್ಯಕ್ರಮಗಳನ್ನು ಮಾಡಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶಕ್ತಿ ಸದನ( ಸ್ವಾಧಾರ ಗೃಹ )ಮತ್ತು ಉಜ್ವಲ ಕೇಂದ್ರಗಳಲ್ಲಿ ಸಂಕಷ್ಟಕ್ಕೆ ಒಳಗಾದ ಮಹಿಳೆಯರು ಮತ್ತು ವಿಧವೆಯರು ದೌರ್ಜನ್ಯಕ್ಕೊಳಗದ ಮಹಿಳೆಯರಿಗೆ ನಿರ್ಗತಿಕ ಹೆಣ್ಣು ಮಕ್ಕಳಿಯರಿಗೆ ಉಚಿತವಾಗಿ ಊಟ ವಸತಿ ಮತ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ವೈದ್ಯಕೀಯ ಸೌಲಭ್ಯ ಮತ್ತು ಪುನರ್ವಸತಿ ಪೂರಕವಾಗಿ ವೃತ್ತಿ ತರಬೇತಿ ನೀಡುವುದರ ಜೊತೆಗೆ ಉದ್ಯೋಗಾವಕಾಶವನ್ನು ಕಲ್ಪಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಆನಂದ. ಎಂ ರವರು ಮಾತನಾಡಿ ರವರು ಮಾತನಾಡಿ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಾಂತ್ವನ ನೀಡಿ ತಮ್ಮ ಹಂತದಲ್ಲಿ ಸಭೆ ನಡಸಿ ನಂತರದಲ್ಲಿ ನ್ಯಾಯಾಲಯದ ಗಮನಕ್ಕೆ ತರಬೇಕು ಎಂದು ಹೇಳಿದರು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚು ಇರುವುದರಿಂದ ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಜಾಗೃತಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಮಾಡಬೇಕು ಎಂದು ಹೇಳಿದರು.

ಜಿಲ್ಲೆಯ ಅಂಗನವಾಡಿಗಳಲ್ಲಿ ಮೂಲಭೂತ ಸೌಕರ್ಯಗಳು ಮತ್ತು ಆಹಾರ ಪೌಷ್ಟಿಕತೆಯನ್ನು ಅಧಿಕಾರಿಗಳು ಪರಿಶೀಲಿಸಬೇಕು. ಮತ್ತು ತಿಂಗಳಿಗೊಮ್ಮೆ ವಿವರಗಳನ್ನು ನೀಡಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ. ಆರ್.ನಂದಿನಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕೆ ಆಶಾ, ಕುಷ್ಟರೋಗ ನಿರ್ಮಾಣ ಅಧಿಕಾರಿ ಡಾ. ಸೋಮಶೇಖರ್, ವಕೀಲರ ಸಂಘದ ಅಧ್ಯಕ್ಷರಾದ ಸತ್ಯಾನಂದ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಫಲಾನುಭವಿಗಳು ಆರ್ಥಿಕ ಪ್ರಗತಿ ಸಾಧಿಸಬೇಕು: ಮಂಜು



**ಕೆ.ಆರ್.ಪೇಟೆ:** ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಸೇರಿದಂತೆ ಹಲವು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳ ವತಿಯಿಂದ ಅರ್ಹ ಫಲಾನುಭವಿಗಳಿಗೆ ಉಚಿತ ಹೊಲಿಗೆ ಯಂತ್ರಗಳು ಹಾಗೂ ಸಾರಥಿ ಯೋಜನೆ ಅಡಿಯಲ್ಲಿ ನಿರುದ್ಯೋಗಿ ಯುವಕರಿಗೆ ಸಬ್ಸಿಡಿ ದರದಲ್ಲಿ ಕಾರುಗಳನ್ನು ಕ್ಷೇತ್ರದ ಶಾಸಕ ಹೆಚ್.ಟಿ.ಮಂಜು ಅವರು ವಿತರಣೆ ಮಾಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 15 ಮಂದಿ ನಿರುದ್ಯೋಗಿ ಯುವಕರಿಗೆ ತಲಾ 3 ಲಕ್ಷ ರೂ ಸಬ್ಸಿಡಿ ರೂಪದಲ್ಲಿ ನೀಡಲಾಗುವ ಸಾರಥಿ ಯೋಜನೆ ಅಡಿಯಲ್ಲಿ ಕಾರುಗಳನ್ನು ವಿತರಣೆ ಮಾಡಿದರು. ಅಲ್ಲದೇ 20ಕ್ಕೂ ಹೆಚ್ಚು ಮಂದಿ ಮಹಿಳೆಯರಿಗೆ ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ಶಾಸಕರು ವಿತರಣೆ ಮಾಡುವ ಮೂಲಕ ಫಲಾನುಭವಿಗಳು ಸ್ವಯಂ ಉದ್ಯೋಗ ಕೈಗೊಂಡು ಆರ್ಥಿಕ ಪ್ರಗತಿಯನ್ನು ಸಾಧಿಸಬೇಕು ಎಂದು ಸಲಹೆ ನೀಡಿದರು.

ವಾಹನ ಖರೀದಿ ಮಾಡಲು 3ರಿಂದ 5ಲಕ್ಷ ರೂಪಾಯಿಗಳವರೆಗೆ ಸಹಾಯ ಧನವನ್ನು ಫಲಾನುಭವಿಗಳಿಗೆ ನೀಡಲಾಗುವುದು ಉಳಿದ ಹಣವನ್ನು ಬ್ಯಾಂಕಿನಲ್ಲಿ ಸಾಲದ ರೂಪದಲ್ಲಿ ಪಡೆದು ಕಾರು ಖರೀದಿ ಮಾಡಿ ಬಾಡಿಗೆಗೆ ಕಾರನ್ನು ಓಡಿಸಿ ಸ್ವಾವಲಂಬಿ ಜೀವನ ನಡೆಸಲು ಫಲಾನುಭವಿಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಶಾಸಕರು ಸಲಹೆ ನೀಡಿದರು. ಕರ್ನಾಟಕ ಸರ್ಕಾರವು ಮಹಿಳಾ ಸಬಲೀಕರಣಕ್ಕೆ ಈ ಯೋಜನೆಯನ್ನು ಜಾರಿಗೊಳಿಸಿದೆ. ಹೆಣ್ಣು ಮಕ್ಕಳು ಹೊಲಿಗೆ ಯಂತ್ರದಿಂದ ಒಂದು ಸಂಸಾರವನ್ನು ನಡೆಸಿಕೊಂಡು ಹೋಗುವಂತಹ ಆಧಾಯ ಗಳಿಸಬಹುದು. ಉತ್ತಮ ಹೊಲಿಗೆ ತರಬೇತಿ ಪಡೆದುಕೊಂಡು ಟೈಲರಿಂಗ್ ವೃತ್ತಿ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದು ಹಾಗಾಗಿ ಫಲಾನುಭವಿಗಳು ಇದರ ಸದುಪಯೋಗ ಮಾಡಿಕೊಂಡು ಅಭಿವೃದ್ಧಿ ಸಾಧಿಸಬೇಕು ಎಂದು ಶಾಸಕರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಬೋರೇಗೌಡ, ಅಕ್ಕಿಹೆಬ್ಬಾಳು ಹೋಬಳಿ ಜೆಡಿಎಸ್ ಅಧ್ಯಕ್ಷ ಬಸವಲಿಂಗಪ್ಪ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಅಶೋಕ್, ತಾಲ್ಲೂಕು ಯುವ ಜೆಡಿಎಸ್ ಅಧ್ಯಕ್ಷ ಮಹಾದೇವ್, ಮುಖಂಡರಾದ ಗಣೇಶ್, ಚೌಡೇನಹಳ್ಳಿ ರವಿ, ಲಕ್ಷ್ಮಣ್, ಶಾಸಕರ ಆಪ್ತ ಸಹಾಯಕರಾದ ಅರಳಕುಪ್ಪೆ ಪ್ರತಾಪ್, ಮಾಕವಳ್ಳಿ ಕುಮಾರಸ್ವಾಮಿ, ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಜಿಲ್ಲಾ ಉಸ್ತುವಾರಿ ಸಚಿವರಿಂದ ವಾಯುವಿನಿಂದ ನೀರು ಉತ್ಪಾದಿಸುವ ಘಟಕ ಪರಿಶೀಲನೆ



**ಚಾಮರಾಜನಗರ:** ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ನಗರದ ಸೋಮವಾರಪೇಟೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಶಾಲೆಯಲ್ಲಿ ಅಳವಡಿಸಿರುವ ಏರೋ ವಾಟರ್ ಕಂಪನಿಯ ವಾಯುವಿನಿಂದ ನೀರು (ಏರ್–ಟು–ವಾಟರ್) ಉತ್ಪಾದಿಸುವ ಘಟಕವನ್ನು ಪರಿಶೀಲಿಸಿದರು.

ಸೋಮವಾರಪೇಟೆ ಬಡಾವಣೆಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಕುಡಿಯುವ ನೀರಿನ ಉದ್ದೇಶಕ್ಕಾಗಿ ಏರೋ ವಾಟರ್ ಕಂಪನಿ ವತಿಯಿಂದ ಅಳವಡಿಸಿರುವ ವಾಯುವಿನಿಂದ ದಿನಕ್ಕೆ 100 ಲೀ. ಸಾಮರ್ಥ್ಯದ ಶುದ್ಧ ಕುಡಿಯುವ ನೀರು ಉತ್ಪಾದಿಸುವ ಘಟಕದ ಕಾರ್ಯವೈಖರಿಯನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ವೀಕ್ಷಿಸಿದರು.

ಇದೇ ವೇಳೆ ಜಿಲ್ಲಾ ಉಸ್ತುವಾರಿ ಸಚಿವರು ಅಲ್ಲಿಯೇ ಇದ್ದ ಶಾಲೆಯ ಮುಖ್ಯೋಪಾಧ್ಯಾಯರಾದ ನಾಗಲಕ್ಷ್ಮೀ ಅವರಿಗೆ ವಾಯುವಿನಿಂದ ನೀರು ಉತ್ಪಾದಿಸುವ ಘಟಕದ ನಿರ್ವಹಣೆ ಸರಿಯಾಗಿದೆಯೇ, ನೀರು ಶುದ್ಧತೆಯಿಂದ ಕೂಡಿದೆಯೆ, ಮಕ್ಕಳಿಗೆ ಕುಡಿಯುವ ನೀರು ಸಾಕಾಗುತ್ತಿದೆಯೇ ಎಂದು ವಿಚಾರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಲೆಯ ಮುಖ್ಯೋಪಾಧ್ಯಾಯರು ಘಟಕದಿಂದ ಮಕ್ಕಳಿಗೆ ಕುಡಿಯುವ ನೀರು ಸಮರ್ಪಕವಾಗಿ ದೊರೆಯುತ್ತಿದ್ದು, ಘಟಕ ಅಳವಡಿಕೆಯಿಂದ ಕುಡಿಯುವ ನೀರಿನ ಸಮಸ್ಯೆ ಪರಿಹಾರವಾಗಿದೆ ಎಂದರು.

ಜಿಲ್ಲಾಧಿಕಾರಿ ಶ್ರೀರೂಪ ಅವರು ಜಿಲ್ಲಾ ಉಸ್ತುವಾರಿ ಸಚಿವರಿಗೆ ಏರೋ ವಾಟರ್ ತಂತ್ರಜ್ಞಾನದ ಬಗ್ಗೆ ವಿವರಿಸಿ ವಾತಾವರಣದಲ್ಲಿರುವ ತೇವಾಂಶವನ್ನು ಸಂಗ್ರಹಿಸಿ ಅದನ್ನು ಸಾಂದ್ರೀಕರಿಸಿ ಹಾಗೂ ಶುದ್ದೀಕರಿಸುವ ಮೂಲಕ ಕುಡಿಯಲು ಯೋಗ್ಯವಾದ ನೀರನ್ನು ಉತ್ಪಾದಿಸಲಾಗುತ್ತದೆ. ಈ ತಂತ್ರಜ್ಞಾನವು ಅಂತರ್ಜಲ ಅಥವಾ ಮಳೆಯನ್ನು ಅವಲಂಬಿಸದೇ ವರ್ಷಪೂರ್ತಿ ನಿರಂತರವಾಗಿ ನೀರನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ ಎಂದರು.

ವಿದ್ಯುತ್ ಆಧಾರಿತವಾಗಿ ಕಾರ್ಯನಿರ್ವಹಿಸುವ ಈ ಘಟಕವನ್ನು ಸೌರಶಕ್ತಿಯೊಂದಿಗೆ ಜೋಡಿಸಬಹುದಾಗಿದೆ. ದೂರದ ಹಾಗೂ ಅರಣ್ಯ ಪ್ರದೇಶಗಳಿಗೆ ಈ ತಂತ್ರಜ್ಞಾನ ಬಹಳ ಉಪಯುಕ್ತವಾಗಿದ್ದು, ಅರಣ್ಯ ಪ್ರದೇಶಗಳು ಹೆಚ್ಚಾಗಿರುವ ಜಿಲ್ಲೆಯ ಅಗತ್ಯಗಳನ್ನು ಮನಗಂಡು ಈ ತಂತ್ರಜ್ಞಾನವನ್ನು ಜಿಲ್ಲೆಗೆ ಪರಿಚಯಿಸಲಾಗುತ್ತಿದೆ ಎಂದು ಉಸ್ತುವಾರಿ ಸಚಿವರಿಗೆ ಜಿಲ್ಲಾಧಿಕಾರಿ ಶ್ರೀರೂಪ ಅವರು ವಿವರಿಸಿದರು.

ನಂತರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಜಿಲ್ಲೆಯಲ್ಲಿ ಇಂತಹ ಘಟಕಗಳನ್ನು ಕುಡಿಯುವ ನೀರಿನ ಸಮಸ್ಯೆ ಇರುವ ಪ್ರದೇಶಗಳಲ್ಲಿ ಅಳವಡಿಸಿ ತೊಂದರೆ ಪರಿಹರಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲಾಧಿಕಾರಿ ಕಚೇರಿಯ ಸಿಎಸ್ಆರ್ ಸಮಾಲೋಚಕರಾದ ರಕ್ಷಿತಾ, ಇತರರು ಈ ಸಂದರ್ಭದಲ್ಲಿ ಇದ್ದರು.

# ಒಳಮೀಸಲಾತಿ ಗೊಂದಲ ನಿವಾರಿಸಿ: ಬಲಗೈ ಸಮುದಾಯಗಳ ಒಕ್ಕೂಟದಿಂದ ಡಿಸಿಗೆ ಮನವಿ



**ಮಂಡ್ಯ:** ಒಳಮೀಸಲಾತಿಗೆ ಸಂಬಂಧಿಸಿದ ಗೊಂದಲಗಳು, ಸಮಸ್ಯೆಗಳು ಹಾಗೂ ನ್ಯಾಯಾಲಯದ ಅಡೆ ತಡೆಗಳು ಸಂಪೂರ್ಣವಾಗಿ ನಿವಾರಣೆ ಆಗುವವರೆಗೆ, ಹಳೆಯ ಮೀಸಲಾತಿ ಜಾರಿಗೆ ಒತ್ತಾಯಿಸಿ ಬಲಗೈ ಸಮುದಾಯಗಳ ಒಕ್ಕೂಟದ ವತಿಯಿಂದ ಪ್ರತಿಭಟನೆ ನಡೆಯಿತು.

ಜಿಲ್ಲಾಧಿಕಾರಿಗಳ ಕಚೇರಿಯ ಉದ್ಯಾನವನದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ಜಿಲ್ಲಾಧಿಕಾರಿ ಗಳ ಕಚೇರಿ ಎದುರು ಪ್ರತಿಭಟನೆ ನಡೆಸಿ ಪ್ರತಿಭಟಿಸಿದರು.

ನ್ಯಾ.ನಾಗಮೋಹನ್ ದಾಸ್ ರವರ ಅವೈಜ್ಞಾನಿಕ ವರದಿಯನ್ನು ಖಂಡಿಸಿ ಹಾಗೂ ಆದಿ ದ್ರಾವಿಡ,ಆದಿ ಆಂಧ್ರ, ಆದಿ ಕರ್ನಾಟಕ ಮತ್ತು ಬಲಗೈ ಸಂಬಂಧಿತ ಜಾತಿಗಳಿಗೆ ಆಗಲಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಆಗ್ರಹಿಸಿದರು.

ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಸುರೇಶ್ ಕಂಠಿ ಮಾತನಾಡಿ ಒಳ ಮೀಸಲಾತಿ ಗೊಂದಲ ಬಗೆಹರಿಯು ವವರೆಗೂ ಹಳೆಯ ಮೀಸಲಾತಿ ಜಾರಿ ಮಾಡುವ ಮೂಲಕ ನೇಮಕಾತಿ ಮತ್ತು ಶಿಕ್ಷಣಕ್ಕೆ ತೊಂದರೆ ಆಗದಂತೆ ತಕ್ಷಣ ಸೂಕ್ತ ಆದೇಶ ಹೊರಡಿಸಬೇಕು ಎಂದು ಆಗ್ರಹಿಸಿದರು.

ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಪ್ರವರ್ಗ ಎ, ಬಿ, ಸಿ ಎಂದು ವರ್ಗೀಕರಿಸಿ ಪ್ರಮಾಣ ಪತ್ರ ವಿತರಿಸಲು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶದಿಂದ ವಿದ್ಯಾರ್ಥಿಗಳು ಹಾಗೂ ಉದ್ಯೋಗಾ ಕಾಂಕ್ಷಿಗಳು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.ಎರಡು ವರ್ಷಗಳಿಂದ ಒಳಮೀಸಲಾತಿ ಗೊಂದಲದಿಂದಾಗಿ ಪರಿಶಿಷ್ಟ ಜಾತಿಯವರಷ್ಟೇ ಅಲ್ಲದೇ ಇತರೆ ಸಮುದಾಯದ ಅಭ್ಯರ್ಥಿಗಳಿಗೂ ನೇಮಕಾತಿ ಪ್ರಕ್ರಿಯೆಯಲ್ಲಿ ತೊಂದರೆ ಉಂಟಾಗಿದೆ.ವಯೋಮಿತಿ ಮೀರಿದ ಅಭ್ಯರ್ಥಿಗಳು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂದು ದೂರಿದರು.

ರಾಜ್ಯ ಸರ್ಕಾರವು ಸೆ.3 ರಂದು ಯಾವುದೇ ಮಾನದಂಡ ಗಳನ್ನು ಅನುಸರಿಸದೇ ಅವೈಜ್ಞಾನಿಕವಾಗಿ ಹೊರಡಿ ಸಿರುವ ಮೀಸಲಾತಿ ಆದೇಶವನ್ನು ತಕ್ಷಣ ಪರಿಷ್ಕರಿಸಬೇಕು.ಈ ಹಿಂದಿನ ಆದೇಶವನ್ನು ತಿದ್ದುಪಡಿ ಮಾಡಿ ವೈಜ್ಞಾನಿಕವಾಗಿ ಮೀಸಲಾತಿ ರೋಸ್ಟರ್ ಬಿಂದುಗಳನ್ನು ಮರು ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ದೀಪಕ್, ನಿತ್ಯಾನಂದ,ಆನಂದ್ ಕುಮಾರ್, ಎಂ.ವಿ.ಕೃಷ್ಣ, ಭೈರವ, ತಗ್ಗಹಳ್ಳಿ ರವಿ ಕುಮಾರ್,ಬಿ.ಪಿ.ಪ್ರಕಾಶ್, ಕಣಿವೆ ರಾಮು ಸೇರಿದಂತೆ ಮತ್ತಿತರರು ಭಾಗವಹಿಸಿದರು.

# ರೈತ ಸಂಘದ ಸಾಲಿಗ್ರಾಮ ತಾಲೂಕು ಅಧ್ಯಕ್ಷರಾಗಿ ಎಸ್.ಬಿ.ಶೇಖರ್ ಪುನರಾಯ್ಕೆ



**ಕೆ.ಆರ್.ನಗರ:** ಕರ್ನಾಟಕ ರಾಜ್ಯ ರೈತ ಸಂಘದ ಸಾಲಿಗ್ರಾಮ ತಾಲೂಕು ಅಧ್ಯಕ್ಷರಾಗಿ ಎಸ್.ಬಿ.ಶೇಖರ್ ಅವರು ಪುನರಾಯ್ಕೆ ಆಗಿದ್ದಾರೆ. ಸಾಲಿಗ್ರಾಮ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಅವರ ನೇತೃತ್ವದಲ್ಲಿ ನಡೆದ ಪದಾಧಿಕಾರಿಗಳ ಪುನರಚನಾ ಸಭೆಯಲ್ಲಿ ಸಾಲಿಗ್ರಾಮ ತಾಲೂಕು ಘಟಕಕ್ಕೆ ಕಾರ್ಯಾಧ್ಯಕ್ಷರಾಗಿ ಕೃಷ್ಣೆಗೌಡ, ಪ್ರಧಾನ ಕಾರ್ಯದರ್ಶಿಯಾಗಿ ಎಸ್ ಜಿ ಆರ್ ಧನಂಜಯ, ಉಪಾಧ್ಯಕ್ಷರಾಗಿ ಸುರೇಶ್, ಯುವ ಘಟಕದ ಅಧ್ಯಕ್ಷರಾಗಿ ಕುಮಾರಸ್ವಾಮಿ ಅವರುಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಗ್ರಾಮ ಮಟ್ಟದಲ್ಲಿ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ಗುಣವನ್ನು ಸಂಘದ ಸರ್ವ ಸದಸ್ಯರುಗಳು ಮೈಗೂಡಿಸಿಕೊಳ್ಳಬೇಕು. ಅವರ ಸಮಸ್ಯೆಗಳಿಗೆ ರೈತ ಸಂಘದವರು ಪರಿಹಾರವನ್ನು ಕಲ್ಪಿಸಿಕೊಟ್ಟಾಗ ಅಥವಾ ಅದಕ್ಕಾಗಿ ಹೋರಾಟವನ್ನು ಮಾಡಿದಾಗ ಜನರು ನಮ್ಮ ಸಂಘಟನೆಯತ್ತ ಹೆಚ್ಚು ಒಲವು ತೋರಿಸುತ್ತಾರೆ. ಆ ಮೂಲಕ ಈ ನಾಡಿಗೆ ನಮ್ಮದೇ ಆದ ಕೊಡುಗೆಯನ್ನು ಸರ್ವರೂ ನೀಡಬೇಕು ಎಂದರು.

ತಾಲೂಕಿನ ಚುಂಚನಕಟ್ಟೆಯಲ್ಲಿರುವ ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು ಸರ್ಕಾರವೇ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ಅದಕ್ಕೆ ಕಾಯಕಲ್ಪ ನೀಡಿ ಸಕ್ಕರೆ ಕಾರ್ಖಾನೆಯನ್ನು ನಡೆಸುವಂತೆ ಮಾಡಬೇಕು. ಆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ರೈತ ಸಂಘವು ಸಭೆ ನಡೆಸಿ ಚಳುವಳಿ ನಡೆಸುವ ಕಾರ್ಯವನ್ನು ಮಾಡಲಾಗುತ್ತದೆ ಎಂದರು. ಸಭೆಯಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮರಂಕಯ್ಯ, ಮಹಿಳಾ ಘಟಕದ ರಾಜ್ಯ ಕಾರ್ಯದರ್ಶಿ ನೇತ್ರಾವತಿ, ಕೆ.ಆರ್.ನಗರ ತಾಲ್ಲೂಕು ಅಧ್ಯಕ್ಷ ನಟರಾಜು, ನಗರ ಘಟಕದ ಗೌರವಾಧ್ಯಕ್ಷ ಸೋಮಣ್ಣ, ಉಪಾಧ್ಯಕ್ಷ ಕೆಂಪೇಗೌಡ, ಖಜಾಂಚಿ ಎಸ್.ಹೆಚ್.ಕುಮಾರ, ಸಂಘಟನಾ ಕಾರ್ಯದರ್ಶಿ ಶ್ರೀನಿವಾಸ್, ಕಾರ್ಯದರ್ಶಿಗಳಾದ ಶಿವರಾಮು, ಮಂಜು, ರೈತ ಮುಖಂಡರುಗಳಾದ ಸೀನೇಗೌಡ, ಪ್ರಭ, ಟ್ರಾಕ್ಟರ್ ಅನಂತ, ಶಂಕರ, ಈಶ್ವರ, ರಮೇಶ, ಮೇಲೂರಿನ ರಾಮಚಂದ್ರೇಗೌಡ, ಕರಿಗೌಡ, ಬಳ್ಳೂರಿನ ಪ್ರಸನ್ನ ಇನ್ನಿತರರಿದ್ದರು.

# ನಮ್ಮ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆಯುತ್ತಿದೆ: ಶಾಸಕ ಡಿ ರವಿಶಂಕರ್

**ಕೆ. ಆರ್ .ನಗರ:** ನಮ್ಮ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆಯುತ್ತಿದೆ.ಭರವಸೇಕೊಟ್ಟಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದು ಇದಕ್ಕಾಗಿ ವರ್ಷಕ್ಕೆ 56 ಸಾವಿರ ಕೋಟಿ ಮೀಸಲಿಟ್ಟು ಇತರೆ ಅಭಿವೃದ್ಧಿಗೂ ಅನುದಾನ ನೀಡುತ್ತಿದೆ ಇಂದು ಶಾಸಕ ಡಿ ರವಿಶಂಕರ್ ತಿಳಿಸಿದರು.ಸಕ್ಕರೆ ಗ್ರಾಮದಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು.



ತಾಲೂಕಿನ ಮಾಯಿಗೌಡಹಳ್ಳಿ ಗ್ರಾ.ಪಂ.ವ್ಯಾಪ್ತಿಯ ಮಾಯೆಗೌಡನಹಳ್ಳಿ ಹಲಗೆಗೌಡನಕೊಪ್ಪಲು. ಸಕ್ಕರೆ ಗ್ರಾಮಗಳಲ್ಲಿ ರಸ್ತೆ ಚರಂಡಿ ದೇವಸ್ಥಾನ ಸೇರಿದಂತೆ ವಿವಿಧ ಅಭಿವೃದ್ಧಿಗಾಗಿ 1 ಕೋಟಿ ಅನುದಾನ ನೀಡಿದ್ದು ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸುತಿದ್ದೇವೆ. ಉಳಿದ ಅಭಿವೃದ್ಧಿ ಕೆಲಸಗಳಿಗೂ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡುತ್ತೇನೆ ತುರ್ತಾಗಿ ಆಗಬೇಕಾದ ಕೆಲಸ ಕಾರ್ಯಗಳ ಬಗ್ಗೆ ಗ್ರಾಮದಲ್ಲಿ ಹಿರಿಯ ಮತ್ತು ಯುವ ಮುಖಂಡರು ಚರ್ಚಿಸಿ ಅಂತಹ ಕಾಮಗಾರಿಗಳನ್ನು ಶೀಘ್ರದಲ್ಲೇ ಮಾಡಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು.

20 ವರ್ಷಗಳಿಂದಲೂ ಅಭಿವೃದ್ಧಿಯನ್ನೇ ಕಾಣದ ಸಕ್ಕರೆ ಹಲಗೆಗೌಡನ ಕೊಪ್ಪಲು ಸೇರಿದಂತೆ ಈ ಭಾಗದ ಗ್ರಾಮಗಳಲ್ಲಿ ಕನಿಷ್ಠ ಉತ್ತಮ ರಸ್ತೆಯು ಇಲ್ಲದಂತಾಗಿದೆ. ಇಲ್ಲಿಯ ಸಾರ್ವಜನಿಕರ ಬೇಡಿಕೆಯಂತೆ ಸಕ್ಕರೆ ಗ್ರಾಮದಲ್ಲಿ ಇದೀಗ 50 ಲಕ್ಷ ರೂಗಳ ವೆಚ್ಚದಲ್ಲಿ ರಸ್ತೆ ಮಾಡಲಾಗುತ್ತಿದ್ದು ಸರ್ಕಾರದ ಬಜೆಟ್ ನಂತರ ಬರುವ ಅನುದಾನದಲ್ಲಿ ಉಳಿದ ಭಾಗದ ರಸ್ತೆಯನ್ನು ನಿರ್ಮಾಣ ಮಾಡಿಕೊಡಲಾಗುವುದು.

ನೂರರಷ್ಟು ಶೇಕಡ ಮತದಾನ ನೀಡಿ ನನ್ನನ್ನು ಬೆಂಬಲಿಸಿರುವ ಈ ಗ್ರಾಮವನ್ನು ನಮ್ಮ ಉಸಿರಿರುವವರೆಗೂ ನಾವು ಮರೆಯುವುದಿಲ್ಲ ಈ ಹಿಂದೆನೂ ಶಾಸಕರಾಗುವ ಮುಂಚೆಯೂ ಈ ಗ್ರಾಮಗಳಿಗೆ ಕಾಂಗ್ರೆಸ್ ಸರ್ಕಾರದಿಂದ ಅನುದಾನವನ್ನು ಕೊಡಿಸಿದ್ದು ನಮ್ಮ ತಂದೆ ದೊಡ್ಡ ಸ್ವಾಮಿಗೌಡರು ಮತ್ತು ನಾನು ಈ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿ ಮಾಡುತ್ತೇವೆ ಸ್ವಲ್ಪ ಕಾಲಾವಕಾಶ ಕೊಡಿ ಜೊತೆಗೆ ನಮ್ಮ ಮೇಲೆ ಭರವಸೆ ಇರಲಿ ಎಂದರು.

ಗೃಹಲಕ್ಷ್ಮಿ ಉಚಿತ ಬಸ್ ಉಚಿತ ವಿದ್ಯುತ್ ಇವೆಲ್ಲವೂ ಗ್ರಾಮೀಣ ಬದುಕನ್ನು ಉದ್ದರಿಸುವ ಕಾರ್ಯಕ್ರಮಗಳಾಗಿದ್ದು ಯಾರೇ ಆರೋಪಗಳನ್ನು ಮಾಡಿದರು ಈ ಕಾರ್ಯಕ್ರಮಗಳು ಬಡವರ ನೆರವಿಗೆ ಸಾಕಷ್ಟು ಕೊಡುಗೆ ನೀಡುತ್ತಿದ್ದು ಇವುಗಳು ಮಾತ್ರವಲ್ಲದೆ ತಾಲೂಕಿನ ನಿರ್ಲಕ್ಷಿತ ಗ್ರಾಮಗಳನ್ನು ಗುರುತಿಸಿ ಅವುಗಳ ಅಭಿವೃದ್ಧಿಗೂ ಅನುದಾನ ನೀಡಲಾಗುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಾಯಿಗೌಡನಹಳ್ಳಿ ಗ್ರಾಮದಲ್ಲಿ 5 ಲಕ್ಷ ರೂ ವೆಚ್ಚದ ವೀರಭದ್ರೇಶ್ವರ ದೇವಸ್ಥಾನ, ಗ್ರಾಮದ ಪರಿಮಿತಿಯಲ್ಲಿ 10 ಲಕ್ಷ ರೂ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿ, ಸಕ್ಕರೆ ಗ್ರಾಮದಲ್ಲಿ 50 ಲಕ್ಷ ರೂ ವೆಚ್ಚದ ರಸ್ತೆ ಅಭಿವೃದ್ಧಿ, 10 ಲಕ್ಷ ವೆಚ್ಚದ ಗಂಗಮಾಳಮ್ಮ ಮತ್ತು ದೊಡ್ಡಮ್ಮ ತಾಯಿ ದೇವಸ್ಥಾನ ನಿರ್ಮಾಣ, ಹಲಗೇಗೌಡನಕೊಪ್ಪಲು ಗ್ರಾಮದಲ್ಲಿ 25 ಲಕ್ಷ ರೂ ವೆಚ್ಚದ ರಸ್ತೆ ಅಭಿವೃದ್ಧಿಗೆ ಚಾಲನೆ ನೀಡಿದರು

ಈ ಸಂದರ್ಭದಲ್ಲಿ ತಾ.ಪಂ.ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಮ್ಮನಹಳ್ಳಿ ಉದಯ್, ಮಾಯಿಗೌಡನಹಳ್ಳಿ ಗ್ರಾ.ಪಂ.ಮಾಜಿ ಅಧ್ಯಕ್ಷ ಮಹೇಶ್, ಕಾವ್ಯ ಬೀರೇಗೌಡ, ಉಪಾಧ್ಯಕ್ಷರಾದ, ಎಂ.ಎನ್.ಮಹದೇವ, ವಡ್ಡಕೊಪ್ಪಲು ಕುಮಾರಸ್ವಾಮಿ, ನರಸಿಂಹಗೌಡ, ಷಣ್ಮುಖ, ಮಲ್ಲಿಕಾರ್ಜುನ್, ಮಾಜಿ ಸದಸ್ಯ ರಘು, ಹರಸೋಗೆ ನವೀನ್, ಕರಿಗೌಡ, ಮಾಜಿ ಗ್ರಾಪಂ ಅಧ್ಯಕ್ಷ ಪಾಣಿ ಮಹೇಶ್, ನಾಡಪ್ಪನಹಳ್ಳಿ ಅಶ್ವತ, ಗೌಡಯ್ಯ ಜಲೇಂದ್ರ, ಕೆಂಪೇಗೌಡ, ನಟರಾಜ್,

ಹಾಡ್ಯ ಸಹಕಾರ ಸಂಘದ ಮಾಜಿ ಅಧ್ಯಕ್ಷ ತ್ರಿಯಂಬಕಸ್ವಾಮಿ, ಹಾಡ್ಯ ರಾಕೇಶ್, ಮಾಜಿ ಗ್ರಾಪಂ ಸದಸ್ಯರಾದ ಮಹದೇವ್,ಜಯರಾಂ, ಕುಮಾರ್. ದೊಡ್ಡೇಗೌಡ,ದಶರಥ, ಸುರೇಶ್,ಪಿಡಿಓ ರಾಜೇಶ್,ಇಂಜಿನಿಯರ್ ತುಳಸಿ ಕುಮಾರ್ ಸೇರಿದಂತೆ ಮತ್ತಿತರರು ಹಾಜರಿದ್ದರು.

# ಜ್ಞಾನ, ವಿಜ್ಞಾನ, ತತ್ವಜ್ಞಾನ ವಿಶ್ವ ಕಲ್ಯಾಣಕ್ಕೆ ಕೆಲಸ ಮಾಡಲಿ: ಡಾ.ವಿಜಯಲಕ್ಷ್ಮೀ ಬಾಳೆಕುಂದ್ರಿ

**ಮೈಸೂರು:** ಜ್ಞಾನ. ವಿಜ್ಞಾನ ಮತ್ತು ತತ್ವಜ್ಞಾನ ಸಮ್ಮಿಲನವಾಗಿ, ವಿಶ್ವದ ಕಲ್ಯಾಣಕ್ಕಾಗಿ ಕೆಲಸ ಮಾಡಬೇಕು ಎಂದು ಖ್ಯಾತ ಮಕ್ಕಳ ಹೃದ್ರೋಗತಜ್ಞೆ.ಡಾ.ವಿಜಯಲಕ್ಷ್ಮೀ ಬಾಳೆಕುಂದ್ರಿ ಆಶಿಸಿದರು.

ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವತಿಯಿಂದ ಕೇಂದ್ರದ ಸೆಮಿನಾರ್ ಹಾಲ್ ನಲ್ಲಿ ಬುಧವಾರ ಏರ್ಪಡಿಸಿದ್ದ ಏಷಣ–2026, ಸಂಶೋಧನಾ ವಿಧಾನ, ಜೈವಿಕ ಅಂಕಿ ಅಂಶಗಳ ಕುರಿತು ರಾಷ್ಟ್ರೀಯ ಕಾರ್ಯಾಗಾರದ ಗೌರವ ಅತಿಥಿಯಾಗಿ ಮಾತನಾಡಿದ ಅವರು, ನಳಂದ, ತಕ್ಷಶಿಲ ವಿವಿಗಳನ್ನು ನಾಶ ಮಾಡಿದರೂ ಆಯುರ್ವೇದ ಇವತ್ತಿಗೂ ಉಳಿದಿದೆ. ಪ್ರಧಾನಿ ಮೋದಿ ಅವರಿಂದಾಗಿ ಯೋಗ ಮತ್ತು ಆಯುರ್ವೇದಕ್ಕೆ ಸಾಕಷ್ಟು ಉತ್ತೇಜನ ಸಿಗುತ್ತಿದೆ. ಯಾವುದೇ ವಿಷಯದಲ್ಲಿ ಸಕಾರಾತ್ಮಕತೆ ಇರಬೇಕೆ ಹೊರತು ನಕಾರಾತ್ಮಕತೆ ಇರಬಾರದು ಎಂದು ಅವರು ಕಿವಿಮಾತು ಹೇಳಿದರು.

ಕಾರ್ಯಾಗಾರ ಉದ್ಘಾಟಿಸಿದ ಮೈಸೂರು ಜಯದೇವ ಹೃದ್ರೋಗ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಮಾತನಾಡಿ, ಸಂಶೋಧನೆ ಎಂಬುದು ಆಯ್ಕೆಯಲ್ಲ ಅದು ಜವಾಬ್ದಾರಿ. ನಿಖರವಾದ ಅಂಕಿ, ಅಂಶಗಳೊಂದಿಗೆ ವಿಶ್ಲೇಷಣೆ ಮಾಡಬೇಕು.ಸಾಂಪ್ರದಾಯಿಕ ಹಾಗೂ ಆಧುನಿಕ ವೈದ್ಯ ಪದ್ಧತಿಯ ಸಮ್ಮಿಲನವಾಗಿ, ಜಾಗತಿಕ ಮಟ್ಟಕ್ಕೆ ತಲುಪಬೇಕು. ಯೋಗ, ಪ್ರಾಣಾಯಾಮ ಜೀವನ ವಿಧಾನವಾಗಿದ್ದು, ಮೈಸೂರಿನ ಜಯದೇವ ಹೃದ್ರೋಗ ಸಂಸ್ಥೆಯು ಸರ್ಕಾರಿ ಆಯುರ್ವೇದ ಸಂಶೋಧನಾ ಸಂಸ್ಥೆಯೊಂದಿಗೆ ಈ ಸಂಬಂಧ ಒಡಂಬಡಿಕೆ ಮಾಡಿಕೊಂಡಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಶ್ರೀವತ್ಸ, ಆದಿಚುಂಚನಗಿರಿ ವಿವಿಯ ವಿಶ್ರಾಂತ ಕುಲಪತಿ ಡಾ.ಎಂ.ಎ.ಶೇಖರ್, ಆಯುಷ್ ಇಲಾಖೆ ನಿವೃತ್ತ ಉಪ ನಿರ್ದೇಶಕ ಡಾ.ಎಸ್.ಜಿ.ಮಂಗಳಗಿ, ರಾಜೀವಗಾಂಧಿ ಆರೋಗ್ಯ ವಿವಿ ನಿರ್ದೇಶಕ ಡಾ.ರಾಮಚಂದ್ರಶೆಟ್ಟಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿದರು. ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ ಸ್ವಾಗತಿಸಿದರು.

ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಪಂಚಕರ್ಮ ವಿಭಾಗದ ಮುಖ್ಯಸ್ಥೆ ಡಾ.. ವರ್ಷ ಕುಲಕರ್ಣಿ ವಂದಿಸಿದರು. ಡಾ.ರಾಜಶ್ರೀ ಪ್ರಾರ್ಥಿಸಿದರು. ಆಡಳಿತಾಧಿಕಾರಿ ಶೋಭಾ, ಡಾ.ಪ್ರೇಮ, ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕಾಲೇಜಿನ ಪ್ರಾಂಶುಪಾಲ ಡಾ.ಕೆ.ವಿ. ವೆಂಕಟಕೃಷ್ಣ, ಡಾ.ಅನಂತ ದೇಸಾಯಿ, ಡಿಎಫ್ಆರ್ಎಲ್ ನಿವೃತ್ತ ವಿಜ್ಞಾನಿ ಡಾ.ರಾಮಕೃಷ್ಣ ಮೊದಲಾದವರು ಇದ್ದರು.



# ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಖಾಸಗಿತನ ಮರೆತ ಮೌಲ್ಯ, ಅಗತ್ಯವಾದ ಆಯ್ಕೆ

ಈಗ 2 –3 ದಶಕಗಳ ಹಿಂದೆ ಬದುಕು ಎಂಬುದು ನಮ್ಮೊಳಗೆ ನಡೆಯುವ ಪ್ರಕ್ರಿಯೆಯಾಗಿತ್ತು. ಇಂದು ಅದು ಎಲ್ಲರ ಮೊಬೈಲ್ ಪರದೆಯ ಮೇಲೆ ನಡೆಯುವ ಪ್ರದರ್ಶನವಾಗಿದೆ. ತಂತ್ರಜ್ಞಾನ, ವಿಶೇಷವಾಗಿ ಸಾಮಾಜಿಕ ಜಾಲತಾಣಗಳು, ಬದುಕಿನ ಅನೇಕ ಆಯಾಮಗಳನ್ನು ಸುಲಭಗೊಳಿಸಿವೆ ಎಂಬುದು ಸತ್ಯ. ಆದರೆ ಅದೇ ಸಮಯದಲ್ಲಿ, ಅವು ವ್ಯಕ್ತಿಯ ಖಾಸಗಿತನವನ್ನು ನಿಧಾನವಾಗಿ ಕುಗ್ಗಿಸುತ್ತಿವೆ ಎಂಬ ವಾಸ್ತವವೂ ಅಷ್ಟೇ ಗಂಭೀರ. ನಾವು ಏನು ಮಾಡುತ್ತೇವೆ ಎಂಬುದಕ್ಕಿಂತ, ಅದನ್ನು ಹೇಗೆ ತೋರಿಸುತ್ತೇವೆ ಎಂಬುದೇ ಮುಖ್ಯವಾಗುತ್ತಿರುವ ಕಾಲದಲ್ಲಿ ಬದುಕುತ್ತಿದ್ದೇವೆ.

ಸಂತೋಷ, ದುಃಖ, ಸಾಧನೆ, ಸೋಲು, ಸಂಬಂಧ, ನಿರ್ಧಾರ?ಎಲ್ಲವೂ ಹಂಚಿಕೊಳ್ಳಬೇಕಾದ ವಿಷಯಗಳಾಗಿವೆ ಎಂಬ ಅಲಿಖಿತ ನಿಯಮವನ್ನು ಸಾಮಾಜಿಕ ಜಾಲತಾಣಗಳು ನಿರ್ಮಿಸಿವೆ. ಹಂಚಿಕೊಳ್ಳದಿದ್ದರೆ ಅನುಮಾನ, ಹೇಳದಿದ್ದರೆ ದೂರ, ತೋರಿಸದಿದ್ದರೆ ಅಸ್ತಿತ್ವವಿಲ್ಲ ಎಂಬ ಭಾವನೆ ವ್ಯಕ್ತಿಯನ್ನು ಆವರಿಸುತ್ತಿದೆ. ಈ ಸ್ಥಿತಿಯಲ್ಲಿ ಖಾಸಗಿತನ ಎನ್ನುವುದು ಹಳೆಯ ಕಾಲದ ಸಂಪ್ರದಾಯದಂತೆ ಕಾಣಬಹುದು. ಆದರೆ ವಾಸ್ತವದಲ್ಲಿ, ಖಾಸಗಿತನವೇ ಇಂದಿನ ಯುಗದಲ್ಲಿ ಅತ್ಯಂತ ಅಗತ್ಯವಾದ ಮಾನಸಿಕ ರಕ್ಷಣಾ ಕವಚವಾಗಿದೆ.

ಎಲ್ಲರೂ ಸ್ನೇಹಿತರಲ್ಲ: ಸಾಮಾಜಿಕ ಸಂಪರ್ಕ ಮತ್ತು ನಿಜವಾದ ಸಂಬಂಧಗಳ ವ್ಯತ್ಯಾಸ

ಸಾಮಾಜಿಕ ಜಾಲತಾಣಗಳಲ್ಲಿ ಸಾವಿರಾರು ಸಂಪರ್ಕಗಳು ಕ್ಷಣದಲ್ಲಿ ಸೃಷ್ಟಿಯಾಗುತ್ತವೆ. ಆದರೆ ಆ ಸಂಪರ್ಕಗಳೆಲ್ಲವೂ ಸಂಬಂಧಗಳಲ್ಲ. ಲೈಕ್, ಕಮೆಂಟ್, ಶೇರ್‌ಗಳು ಸ್ನೇಹದ ಭಾಷೆಯಾಗಿರುವಾಗ, ನಿಜವಾದ ಹಿತೈಷಿತನ ಅಸ್ಪಷ್ಟವಾಗುತ್ತದೆ. ಎಲ್ಲರೂ ನಮ್ಮ ಬದುಕಿನ ಪ್ರೇಕ್ಷಕರಾಗುತ್ತಾರೆ; ಆದರೆ ಎಲ್ಲರೂ ನಮ್ಮ ಒಳಿತನ್ನು ಬಯಸುವವರಾಗಿರಲಾರರು.

ಈ ಭ್ರಮೆಯೇ ಖಾಸಗಿತನಕ್ಕೆ ಮೊದಲ ಬಿರುಕು. ಎಲ್ಲರ ಮುಂದೆ ಎಲ್ಲವನ್ನೂ ತೆರೆದಿಡುವ ಮನೋಭಾವ ವ್ಯಕ್ತಿಯನ್ನು ಎಚ್ಚರಿಕೆಯಿಂದ ದೂರ ಮಾಡುತ್ತದೆ. ಸಂಬಂಧಗಳಿಗೆ ಗಡಿ ಬೇಕು ಎಂಬ ಅರಿವು ಇಲ್ಲದಾಗ, ಬದುಕು ಅತಿಯಾಗಿ ಬಹಿರಂಗವಾಗಿ, ಅತಿಯಾಗಿ ಅಸುರಕ್ಷಿತವಾಗುತ್ತದೆ.

**ಸಾಮಾಜಿಕ ಜಾಲತಾಣ ; ವಿವರಣೆ ನೀಡಬೇಕಾದ ಬದುಕು:** ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತಿಯ ಬದುಕು ಸಾರ್ವಜನಿಕ ಚರ್ಚೆಯ ವಿಷಯವಾಗುತ್ತದೆ. ಒಂದು ಪೋಸ್ಟ್ ಹಾಕಿದ ಕ್ಷಣದಿಂದಲೇ, ಅಭಿಪ್ರಾಯಗಳು, ತೀರ್ಪುಗಳು, ಹೋಲಿಕೆಗಳು ಆರಂಭವಾಗುತ್ತವೆ. ಇದರಿಂದ ವ್ಯಕ್ತಿ ತನ್ನದೇ ಆದ ಆಯ್ಕೆಗಳಿಗೂ ನಿರಂತರವಾಗಿ ಸಮರ್ಥನೆ ನೀಡಬೇಕಾದ ಸ್ಥಿತಿಗೆ ತಲುಪುತ್ತಾನೆ.

ಖಾಸಗಿತನ ಇಲ್ಲದ ಬದುಕು, ವಿವರಣೆ ನೀಡುವ ಬದುಕಾಗುತ್ತದೆ. ಯಾವ ನಿರ್ಧಾರವೂ ಸಂಪೂರ್ಣವಾಗಿ ವೈಯಕ್ತಿಕವಾಗಿರದೆ, ಸಮಾಜದ ಒಪ್ಪಿಗೆಗೆ ಒಳಪಟ್ಟಂತೆ ಕಾಣುತ್ತದೆ. ಆದರೆ ಬದುಕು ಎಂದರೆ ಪ್ರತಿಯೊಂದು ಹೆಜ್ಜೆಗೂ ಉತ್ತರ ಬರೆಯುವ ಪರೀಕ್ಷೆ ಅಲ್ಲ. ಕೆಲವು ವಿಷಯಗಳು ಒಳಗೇ ಉಳಿದಾಗ ಮಾತ್ರ, ಅವು ವ್ಯಕ್ತಿಯನ್ನು ಗಟ್ಟಿಗೊಳಿಸುತ್ತವೆ.

**ಲೈಕ್‌ಗಳ ಅರ್ಥ ಮತ್ತು ಸಂತೋಷದ ವ್ಯಾಖ್ಯಾನ:** ಸಾಮಾಜಿಕ ಜಾಲತಾಣಗಳೊಂದಿಗೆ ಸಂತೋಷದ ಅರ್ಥವೇ ಬದಲಾಗಿದೆ. ಒಳಗಿನ ತೃಪ್ತಿಯ ಬದಲು, ಹೊರಗಿನ ಪ್ರತಿಕ್ರಿಯೆಗಳು ನಮ್ಮ ಮನಸ್ಥಿತಿಯನ್ನು ನಿರ್ಧರಿಸುತ್ತಿವೆ. ಹೆಚ್ಚು ಲೈಕ್ ಬಂದರೆ ಸಂತೋಷ, ಕಡಿಮೆಯಾದರೆ ಅನುಮಾನ. ಈ ಅವಲಂಬನೆ ಮನಸ್ಸನ್ನು ನಿಧಾನವಾಗಿ ದುರ್ಬಲಗೊಳಿಸುತ್ತದೆ.

ಖಾಸಗಿತನ ಈ ಅವಲಂಬನೆಯನ್ನು ಕಡಿಮೆ ಮಾಡುತ್ತದೆ. ಎಲ್ಲವನ್ನೂ ಹಂಚಿಕೊಳ್ಳಬೇಕಿಲ್ಲ ಎಂಬ ಅರಿವು ವ್ಯಕ್ತಿಯನ್ನು ಹೊರಗಿನ ಮಾನ್ಯತೆಯ ಬಂಧನದಿಂದ ಮುಕ್ತಗೊಳಿಸುತ್ತದೆ. ಮೌನದಲ್ಲಿ ಬೆಳೆದ ಸಂತೋಷ, ಪರದೆಯ ಮೇಲಿನ ಮೆಚ್ಚುಗೆಗಿಂತ ಗಟ್ಟಿಯಾಗಿರುತ್ತದೆ.

**ಮಾನಸಿಕ ಆರೋಗ್ಯ ಮತ್ತು ನಿರಂತರ ಹೋಲಿಕೆ:** ಸಾಮಾಜಿಕ ಜಾಲತಾಣಗಳು ಹೋಲಿಕೆಯನ್ನು ಸಹಜಗೊಳಿಸಿವೆ. ಇತರರ ಆಯ್ದ ಕ್ಷಣಗಳನ್ನು, ಸಂಪೂರ್ಣ ಬದುಕಿನಂತೆ ನೋಡುವ ಮನೋಭಾವ ವ್ಯಕ್ತಿಯಲ್ಲಿ ಅಸಮಾಧಾನ, ಆತಂಕ, ಅಸ್ಥಿರತೆಯನ್ನು ಹುಟ್ಟಿಸುತ್ತದೆ. ಈ ಹೋಲಿಕೆ ಸಂಸ್ಕೃತಿಯೇ ಮಾನಸಿಕ ಆರೋಗ್ಯದ ಮೇಲೆ ದೊಡ್ಡ ಹೊಡೆತ.

ಖಾಸಗಿತನ ಈ ಹೋಲಿಕೆಗೆ ತಡೆಗೋಡೆಯಾಗುತ್ತದೆ. ಎಲ್ಲವೂ ಸಾರ್ವಜನಿಕವಾಗದಿದ್ದಾಗ, ಸ್ಪರ್ಧೆ



ಕಡಿಮೆಯಾಗುತ್ತದೆ. ಸ್ಪರ್ಧೆ ಕಡಿಮೆಯಾದಾಗ, ಮನಸ್ಸು ತನ್ನದೇ ಆದ ಗತಿಯಲ್ಲೇ ಸಾಗಲು ಆರಂಭಿಸುತ್ತದೆ. ಇದು ಆತ್ಮಸ್ಥೈರ್ಯಕ್ಕೆ ಅತ್ಯಂತ ಅಗತ್ಯ.

ಮಾಹಿತಿ, ತಂತ್ರಜ್ಞಾನ ಮತ್ತು ಭದ್ರತೆ: ಇಂದಿನ ಯುಗದಲ್ಲಿ ಮಾಹಿತಿ ಎಂದರೆ ಶಕ್ತಿ. ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವ ಪ್ರತಿಯೊಂದು ವಿವರ ಡೇಟಾವಾಗಿ ಉಳಿಯುತ್ತದೆ. ಅದು ಕೇವಲ ನೆನಪುಗಳಲ್ಲ; ಅದು ಭದ್ರತೆಗೆ ಸಂಬಂಧಿಸಿದ ವಿಷಯ.

ಖಾಸಗಿತನ ಎಂದರೆ ತಂತ್ರಜ್ಞಾನವನ್ನು ತಿರಸ್ಕರಿಸುವುದಲ್ಲ. ಅದು ತಂತ್ರಜ್ಞಾನವನ್ನು ವಿವೇಕಪೂರ್ವಕವಾಗಿ ಬಳಸುವ ಮನಸ್ಥಿತಿ. ಎಲ್ಲವನ್ನೂ ತಕ್ಷಣವೇ ಹಂಚಿಕೊಳ್ಳಬೇಕೆಂಬ ತವಕವನ್ನು ನಿಯಂತ್ರಿಸುವುದು ವೈಯಕ್ತಿಕ ಜವಾಬ್ದಾರಿಯ ಭಾಗವಾಗಿದೆ.

ಸಂಬಂಧಗಳ ಮೇಲ್ಮೈತನ ಮತ್ತು ಖಾಸಗಿತನದ ಅಗತ್ಯ: ಸಾಮಾಜಿಕ ಜಾಲತಾಣಗಳಲ್ಲಿ ಸಂಬಂಧಗಳು ಬಹುಸಾರಿ ಪ್ರದರ್ಶನದ ಭಾಗವಾಗುತ್ತವೆ. ಸಂಬಂಧಗಳ ಆಳಕ್ಕಿಂತ, ಅವು ಹೇಗೆ ಕಾಣಿಸುತ್ತವೆ ಎಂಬುದಕ್ಕೆ ಹೆಚ್ಚಿನ ಮಹತ್ವ ಸಿಗುತ್ತದೆ. ಇದರಿಂದ ಸಂಬಂಧಗಳು ಶಬ್ದಮಯವಾಗುತ್ತವೆ; ಆದರೆ ಅರ್ಥದಲ್ಲಿ ಕುಗ್ಗುತ್ತವೆ.

ಖಾಸಗಿತನ ಸಂಬಂಧಗಳಿಗೆ ನಿಜತ್ವವನ್ನು ತರುತ್ತದೆ. ಎಲ್ಲವನ್ನೂ ಸಾರ್ವಜನಿಕವಾಗಿ ತೋರಿಸುವ ಅಗತ್ಯವಿಲ್ಲದಾಗ, ಸಂಬಂಧಗಳು ಮೌನದಲ್ಲಿ ಬೆಳೆದು, ಬಲವಾಗುತ್ತವೆ. ನಂಬಿಕೆ ಮತ್ತು ಗೌರವ ಅಲ್ಲಿ ಸಹಜವಾಗಿ ಬೆಳೆಯುತ್ತವೆ.

**ಸ್ವಾತಂತ್ರ್ಯ, ಸ್ವಾಭಿಮಾನ ಮತ್ತು ಗಡಿ:** ಸಾಮಾಜಿಕ ಜಾಲತಾಣಗಳ ನಿರಂತರ ಹಾಜರಾತಿ ವ್ಯಕ್ತಿಯ ಸ್ವಾತಂತ್ರ್ಯವನ್ನು ಕುಗ್ಗಿಸುತ್ತದೆ. ಏನು ಹಂಚಿಕೊಳ್ಳಬೇಕು, ಹೇಗೆ ತೋರಿಸಬೇಕು ಎಂಬ ಅಲಿಖಿತ ನಿಯಮಗಳು ವ್ಯಕ್ತಿಯ ನಡೆ?ನಿಲುವನ್ನು ನಿಯಂತ್ರಿಸುತ್ತವೆ.

ಖಾಸಗಿತನ ಈ ನಿಯಂತ್ರಣದಿಂದ ಮುಕ್ತಿ ನೀಡುತ್ತದೆ. ಗಡಿ ಹಾಕಿಕೊಳ್ಳುವುದು ದೂರ ಹೋಗುವುದು ಅಲ್ಲ; ಅದು ಆತ್ಮರಕ್ಷಣೆಯ ಒಂದು ವಿಧಾನ. ಆ ಗಡಿಯೊಳಗೆ ವ್ಯಕ್ತಿಯ ಸ್ವಾಭಿಮಾನ ಸುರಕ್ಷಿತವಾಗಿರುತ್ತದೆ.

ಶಬ್ದದ ಯುಗದಲ್ಲಿ ಕಳೆದುಹೋಗುತ್ತಿರುವ ಮೌನ: ಸಾಮಾಜಿಕ ಜಾಲತಾಣಗಳಲ್ಲಿ ಮೌನಕ್ಕೆ ಜಾಗವಿಲ್ಲ. ಪ್ರತಿಕ್ರಿಯೆ ನೀಡಬೇಕು, ತೋರಿಸಬೇಕು, ಮಾತನಾಡಬೇಕು ಎಂಬ ಒತ್ತಡವೇ ಸಾಮಾನ್ಯವಾಗಿದೆ. ಆದರೆ ಮೌನವೇ ಅನೇಕ ಬಾರಿ ಆತ್ಮಪರಿಶೀಲನೆಯ ಮೂಲ. ಖಾಸಗಿತನ ಮೌನಕ್ಕೆ ಮರಳಿ ಸ್ಥಾನ ನೀಡುತ್ತದೆ. ಎಲ್ಲವನ್ನೂ ಹೇಳಬೇಕಿಲ್ಲ ಎಂಬ ಅರಿವು ವ್ಯಕ್ತಿಯನ್ನು ಒಳಗಿನಿಂದ ಗಟ್ಟಿಗೊಳಿಸುತ್ತದೆ. ಮೌನದಲ್ಲಿಯೇ ಬದುಕಿನ ಅರ್ಥ ಸ್ಪಷ್ಟವಾಗುತ್ತದೆ. ಸಾಮಾಜಿಕ ಜಾಲತಾಣಗಳು ನಮ್ಮ ಬದುಕಿನ ಭಾಗವಾಗಿರುವುದು ತಪ್ಪಲ್ಲ. ಆದರೆ ಅವು ನಮ್ಮ ಬದುಕನ್ನು ನಿರ್ಧರಿಸಲು ಆರಂಭಿಸಿದಾಗ ಸಮಸ್ಯೆ ಹುಟ್ಟುತ್ತದೆ. ಖಾಸಗಿತನ ಕಳೆದುಕೊಂಡ ಬದುಕು ಶಬ್ದದಲ್ಲಿ ಮುಳುಗುತ್ತದೆ; ಆದರೆ ಶಾಂತಿಯಲ್ಲಿ ಕೊರತೆ ಅನುಭವಿಸುತ್ತದೆ.

ಎಲ್ಲವನ್ನೂ ಪೋಸ್ಟ್ ಮಾಡಬೇಕಿಲ್ಲ.
ಎಲ್ಲವನ್ನೂ ತೋರಿಸಬೇಕಿಲ್ಲ.
ಎಲ್ಲರ ಒಪ್ಪಿಗೆಯೇ ಸಂತೋಷದ ಮಾನದಂಡವಲ್ಲ.
ಡಿಜಿಟಲ್ ಗದ್ದಲದ ನಡುವೆ, ಖಾಸಗಿತನವೇ ನಿಜವಾದ ಐಶ್ವರ್ಯ.
ಅದನ್ನು ಉಳಿಸಿಕೊಂಡವನೇ ನಿಜವಾಗಿ ಶ್ರೀಮಂತ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

# ಬೋರ್ಡ್ ಪರೀಕ್ಷೆಗಳು ಹಾಗೂ ಮಕ್ಕಳ ಮನಸ್ಥಿತಿ



| ವೀಣಾ ಹೇಮಂತ್‌ಗೌಡ ಪಾಟೀಲ್

ಫೆಬ್ರುವರಿ ತಿಂಗಳು ಬಂತೆಂದರೆ ಸಾಕು ಎಲ್ಲರ ಮನೆಗಳಲ್ಲೂ ಒಂದು ರೀತಿಯ ಗಂಭೀರ ಆತಂಕದ ವಾತಾವರಣ. ಮಕ್ಕಳಿಂದ ಹಿಡಿದು ಮನೆಯ ಹಿರಿಯರವರೆಗೆ ಎಲ್ಲರಲ್ಲೂ ಒಂದು ರೀತಿಯ ಮೌನ. ಇಡೀ ಮನೆಯಲ್ಲಿ ಕರ್ಫ್ಯೂ ವಿಧಿಸಿದ ಹಾಗೆ ತೋರುವ ಭಾವ. ಮನೆಯಲ್ಲಿ ಮಕ್ಕಳು ಯಾವ ಯಾವ ಸಮಯಕ್ಕೆ ಏನೇನು ಮಾಡಬೇಕು ಎಂಬುದರ ಕುರಿತಾದ ಟೈಮ್ ಟೇಬಲ್ ಗಳು ಮಕ್ಕಳ ಕೊಠಡಿಯ ಬಾಗಿಲುಗಳ ಹಿಂದೆ ಮಾತ್ರವಲ್ಲ ಬದಲಾಗಿ ಮನೆಯ ಊಟದ ಮೇಜಿನ ಬಳಿ, ಫ್ರಿಡ್ಜಿನ ಬಾಗಿಲ ಬಳಿ ಮತ್ತು ಹಲವೆಡೆ ಅಂಟಿಸಲ್ಪಡುತ್ತದೆ. ಪದೇ ಪದೇ ಮಕ್ಕಳಿಗೆ ಬೋರ್ಡ್ ಎಕ್ಸಾಮ್ ಹತ್ತಿರ ಬರುತ್ತಿರುವ ಕುರಿತು ನೆನಪಿಸುತ್ತ ಪಾಲಕರು ಒಂದು ವಿಧವಾದ ಅಶಾಂತತೆಯನ್ನು ತಾವು ಅನುಭವಿಸುವ ಮೂಲಕ ಮಕ್ಕಳಲ್ಲೂ ಭಯವನ್ನು ಬಿತ್ತುವಂತಹ ವಾತಾವರಣ.


ಇನ್ನು ಸಂಬಂಧಿಗಳು ಯಾವುದಾದರೂ ಮದುವೆ, ಮುಂಜಿ, ಗೃಹಪ್ರವೇಶದಂತಹ ಕಾರ್ಯಕ್ರಮಗಳಲ್ಲಿ ಮಕ್ಕಳನ್ನು ನೋಡಿದಾಗ ಅರೆ ಬೋರ್ಡ್ ಎಕ್ಸಾಮ್ ಇದೆ. ಸಮಾರಂಭಕ್ಕೆ ಕರೆದುಕೊಂಡು ಬಂದಿದ್ದೀರಲ್ಲ ಎಂದು ಪಾಲಕರ ಮೇಲೆ ಗೂಬೆ ಕೂರಿಸುವ, ಬೇಜವಾಬ್ದಾರಿ ಪಾಲಕರು ಎಂದು ಶರಾ ಬರೆಯುವ, ಸೀರಿಯಸ ನೆಸ್ ಇಲ್ಲ ಎಂದು ಮಕ್ಕಳನ್ನು ಹೀಯಾಳಿಸುವ ಮೂಲಕ ತಮ್ಮ ವಿಪರೀತ ಕಳಕಳಿಯನ್ನು ತೋರುತ್ತಾರೆ. ಅವರ ವ್ಯಂಗ್ಯದ ಮಾತುಗಳ ಮೊನಚು ಬಾಣಗಳು ತಾಕಿದ ಪಾಲಕರು ಮತ್ತು ಮಕ್ಕಳು ತಾವೇನೋ ಮಹಾಪರಾಧ ಮಾಡಿದ್ದೇವೆ ಎಂಬಂತೆ ತಲೆತಗ್ಗಿಸುತ್ತಾರೆ.

ಮತ್ತೆ ಕೆಲ ಪಾಲಕರು ತಮ್ಮ ಸಂಭಾಷಣೆಯನ್ನು ಬದಲಿಸಿ ಈ ಹಿಂದಿನ ಪರೀಕ್ಷೆಗಳಲ್ಲಿ ಎಷ್ಟು ಅಂಕಗಳನ್ನು ಗಳಿಸಿದೆ ಎಂದು ಕೇಳುವ ಬದಲಾಗಿ ಈ ಹಿಂದೆ ಮಾಡಿದ ತಪ್ಪುಗಳು ಯಾವುದು ಎಂದು ನಿನಗೆ ಗೊತ್ತಾಗಿದೆಯಷ್ಟೇ... ಮುಂದೆ ಅವುಗಳು ಪುನರಾವರ್ತನೆಯಾಗದಂತೆ ನೋಡಿಕೋ ಎಂದು ಹೇಳುತ್ತಾರೆ.

ಈಗಾಗಲೇ ಬೋರ್ಡ್ ಪರೀಕ್ಷೆಗಳನ್ನು ಎದುರಿಸಿ ಉತ್ತಮ ಅಂಕಗಳನ್ನು ಗಳಿಸಿರುವ ಪಾಲಕರು ತಲೆಯ ಮೇಲೆ ಹೆಮ್ಮೆಯ ಕೋಡುಗಳನ್ನು ಹೊಂದಿದ್ದು ಅಯ್ಯೋ ನನ್ನ ಮಗನನ್ನು / ಮಗಳನ್ನು ಈ ಹಂತಕ್ಕೆ ತರಲು ನಾವು ಕಳೆದ ಮೂರು ವರ್ಷಗಳಿಂದ ನಿದ್ರೆ ಆಹಾರಗಳನ್ನು ತೊರೆದಿದ್ದೇವೆ. ಅವರ ಟೈಮ್ ಟೇಬಲ್ ನ ಪ್ರಕಾರ ಅವರನ್ನು ಎಬ್ಬಿಸಿ ಅವರ ಓದಿಗೆ ಸಹಾಯವಾಗುವ ನಿಟ್ಟಿನಲ್ಲಿ ಎಲ್ಲ ರೀತಿಯ ಅನುಕೂಲಗಳನ್ನು ಮಾಡಿಕೊಡುವುದರಲ್ಲಿ ನಾವು ಗಂಟೆಗಟ್ಟಲೆ ಪರಿಶ್ರಮ ಪಟ್ಟಿದ್ದೇವೆ. ಅದರಲ್ಲೂ ನಮ್ಮ ಮನೆಯಲ್ಲಿ ಟಿವಿ ಕೂಡ ಇಲ್ಲ ಮೊಬೈಲ್ಗೆ ನೆಟ್ ಹಾಕಿಸುವುದನ್ನು ಕೂಡ ಬಿಟ್ಟಿದ್ದೇವೆ ಎಂದು ಹೇಳುವ ಪಾಲಕರು ನಮ್ಮ ಮಕ್ಕಳು ಯಾವುದೇ ರೀತಿಯ ಆಟಗಳಲ್ಲಿ ಭಾಗವಹಿಸಲ್ಲ.... ಭಾಗವಹಿಸಲು ಸಮಯವಾದರೂ ಎಲ್ಲಿದೆ ಅವರ ಎಲ್ಲಾ ಸಮಯ ಗಣಿತದ ಲೆಕ್ಕವನ್ನು ಬಿಡಿಸಲು ವಿಜ್ಞಾನದ ಹೇಳಿಕೆಗಳನ್ನು ಕಲಿಯಲು, ಇತಿಹಾಸ ಪೌರ ನೀತಿಗಳನ್ನು ಅರ್ಥ ಮಾಡಿಕೊಳ್ಳಲು ಹಾಗೂ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಪರೀಕ್ಷೆಗೆ ಬೇಕಾಗುವ ಅತ್ಯವಶ್ಯಕವಾದ ವಿಷಯಗಳನ್ನು ಅರಿತುಕೊಳ್ಳಲು ಅವರ ಎಲ್ಲ ಸಮಯ ವ್ಯಯವಾಗುತ್ತದೆ ಇನ್ನು ಹಾಡು ನೃತ್ಯ ಕುಣಿತಗಳಿಗೆ ಎಲ್ಲಿಂದ ಸಮಯವನ್ನು ಹೊಂದಿಸೋಕೆ ಆಗುತ್ತೆ....

ನಮ್ಮ ಮಗು ಎಲ್ ಕೆ ಜಿ ಇಂದ ಹಿಡಿದು ಇಲ್ಲಿಯವರೆಗೂ ಒಂದೇ ಒಂದು ತರಗತಿಯಲ್ಲಿಯೂ ತನ್ನ ಫಸ್ಟ್ ರಾಂಕ್ ಅನ್ನು ಬಿಟ್ಟು ಕೊಟ್ಟಿಲ್ಲ ಎಂದು ಹೇಳುತ್ತಾರೆ.

ಇನ್ನು ಸಭೆ ಸಮಾರಂಭಗಳಿಗಂತೂ ಅಯ್ಯೋ! ಅಮ್ಮ ಅಲ್ಲಿಗೆಲ್ಲಾ ಕರೆದು ನನ್ನ ಟೈಮ್ ವೇಸ್ಟ್ ಮಾಡಬೇಡಿ ಅಂತ ಖಂಡಿತವಾಗಿ ಹೇಳಿಬಿಡುತ್ತಾರೆ ನಿಜ ಸೋಶಲೈಸಿಂಗ್ ನಲ್ಲಿ ತುಂಬಾ ಸಮಯ ಹೋಗಿಬಿಡುತ್ತದೆ...... ಎಂದು ಅವರು ತಮ್ಮ ಹೆಗ್ಗಳಿಕೆಯನ್ನು ಹೇಳಿಕೊಳ್ಳುತ್ತಾ ಸಮಾರಂಭಗಳಿಗೆ ಮಕ್ಕಳನ್ನು ಕರೆದುಕೊಂಡು ಬಂದ ಪಾಲಕರಿಗೆ ಜವಾಬ್ದಾರಿಯ ಅರಿವನ್ನು ಮೂಡಿಸುವ ರೀತಿಯಲ್ಲಿ ಬುದ್ಧಿ ಹೇಳುತ್ತ ಅವರ ಕೀಳರಿಮೆಯನ್ನು ಹೆಚ್ಚಿಸುತ್ತಾ



ಹೋಗುತ್ತಾರೆ.... ಇವರು ಹೂಗುಟ್ಟುತ್ತಾ ಹೋದಷ್ಟು ಅವರ ವ್ಯರ್ಥ ಪ್ರಲಾಪ ಮುಂದುವರೆಯುತ್ತಲೇ ಸಾಗುತ್ತದೆ.... ಹಾಗೆಂದು ಅವರು ಅತಿಯಾದ ಕಾಳಜಿ ವಹಿಸಿ ಅವರ ಮಕ್ಕಳನ್ನು ಬೆಳೆಸಿದ್ದು ತಪ್ಪು ಎಂದು ಹೇಳಲು ನಾವು ಯಾರು?

ಶಿಲಾಯುಗದಿಂದ ಇಲ್ಲಿಯವರೆಗೂ ಮನುಷ್ಯ ಬೆಳೆದು ಬಂದಿರುವ ನಾಗರಿಕ ಇತಿಹಾಸವನ್ನು ನೋಡುತ್ತಾ ಹೋದರೆ ಮನುಷ್ಯ ಸಂಘ ಜೀವಿ. ಸಾಮಾಜಿಕ ವ್ಯವಸ್ಥೆಯ ಮಧ್ಯದಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತಾನೆ.

ಇಂತಹ ಸಮಯದಲ್ಲಿ ಮಕ್ಕಳಿಗೆ ಬೇಕಾಗುವುದು ಪಾಲಕರ ಆಸರೆ ಹಾಗೂ ಬೆಂಬಲಗಳು. ಎಂತದ್ದೇ ಪರಿಸ್ಥಿತಿಯಲ್ಲೂ ನಾವು ನಿಮ್ಮೊಂದಿಗಿರುತ್ತೇವೆ ಹೆದರಬೇಡ ಎಂಬ ಪ್ರೀತಿಯ, ಕಳಕಳಿಯ ಮಾತುಗಳು.

ಎಷ್ಟೋ ಬಾರಿ ಮಕ್ಕಳು ತಮ್ಮ ಸುತ್ತಲಿನ ಜನರ, ಸ್ನೇಹಿತರ, ಪಾಲಕರ ಮಾತುಗಳ ಒತ್ತಡದಿಂದ ಬಳಲಿ ಬೆಂಡಾಗುತ್ತಾರೆ ತಮಗೆ ಇರುವ ಕಲಿಕೆಯ ಸಾಮರ್ಥ್ಯವನ್ನು ಕೂಡ ಕಳೆದುಕೊಳ್ಳುವಷ್ಟು ಅವರ ಮೇಲಿನ ಒತ್ತಡ ತನ್ನ ಕರಾಮತ್ತನ್ನು ತೋರಿಸುತ್ತದೆ.

ಅಂಕಗಳು ಒಳ್ಳೆಯ ಕಾಲೇಜನ್ನು, ಉತ್ತಮ ಕೋರ್ಸ್ ಗಳನ್ನು ಆಯ್ದುಕೊಳ್ಳಲು ಅವಶ್ಯಕ ನಿಜ ಆದರೆ ಅದಕ್ಕಾಗಿ ಮಗುವಿನ ಬದುಕನ್ನೇ ಎರವಾಗಿಸುವಷ್ಟು ಅತ್ಯವಶ್ಯಕ ಅಲ್ಲ ಎಂಬ ಸತ್ಯವನ್ನು ಪಾಲಕರಾದಿಯಾಗಿ ಎಲ್ಲರೂ ಅರಿತುಕೊಳ್ಳಬೇಕಾಗುತ್ತದೆ.

ಇಲ್ಲಿ ಮಕ್ಕಳು ಎಲ್ಲರಿಗಿಂತ ತಮ್ಮ ಪಾಲಕರ ಮೇಲೆ ಹೆಚ್ಚು ಅವಲಂಬಿತರಾಗುವುದರಿಂದ ಈ ನಿಟ್ಟಿನಲ್ಲಿ ಪಾಲಕರು ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ತುಂಬಬೇಕಾದದ್ದು ಅವರ ಕರ್ತವ್ಯ.

ಪಾಲಕರು ತಮ್ಮ ಮಕ್ಕಳಿಗೆ, ಅವರು ಓದುವ ಬರೆಯುವ ಅಭ್ಯಸಿಸಲು ಹಾಕುವ ಪ್ರಯತ್ನಕ್ಕೆ ಹೆಚ್ಚು ಮಹತ್ವವನ್ನು ನೀಡಬೇಕೇ ಹೊರತು ಅವರು ಗಳಿಸುವ ಅಂಕಗಳಿಗಲ್ಲ.

ಮಕ್ಕಳು ಮಾಡುವ ತಪ್ಪುಗಳನ್ನು ಹೊಸ ಕಲಿಕೆಗೆ ತೆರೆದುಕೊಳ್ಳಲು ಇರುವ ಅವಕಾಶಗಳು ಎಂದು ಭಾವಿಸಿ ಆ ನಿಟ್ಟಿನಲ್ಲಿ ಅವರನ್ನು ಹೊಸ ಕಲಿಕೆಗೆ ಪ್ರೋತ್ಸಾಹಿಸಬೇಕು.

ಮಕ್ಕಳು ಅನವಶ್ಯಕ ಒತ್ತಡಕ್ಕೆ ಒಳಗಾಗದಂತೆ ಅವರನ್ನು ಮಾತಿನ ಮೂಲಕ ಸಾಂತ್ವನ ಹೇಳಬೇಕು. ಒಂದು ಪುಟ್ಟ ಭರವಸೆಯ ಮಾತು ಹೆಗಲ ಮೇಲೆ ಕೈ ಹಾಕಿ ನೀಡುವ ಸಾಂತ್ವನ, ಮೆದುವಾಗಿ ಕೈ ಕುಲುಕಿ ಕೈಗಳಿಗೆ ಬಲವನ್ನು ತುಂಬುವ ಮೂಲಕ ಅವರ ಭವಿಷ್ಯವನ್ನು ಭದ್ರವಾಗಿಸಬೇಕು... ಆ ಮೂಲಕ ಅವರು ತಮ್ಮ ಮನದ ಭಾವನೆಗಳನ್ನು



ಮುಕ್ತವಾಗಿ ಪಾಲಕರೊಂದಿಗೆ ಹಂಚಿಕೊಳ್ಳುವಂತಹ ಪರಿಸ್ಥಿತಿಯನ್ನು ನಿರ್ಮಿಸಬೇಕು.

ಮಕ್ಕಳು ತಮ್ಮ ತಂದೆ ತಾಯಿಗಳ ಬಳಿಯಲ್ಲಿ ಸುರಕ್ಷಿತತೆಯನ್ನು ಅನುಭವಿಸಬೇಕು... ಮಕ್ಕಳಲ್ಲಿ ಆತ್ಮ ವಿಶ್ವಾಸವನ್ನು ಬೆಳೆಸುವ ರೀತಿಯಲ್ಲಿ ಪಾಲಕರು ವರ್ತಿಸಬೇಕು.

ಅಂಕಗಳು ಉನ್ನತ ಶಿಕ್ಷಣವನ್ನು ಪಡೆಯಲು ಅತ್ಯವಶ್ಯಕ ನಿಜ...ಆದರೆ ಅದಕ್ಕಿಂತಲೂ ಮಹತ್ತರ ವಾದದ್ದು ಮಗುವಿನ ಭಾವನಾತ್ಮಕ ಮನಸ್ಥಿತಿ. ಅತ್ಯಂತ ಒತ್ತಡದ ವಿದ್ಯಾರ್ಥಿ ಜೀವನವನ್ನು ಕಳೆಯುವ ಮಕ್ಕಳು ತಮ್ಮ ಮುಂದಿನ ಬದುಕಿನಲ್ಲಿ ಯಶಸ್ಸನ್ನು ಸಾಧಿಸಿದರೂ ಕೂಡ ಅವರು ಸಾಮಾನ್ಯವಾದ ಬದುಕನ್ನು ಅರಗಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತದೆಯೋ ಇಲ್ಲವೋ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ.

ಹಿಂದಿಯ ಅತ್ಯಂತ ಪ್ರಸಿದ್ಧ ಚಲನಚಿತ್ರ 3 ಈಡಿಯಟ್ಸ್ ನಲ್ಲಿ ತನ್ನ ಇಚ್ಚೆಯ ಕೋರ್ಸ್ ಅನ್ನು ಕಲಿಯುವ ಅವಕಾಶ ಬಂದಾಗ ಸ್ನೇಹಿತನ ಒತ್ತಾಸೆಯ ಮೇರೆಗೆ ಪಾಲಕರ ಬಳಿ ತೆರಳುವ ಚಿತ್ರದ ಕಲಾವಿದ ತನ್ನ ಪಾಲಕರಿಗೆ "ನಾನು ಕಲಿಯುವ ವಿದ್ಯೆಗೆ ಅವಕಾಶಗಳು ಕಡಿಮೆಯಾಗಿ ನನ್ನ ಸಂಬಳ ಕಡಿಮೆ ಬರಬಹುದು. ಕಾರಿನಲ್ಲಿ ಓಡಾಡುವಷ್ಟು ನನಗೆ ಸಂಬಳ ಬರದೆ ಹೋಗಬಹುದು ಆದರೆ ಸ್ಕೂಟರಿನಲ್ಲಿ ಓಡಾಡಿದರೂ ನನ್ನಿಷ್ಟದ ವೃತ್ತಿಯನ್ನು ಮಾಡುವ ಮೂಲಕ ಬದುಕಿನಲ್ಲಿ ಸಂತಸವನ್ನು ಹೊಂದುತ್ತೇನೆ ಅಲ್ಲವೇ ಅಬ್ಬ" ಎಂದು ತನ್ನ ಮನದ ಇಚ್ಚೆಯನ್ನು ತೋಡಿಕೊಂಡಾಗ ಅದನ್ನು ಅರಿತ ತಂದೆ ಆತನಿಗೆ ಆತನ ಇಚ್ಚೆಯ ಫೋಟೋಗ್ರಾಫಿ ಕಲಿಯಲು ಹಸಿರು ನಿಶಾನೆ ತೋರುತ್ತಾರೆ.

ಮಕ್ಕಳನ್ನು ಅರ್ಥೈಸಿಕೊಳ್ಳುವಲ್ಲಿ ಪಾಲಕರು ಎಡವಬಹುದು.. ಎಷ್ಟೋ ಬಾರಿ ಅವರಿಗೆ ಅವರ ಪ್ರತಿಷ್ಠೆಯೇ ಮುಖ್ಯ ಎಂದು ತೋರಬಹುದು ಆದರೆ ಒಂದೊಮ್ಮೆ ಮಕ್ಕಳ ಸಂತೋಷ ಮತ್ತು ನೆಮ್ಮದಿಯ ದೃಷ್ಟಿಯಿಂದ ಯೋಚಿಸತೊಡಗಿಸಿದಾಗ ಖಂಡಿತವಾಗಿಯೂ ಅವರು ಮಕ್ಕಳ ಮಾತಿಗೆ ಒಡಂಬಡುತ್ತಾರೆ.

ಎಲ್ಲಾದರೂ ಇರಲಿ ಹೇಗಾದರೂ ಇರಲಿ ತಮ್ಮ ಮಕ್ಕಳು ನೆಮ್ಮದಿಯ ಬದುಕನ್ನು ಬಾಳಲಿ ಎಂಬುದು ಎಲ್ಲ ಪಾಲಕರ ಸದಿಚ್ಚೆಯಾಗಿರುತ್ತದೆ .

ಯಾವಾಗ ಮನೆಯು ಭಾವನಾತ್ಮಕ ಬೆಂಬಲದ ಕೇಂದ್ರವಾಗುತ್ತದೆಯೋ , ಆಗ ಪರೀಕ್ಷೆಗಳು ಮಕ್ಕಳ ಬದುಕು ಹಾಗೂ ಭವಿಷ್ಯವನ್ನು ರೂಪಿಸುವುದಿಲ್ಲ. ಮಗುವಿನ ಬೆಳವಣಿಗೆ ಅದರ ಮನೋದೈಹಿಕ ಸಾಮರ್ಥ್ಯದ ಬೆಳವಣಿಗೆಯಾಗಿ ತೋರುತ್ತದೆ..... ಹಾಗೂ ಸರ್ವಾಂಗೀಣ ಬೆಳವಣಿಗೆಗೆ ದಾರಿ ಮಾಡಿಕೊಡುತ್ತದೆ. ಕುತೂಹಲ, ಧೈರ್ಯ, ಆತ್ಮವಿಶ್ವಾಸಗಳು ತಂತಾನೆ ಮಗುವಿನಲ್ಲಿ ಪ್ರೇರೇಪಣೆಯನ್ನು ಉಂಟುಮಾಡುತ್ತವೆ ಹಾಗೂ ಅದು ಮಗುವಿನ ಸಕಾರಾತ್ಮಕ ಕಲಿಕೆಗೆ ದಾರಿ ಮಾಡಿಕೊಡುತ್ತದೆ.

ಹೌದಲ್ಲವೇ ಪಾಲಕರೇ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,